ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಎನ್.ಕೆ.ಉಪಾಧ್ಯಾಯ 100



ಸಂಪುಟ 10 | ಸಂಚಿಕೆ 13 | ಪುಟ 16 | ಮಾರ್ಚ್ 27, 2016 | ರೂ. 10/-

web: www.janashakthi.co.in e-mail : js_weekly@yahoo.com

ನಮಗೆ ಬಜೆಟ್ಟಿನಲ್ಲೇನಿದೆ?





ರೈತ, ಕೃಷಿ ಕೂಲಿಕಾರರ ಕೂಗು

ಭ್ರಷ್ಟಾಚಾರ ಅಥವಾ ಲೋಕಾಯುಕ್ತ ನಿಗ್ರಹ?



ಭಗತ್‌ಸಿಂಗ್ ಹಾದಿಯಲ್ಲಿ...



ಸಂಶೋಧಕನ ಆತಂಕಗಳು : ಬಿಳಿಮಲೆ

ಮಲ್ಯ ಭಾನಗಡಿಗಳು



ಬಡವರ ಆದರವಿಲ್ಲದ ‘ಆಧಾರ್’



ಮಾರ್ಚ್ 15: ಪ್ರಜಾಪ್ರಭುತ್ವ ರಕ್ಷಣೆಗೆ ವಿದ್ಯಾರ್ಥಿಗಳ ರ್‍ಯಾಲಿ

ಮಾರ್ಚ್ 15ರಂದು ವಿದ್ಯಾರ್ಥಿಗಳ ಇನ್ನೊಂದು ಬೃಹತ್ ರ್‍ಯಾಲಿಯನ್ನು ದಿಲ್ಲಿ ಕಂಡಿತು. ವಿವಿಧ ವಿದ್ಯಾರ್ಥಿ ಸಂಘಟನೆಗಳ ಕರೆಯ ಮೇರೆಗೆ ದಿಲ್ಲಿ ಮತ್ತು ಜೆಎನ್‌ಯು ವಿದ್ಯಾರ್ಥಿಗಳಲ್ಲದೆ, ರಾಜಸ್ತಾನ, ಹಿಮಾಚಲ ಪ್ರದೇಶ, ಹರಿಯಾಣ, ಪಂಜಾಬ್ ಮತ್ತು ಉತ್ತರಾಖಂಡದ ವಿಶ್ವವಿದ್ಯಾಲಯಗಳ ಸಾವಿರಾರು ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತಿತರರು ಭಾಗವಹಿಸಿದರು. ರಾಜದ್ರೋಹದ ಆಪಾದನೆಯನ್ನು ಹಿಂತೆಗೆದುಕೊಳ್ಳಬೇಕು, ಆ ಕಾನೂನನ್ನು ರದ್ದು ಮಾಡಬೇಕು, ಜೆಎನ್‌ಯು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಬೇಟೆಯನ್ನು ನಿಲ್ಲಿಸಬೇಕು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯವನ್ನು ನಿವಾರಿಸಲು ರೊಹಿತ್ ಕಾನೂನನ್ನು ತರಬೇಕು ಮತ್ತು ಅಧಿಕಾರದ ದುರುಪಯೋಗ ಮಾಡಿರುವ ಹಾಗೂ ಸುಳ್ಳುಗಳನ್ನು ಹೇಳಿರುವ ಸ್ಮೃತಿ ಇರಾನಿ ರಾಜೀನಾಮೆ ನೀಡಬೇಕು ಎಂಬ ಘೋಷಣೆಗಳು ರ್‍ಯಾಲಿಯುದ್ದಕ್ಕೂ ಮೊಳಗಿದವು. ಸಂಸತ್ ಮಾರ್ಗದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಜೆಎನ್‌ಯು ವಿದ್ಯಾರ್ಥಿ ಸಂಘದ ಕನ್ಹೈಯ ಕುಮಾರ್ ಮತ್ತಿತರ ಮುಖಂಡರಲ್ಲದೆ, ಎಡಪಕ್ಷಗಳ ಮುಖಂಡರಾದ ಸೀತಾರಾಮ್ ಯೆಚೂರಿ, ಡಿ.ರಾಜ, ಕವಿತಾ ಕೃಷ್ಣನ್ ಮತ್ತು ಪ್ರತಿಷ್ಠಿತ ಲೇಖಕಿ ಅರುಂಧತಿ ರಾಯ್ ಮಾತಾಡಿದರು.



ಮುಂಬೈ ಕಲೆಕ್ಟಿವ್: ಸ್ವಾತಂತ್ರ್ಯ ಮತ್ತು ಬಹುಳತೆಯನ್ನು ಎತ್ತಿ ಹಿಡಿಯುವ ಕಾರ್ಯಕ್ರಮ

ದೇಶದಲ್ಲಿ ಬಲಪಂಥೀಯ ಶಕ್ತಿಗಳು ಹುಟ್ಟು ಹಾಕಿರುವ ಅಸಹಿಷ್ಣುತೆ ಮತ್ತು ದೇಶಪ್ರೇಮ–ದೇಶದ್ರೋಹದ ಕೃತಕ ವಿವಾದದ ವಾತಾವರಣದಲ್ಲಿ ಸಂವಿಧಾನಿಕ ಹಕ್ಕುಗಳಿಗೆ ದೇಶದ ನಾಗರಿಕರ ಬದ್ಧತೆಯನ್ನು ಪುನರುಚ್ಚರಿಸುವ ಉದ್ದೇಶದಿಂದ ಮತ್ತು ಸ್ವಾತಂತ್ರ್ಯ, ಬಹುಳತೆ, ಏಕತೆ ಮತ್ತು ಸಹಿಷ್ಣುತೆಯ ಆದರ್ಶಗಳನ್ನು ಎತ್ತಿ ಹಿಡಿಯಲು ಮುಂಬೈಯಲ್ಲಿ ನಾಗರಿಕರ ಒಂದು ಗುಂಪು ಮಾರ್ಚ್14–15ರಂದು 'ಮುಂಬೈ ಕಲೆಕ್ಟಿವ್' ಎಂಬ ಎರಡು ದಿನಗಳ ಸಾಮೂಹಿಕ ಕಾರ್ಯಕ್ರಮವನ್ನು ಏರ್ಪಡಿಸಿತು. ಮುಂಬೈಯಲ್ಲಿ ಎಲ್ಲ ರಂಗಗಳ ಜನರನ್ನು ಒಟ್ಟಿಗೆ ತಂದು ಭಾರತದ ಸಮ್ಮಿಶ್ರ ಪರಂಪರೆಯನ್ನು ಬಲವಾಗಿ ಎತ್ತಿ ಹಿಡಿಯುವಂತೆ ಮಾಡುವ ಪ್ರಯತ್ನ ಇದಾಗಿತ್ತು.

ಇದರಲ್ಲಿ ಚರ್ಚೆಗಳು, ಉಪನ್ಯಾಸಗಳು, ಸಂಗೀತ, ನೃತ್ಯ, ಚಿತ್ರಕಲೆ ಮತ್ತು ಬೀದಿ ನಾಟಕ ಮುಂತಾದವುಗಳ ಮೂಲಕ ಸಾಮರಸ್ಯ, ಸೌಹಾರ್ದತೆ ಮತ್ತು ಪ್ರತಿಭಟನೆಯ ಸಾಂಸ್ಕೃತಿಕ ಅಭಿವ್ಯಕ್ತಿಗಳು ಸೇರಿದ್ದವು.


ಜಾತ್ಯತೀತತೆಯ ಭವಿಷ್ಯ, ಸಾಕ್ಷ್ಯಾಧಾರಿತ ಇತಿಹಾಸದ ಮೇಲೆ ದಾಳಿ, ಜಾತ್ಯತೀತ ಶಿಕ್ಷಣದ ಮೇಲೆ ದಾಳಿ,, ಜಾತಿ, ಪಿತೃಪ್ರಾಧಾನ್ಯತೆ, ಕೋಮುವಾದಿ ತತ್ವಗಳ ನಡುವಿನ ಸಂಬಂಧ, ವಿಜ್ಞಾನ ಮತ್ತು ತರ್ಕದ ಮೇಲೆ ದಾಳಿ, ಈ ಕಳವಳದ ದಿನಗಳಲ್ಲಿ ಮಾಧ್ಯಮಗಳ ಪಾತ್ರ ಮುಂತಾದ ವಿಷಯಗಳ ಮೇಲೆ ಸಂವಾದಗಳು ನಡೆದವು.

ಇತಿಹಾಸಜ್ಞರಾದ ಪ್ರೊ. ಕೆ.ಎಂ.ಶ್ರೀಮಾಲಿ, ಪ್ರೊ. ಇರ್ಫಾನ್ ಹಬೀಬ್, ಗಣಿತಶಾಸ್ತ್ರಜ್ಞ ಪ್ರೊ. ಎಂ.ಎಸ್. ರಘುನಾಥನ್,ಜೀವಶಾಸ್ತ್ರಜ್ಞರಾದ ಡಾ. ಡಿ. ಬಾಲಸುಬ್ರಮಣ್ಯಂ, ಪತ್ರಕರ್ತ ಎನ್.ರಾಮ್, ಪ್ರಕಾಶ ಅಂಬೇಡ್ಕರ್, ಅಶೋಕ ಧವಳೆ, ಡಿ.ರಾಜ ,ಸೀತಾರಾಮ್ ಯೆಚೂರಿ ಅಲ್ಲದೆ ಹಲವಾರು ಕಲಾಜಗತ್ತಿನ ಪ್ರತಿಷ್ಠಿತರು ಇದರಲ್ಲಿ ಭಾಗವಹಿಸಿದ್ದರು.

ಸೀತಾರಾಮ್ ಯೆಚುರಿಯವರು ಮಾತಾಡುತ್ತ "ಇಂದು ಜೈಭೀಮ್ ಘೋಷಣೆ, ಲಾಲ್ ಸಲಾಮ್ ಘೋಷಣೆ ಎಲ್ಲವೂ ಭಗತ್‌ಸಿಂಗ್ ಎತ್ತಿದ 'ಇಂಕ್‌ಲಾಬ್ ಜಿಂದಾಬಾದ್' ಘೋಷಣೆಯಲ್ಲಿ ಮಿಳಿತಗೊಂಡು ಇದು ನಮ್ಮ ಸಂವಿಧಾನವನ್ನು ರಕ್ಷಿಸುವ ಮತ್ತು ಅದನ್ನು ಇನ್ನೂ ಉತ್ತಮಗೊಳಿಸುವ ಕ್ರಾಂತಿಯ ಹೋರಾಟಕ್ಕೆ ನಾಂದಿಯಾಗಲಿ, ಈ ಮುಂಬೈ ಕಲೆಕ್ಟಿವ್ ಸ್ಫೂರ್ತಿಯಿಂದ ಮುಂದಿನ ತಿಂಗಳುಗಳಲ್ಲಿ ಹೈದರಾಬಾದ್ ಕಲೆಕ್ಟಿವ್, ಜೈಪುರ್ ಕಲೆಕ್ಟಿವ್ ಇತ್ಯಾದಿಗಳ ಮೂಲಕ ಒಂದು ದೇಶವ್ಯಾಪಿ ಆಂದೋಲನವಾಗಿ, ಇಂದು ಕಾಣುವ ಅಸಹಿಷ್ಣುತೆಯ ವಿರುದ್ಧ ದೇಶವ್ಯಾಪಿ ಪ್ರತಿಭಟನೆಯಾಗಿ ಬೆಳೆಯಲಿ" ಎಂದರು.

ªÀiÁvÉAzÀgÉ EzÀÄ

ಹಿಂದೂ ಸಮಾಜ ಎಂಬುದೊಂದು ಇಲ್ಲ. ಅದು ಹಲವು ಜಾತಿಗಳ ಸಮೂಹ ಅಷ್ಟೇ. ಪ್ರತಿಯೊಂದು ಜಾತಿಗೆ ತನ್ನ ಅಸ್ತಿತ್ವದ ಬಗ್ಗೆ ಮಾತ್ರ ಗೊತ್ತು. ಅದರ ಉಳಿವು ಮಾತ್ರ ಅದರ ಅಸ್ತಿತ್ವದ ಪರಮ ಮತ್ತು ಏಕಮಾತ್ರ ಉದ್ದೇಶ.



– ಡಾ. ಬಿ. ಆರ್. ಅಂಬೇಡ್ಕರ್

ಹರಿಯಾಣ: ಮುರ್ತಾಲ ಅತ್ಯಾಚಾರದ ಉನ್ನತ ಮಟ್ಟದ ತನಿಖೆ-ಪಂಜಾಬ್-ಹರಿಯಾಣ ಮುಖ್ಯ ನ್ಯಾಯಾಧೀಶರಿಗೆ ಮಹಿಳಾ ಸಂಘಟನೆಗಳ ಮನವಿ



ಫೆಬ್ರುವರಿ 22ರ ಮುಂಜಾನೆ. ಜಾಟ್ ಮೀಸಲಾತಿ ಚಳುವಳಿ ಹಿಂಸಾತ್ಮಕ ಸ್ವರೂಪ ತಳೆದಿದ್ದಾಗ ವಾಹನಗಳನ್ನು ತಡೆದು ಬೆಂಕಿ ಹಾಕುತ್ತಿದ್ದುದರಿಂದ ಚಂಡೀಗಡ–ದಿಲ್ಲಿ ಹೆದ್ದಾರಿಯಲ್ಲಿ ದಿಲ್ಲಿಯಿಂದ 50 ಕಿ.ಮೀ. ದೂರದಲ್ಲಿರುವ ಮುರ್ತಾಲ ಎಂಬಲ್ಲಿ ಸಿಲುಕಿಕೊಂಡಿದ್ದ 10 ಮಹಿಳೆಯರ ಮೇಲೆ 30 ಗೂಂಡಾಗಳ ಪಡೆಯೊಂದು ಅತ್ಯಾಚಾರ ನಡೆಸಿದ ಘಟನೆ ಇಡೀ ದೇಶದ ಪ್ರಜ್ಞೆಯನ್ನು ಕಲಕಿದೆ. ಈ ಕರಾಳ ಘಟನೆಗಿಂತ ಹೆಚ್ಚಾಗಿ ಅದನ್ನು ಮುಚ್ಚಿ ಹಾಕಲು ಹರಿಯಾಣದ ಪೋಲೀಸ್ ಮತ್ತು ಹರಿಯಾಣ ಸರಕಾರದ ಪ್ರಯತ್ನ ರಾಜ್ಯದ ಮತ್ತು ದೇಶದ ಜನ ನಾಚಿಕೆಯಿಂದ ತಲೆ ತಗ್ಗಿಸುವಮತೆ ಮಾಡಿದೆ.

ಮೊದಲಿಗೆ, ಇಂತಹ ಒಂದು ಘಟನೆ ನಡೆದೇ ಇಲ್ಲ ಎಂದು ನಂಬಿಸಲು ಹರಿಯಾಣದ ಪೋಲಿಸ್ ಮತ್ತು ಸರಕಾರದ ಪ್ರಯತ್ನ ವಿಫಲವಾದ ಮೇಲೆ ಒಂದು ವಿಶೇಷ ತನಿಖಾ ತಂಡ(ಎಸ್‌ಐಟಿ)ವನ್ನೇನೋ ರಚಿಸಲಾಯಿತು. ಆದರೆ ಅದರಿಂದ ಸತ್ಯ ಹೊರಬರುವ ಲಕ್ಷಣಗಳು ಕಾಣಲಿಲ್ಲ. ಏಕೆಂದರೆ ಪೋಲೀಸರು ಈ ಅತ್ಯಾಚಾರಗಳ ನಡೆದ ರೀತಿಯಲ್ಲಿ ಅತ್ಯಾಚಾರಿಗಳನ್ನು ಹಿಡಿಯಲಂತೂ ಸಆಧ್ಯವಿಲ್ಲ, ಅದರ ಬದಲಿಗೆ ಅತ್ಯಾಚಾರಕ್ಕೆ ಒಳಗಾಗಿರುವವರ ಮಾನ ಹರಾಜಾಗುವುದು ತಪ್ಪುತ್ತದೆ, ಆದ್ದರಿಮದ ಈ ಬಗ್ಗೆ ದೂರು ಕೊಡಲು ಮುಂದೆ ಬರಬಾರದು ಎಂದೂ, ಅತ್ಯಾಚಾರಗಳನ್ನು ಎದುರಿಸಿದವರಿಗೆ ಮತ್ತು ಅತ್ಯಾಚಾರಗಳನ್ನು ಕಣ್ಣಾರೆ ಕಂಡ ಆ ಹಳ್ಳಿಯ ಜನ ಬಾಯಿ ಬಿಡದಂತೆ ಮಾಡಿದ್ದಾರೆ ಎಂಬ ಅನುಮಾನ ಉಂಟಾಗಿದೆ, ಹಳ್ಳಿಗರು ಬಾಯಿಬಿಟ್ಟರೆ ಆ ಹಳ್ಳಿಯ ಯುವಜನರನ್ನು ಇದರಲ್ಲಿ ಸಿಗಿಸುವುದಾಗಿ ಬೆದರಿಕೆ ಹಾಕಲಾಗಿತ್ತಂತೆ.

ಇದನ್ನು ವಿರೋಧಿಸಿ ಅತ್ಯಾಚಾರ ನಡೆದ ಸ್ಥಳದಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಮತ್ತಿತರ ಏಳು ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಅಲ್ಲಿನ ಮುಖ್ಯ ಜ್ಯುಡಿಶಿಯಲ್ ಮ್ಯಾಜಿಸ್ಟ್ರೇಟ್ ಮೂಲಕ ಪಂಜಾಬ್ –ಹರಿಯಾಣ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಿಗೆ ಮನವಿಯೊಂದನ್ನು ಸಲ್ಲಿಸಲಾಯಿತು.

ಈ ವಿಷಯದಲ್ಲಿ ಹರಿಯಾಣ ಪೋಲಿಸ್ ಮತ್ತು ಆಡಳಿತದ ಅನುಮಾನಾಸ್ಪದ ಪಾತ್ರದ ಹಿನ್ನೆಲೆಯಲ್ಲಿ ಅವರಿಂದ ನ್ಯಾಯದ ನಿರೀಕ್ಷೆ ಸಾಧ್ಯವಿಲ್ಲವಾದ್ದರಿಂದ ಸತ್ಯವನ್ನು ಹೊರಗೆಳೆಯಲು ಮತ್ತು ಇಂತಹ ಅಪರಾಧ ಎಸಗುವವರಿಗೆ ಬಲವಾದ ಸಂದೇಶ ನೀಡಲು ಒಂದು ಉನ್ನತ ಮಟ್ಟದ ತನಿಖೆಯನ್ನು ನಡೆಸಬೇಕು, ಇದು ಈ ಅತ್ಯಾಚಾರದಿಂದ ಮಾತ್ರವಲ್ಲ, ಪೋಲೀಸ್ ಮತ್ತು ಆಡಳಿತದ ವರ್ತನೆಯಿಂದಲೂ ಭಯಭೀತರಾಗಿರುವ ಜನರಿಗೆ ಸಾಂತ್ವನ ನೀಡುತ್ತದೆ ಎಂದು ಈ ಮಹಿಳಾ ಸಂಘಟನೆಗಳು ಸಲ್ಲಿಸಿರುವ ಮನವಿಯಲ್ಲಿ ಕೋರಲಾಗಿದೆ.

ಅವಮಾನಿತ ರೈತನ ಆತ್ಮಹತ್ಯೆ: ಹಣಕಾಸು ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಿ-ಎಐಕೆಎಸ್

60 ವರ್ಷದ ವಿಜಯಮಲ್ಯ ದೇಶದ 17 ಬ್ಯಾಂಕುಗಳಿಗೆ 9000 ಕೋಟಿ ರೂ. ಪಂಗನಾಮ ಹಾಕಿ ದೇಶ ಬಿಟ್ಟು ಹೋಗಲು ಮೋದಿ ನೇತೃತ್ವದ ಸರಕಾರ ಅವಕಾಶ ನೀಡಿದೆ ಎಂಬ ಸುದ್ದಿ ಹರಡುತ್ತಿದ್ದಾಗಲೇ, ಇತ್ತ ತಮಿಳುನಾಡಿನಲ್ಲಿ ಅಳಗರ್ ಎಂಬ 26ವರ್ಷದ ಯುವ ರೈತ ಆತ್ಮ ಹತ್ಯೆ ಮಾಡಿಕೊಂಡ ಸುದ್ದಿಯೂ ಹರಡಿತು.

ಆತ ಒಂದು ಟ್ರಾಕ್ಟರ್ ಖರೀದಿಸಲು ಒಂದು ಖಾಸಗಿ ಹಣಕಾಸು ಕಂಪನಿಯಿಂದ 7 ಲಕ್ಷ ರೂ. ಖರೀದಿಸಿದ್ದ. ಅದರಲ್ಲಿ 5 ಲಕ್ ಮರುಪಾವತಿ ಮಾಡಿದ್ದ ಬಾಕಿಯಿದ್ದ 2 ಲಕ್ಷಕ್ಕಾಗಿ ಪೀಡಿಸುತ್ತಿದ್ದ ಕಂಪನಿಯವರು ಆತನನ್ನು ಸಾರ್ವಜನಿಕವಾಗಿ ಹೊಡೆದು ಅವಮಾನ ಮಾಡಿ ಟ್ರಾಕ್ಟರ್ ಕಿತ್ತುಕೊಂಡು ಹೋದರು. ಅವಮಾನ ತಾಳಲಾರದ ಆ ಯುವಕ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ.

ಇದನ್ನು ಖಂಡಿಸಿರುವ ಅಖಿಲ ಭಾರತ ಕಿಸಾನ್ ಸಭಾ ಆ ಖಾಸಗಿ ಹಣಕಾಸು ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸಿದೆ.

ಇದಕ್ಕೆ ಮೊದಲು ಅದೇ ರಾಜ್ಯದ ತಂಜಾವೂರಿನಲ್ಲಿ ಬಾಲನ್ ಎಂಬ ರೈತ 3.8ಲಕ್ಷ ರೂ. ಸಾಲ ತೀರಿಸಲಿಲ್ಲ ಎಂದು ಪೋಲೀಸರು ಹಲ್ಲೆ ಮಾಡಿದ ವೀಡಿಯೋ ನೋಡಿದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ತಮಿಳುನಾಡು ಸರಕಾರಕ್ಕೆ, ಮುಕ್ಯ ಕಾರ್ಯದರ್ಶಿಗಳಿಗೆ ಮತ್ತು ಡಿಜಿಪಿಗೆ ಎರಡು ವಾರದೊಳಗೆ ವರದಿ ನೀಡಬೇಕು ಎಂದು ನೋಟೀಸು ಕಳಿಸಿದೆ.

ಸತತ ಎರಡನೇ ವರ್ಷವೂ ಬರವನ್ನು ಎದುರಿಸುತ್ತಿರುವ ರೈತರ ಸಂಕಟಗಳನು ಪರಿಹರಿಸಲು, ಅವರಿಗೆ ಫಲದಾಯಕ ಬೆಲೆಯನ್ನು ಒದಗಿಸಲು ವಿಫಲವಾಗಿರುವ ಎಐಡಿಎಂಕೆ ಸರಕಾರವನ್ನು ಅಖಿಲ ಭಾರತ ಕಿಸಾನ್ ಸಭಾ ಖಂಡಿಸಿದೆ.



ಲೋಕಾಯುಕ್ತ ಮುಚ್ಚುವ ಹುನ್ನಾರ ನಿಲ್ಲಿಸಿ!

ಸಂಪಾದಕೀಯ

ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)ವನ್ನು ಸಿದ್ಧರಾಮಯ್ಯ ಸರಕಾರ ರಚಿಸಿದೆ. ನಿಗ್ರಹ ದಳ ಎಡಿಜಿಪಿ ದರ್ಜೆಯ ಪೋಲಿಸ್ ಅಧಿಕಾರಿಯ ನೇತೃತ್ವದಲ್ಲಿ ಕೆಲಸ ಮಾಡುತ್ತದೆ. ಈ ದಳದ ಮೇಲುಸ್ತುವಾರಿಯನ್ನು ಜಾಗೃತ ಸಲಹಾ ಮಂಡಳಿ ವಹಿಸುತ್ತದೆ. ಮುಖ್ಯ ಕಾರ್ಯದರ್ಶಿಗಳು ಇದರ ಅಧ್ಯಕ್ಷರಾಗಿರುತ್ತಾರೆ. ಭ್ರಷ್ಟಾಚಾರ ನಿಗ್ರಹ ದಳ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡುತ್ತದೆ. ಇದು ಸಿಬಿಐ ಮಾದರಿಯಲ್ಲಿ ಕೆಲಸ ಮಾಡುತ್ತದೆ ಎಂಬುದು ಹೊಸ ವ್ಯವಸ್ಥೆ ಬಗ್ಗೆ ಸರಕಾರದ ವಿವರಣೆ. ಈ ಬದಲಾವಣೆ ಏಕೆ? 1998ರ 'ಸಿ.ರಂಗಸ್ವಾಮಯ್ಯ – ಲೋಕಾಯುಕ್ತ' ಪ್ರಕರಣದಲ್ಲಿ ಸುಪ್ರೀಂ ಕೋರ್ಟಿನ ಮತ್ತು ಇತ್ತೀಚಿನ ಹೈ ಕೋರ್ಟಿನ ತೀರ್ಪಿನಿಂದಾಗಿ ಇದು ಮಾಡಬೇಕಾಗಿದೆ ಎಂಬುದು ಸರಕಾರದ ನಿಲುವು.

ಆದರೆ ಈ ನಿರ್ಧಾರದ ಬಗ್ಗೆ ಹಲವು ಸಂದೇಹಗಳು, ಟೀಕೆಗಳು ವ್ಯಕ್ತವಾಗಿವೆ. 1998ರ ತೀರ್ಪು ಲೋಕಾಯುಕ್ತ ಪೋಲಿಸರು ಭ್ರಷ್ಟಾಚಾರ ನಿಂತ್ರಣ ಕಾಯಿದೆಯಡಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಅಪರಾಧ ದಂಡ ಪ್ರಕ್ರಿಯಾ ಸಂಹಿತೆ ಆಧರಿಸಿ ಮುಂದುವರೆಯಬೇಕು. ಅಂಥ ಕೆಲಸಗಳಲ್ಲಿ ಅವರ ಮೇಲೆ ಲೋಕಾಯುಕ್ತರಿಗೆ ನಿಯಂತ್ರಣ ಇರುವುದಿಲ್ಲ ಎಂದಷ್ಟೇ ಹೇಳಿದೆ. ಇತ್ತೀಚಿನ ಹೈ ಕೋರ್ಟು ಮಧ್ಯಂತರ ತೀರ್ಪು 'ಪ್ರತಿ ಇಲಾಖೆಯಲ್ಲಿ ಜಾಗೃತ ಕೋಶ ಸ್ಥಾಪಿಸುವ ಬಗ್ಗೆ ಪರಿಶೀಲಿಸಬೇಕು' ಎಂದಷ್ಟೇ ಹೇಳಿದೆ. ಇವೆರಡೂ ಭ್ರಷ್ಟಾಚಾರ ನಿಯಂತ್ರಣ ಕಾಯಿದೆಯಡಿ ಲೋಕಾಯುಕ್ತ ಪೋಲಿಸರು ಕೆಲಸ ನಿರ್ವಹಿಸುವಂತಿಲ್ಲ. ಬೇರೆ ವ್ಯವಸ್ಥೆ ಮಾಡಬೇಕು ಎಂದು ಹೇಳುವುದಿಲ್ಲ ಎಂಬುದು ಹಲವು ಕಾನೂನು ತಜ್ಞರ ಅಭಿಪ್ರಾಯ. ಲೋಕಾಯುಕ್ತ ಪೋಲಿಸ್ ಅಧಿಕಾರಗಳನ್ನು ನಿಗ್ರಹ ದಳಕ್ಕೆ ವರ್ಗಾಯಿಸಿ ಅದನ್ನು ನಿರುಪಯುಕ್ತಗೊಳಿಸಲಾಗುತ್ತಿದೆ. ಲೋಕಾಯುಕ್ತ ಸಾರ್ವಜನಿಕ ಕುಂದು ಕೊರತೆಗಳ ಬಗ್ಗೆ ದೂರುಗಳಿಗೆ ಸೀಮಿತವಾಗಿರುತ್ತದೆ ಎಂದು ಹಲವು ಟೀಕೆಗಳು ವ್ಯಕ್ತವಾಗಿವೆ.

ಭ್ರಷ್ಟಾಚಾರ ನಿಯಂತ್ರಣ ಕಾಯಿದೆಯಡಿ ಕಾರ್ಯಾಚರಣೆಗೆ ಸರಕಾರ ನಿಯೋಜಿಸಿರುವ ಭ್ಷಷ್ಟಾಚಾರ ನಿಗ್ರಹ ದಳದ ವ್ಯವಸ್ಥೆ ಯಾವುದಾದರೂ ರೀತಿಯಲ್ಲಿ ಉತ್ತಮ ವ್ಯವಸ್ಥೆಯೇ? ಇಲ್ಲ ಎನ್ನುತ್ತಾರೆ ಭ್ಷಷ್ಟಾಚಾರ ತಡೆ ಬಗ್ಗೆ ಕಾಳಜಿ ಇರುವ ವ್ಯಕ್ತಿಗಳು, ಸಂಘಟನೆಗಳು, ಚಳುವಳಿಗಳು. ಭ್ರಷ್ಟಾಚಾರ ನಿಯಂತ್ರಣ ಕಾಯಿದೆಯಡಿ ಮುಖ್ಯ ಮಂತ್ರಿಗಳ ಮೇಲೂ ಬರುವ ದೂರು ತನಿಖೆ ಮಾಡಬೇಕಾಗುತ್ತದೆ. ಮುಖ್ಯಮಂತ್ರಿಯ ಆಡಳಿತ ನಿಯಂತ್ರಣದಲ್ಲಿರುವ ದಳ ಇಂತಹ ತನಿಖೆ ಮಾಡುವುದು ಹೇಗೆ ಸಾಧ್ಯ? ಇದಲ್ಲದೆ ಯಾವುದೇ ಮಂತ್ರಿ ಅಥವಾ ಅಧಿಕಾರಿಯ ವಿರುದ್ಧ ದೂರು ತನಿಖೆಗೆ ತೆಗೆದುಕೊಳ್ಳಲು ಸರಕಾರದ ಪೂರ್ವಾನುಮತಿ ಪಡೆಯಬೇಕು. ಇದು ಭ್ರಷ್ಟ ಮಂತ್ರಿ ಮತ್ತು ಅಧಿಕಾರಿಗಳ ವಿರುದ್ಧ ತನಿಖೆ ತಡೆಯುವ ಕ್ರಮ ಅಲ್ಲವೇ? ಜಾಗೃತ ಸಲಹಾ ಮಂಡಳಿಯಲ್ಲಿ 5 ಐ.ಎ.ಎಸ್. ಅಧಿಕಾರಿಗಳಿರುತ್ತಾರೆ. ಒಬ್ಬ ಐ.ಪಿ.ಎಸ್. ಅಧಿಕಾರಿ ಮಾತ್ರ ಇರುತ್ತಾರೆ. ಇದು ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ ಉಲ್ಲಂಘನೆ. ಇದು ಐ.ಎ.ಎಸ್. ಅಧಿಕಾರಿಗಳ ಭ್ರಷ್ಟಾಚಾರ ವಿರುದ್ಧ ದೂರು/ತನಿಖಾ ತಡೆಗೆ ಮಾಡಿದ ವ್ಯವಸ್ಥೆ ಎಂದು ಐ.ಪಿ.ಎಸ್. ಅಧಿಕಾರಿಗಳ ಅಭಿಪ್ರಾಯ. ಹೀಗೆ ಈ ವ್ಯವಸ್ಥೆ ಯಾವುದೇ ರೀತಿಯಲ್ಲಿ ಲೋಕಾಯುತ ವ್ಯವಸ್ಥೆಗಿಂತ ಉತ್ತಮ ಅಲ್ಲ ಎಂಬುದು ಸಾಮಾನ್ಯ ಅಭಿಪ್ರಾಯ.

ಮಾತ್ರವಲ್ಲ, ಈ ವ್ಯವಸ್ಥೆ ಬದಲಾವಣೆ ಹೊಸ ಗೊಂದಲ ವಿಳಂಬಗಳನ್ನು ಸೃಷ್ಟಿಸುತ್ತದೆ. ಲೋಕಾಯುಕ್ತದ ಮುಂದೆ ಸುಮಾರು 1500 ರಾಜಕಾರಣಿಗಳ ಮತ್ತು ಅಧಿಕಾರಿಗಳ ಮೇಲೆ ಭ್ರಷ್ಟಾಚಾರದ ಪ್ರಕರಣಗಳು ಇವೆ. ಇವುಗಳಲ್ಲಿ 800 ಪ್ರಕರಣಗಳಲ್ಲಿ ತನಿಖೆ ಪೂರ್ಣಗೊಂಡು ಸ್ಥಳೀಯ ನ್ಯಾಯಾಲಯಗಳಲ್ಲಿ ಆರೋಪ ಪಟ್ಟಿ ಸಲ್ಲಿಕೆಯಾಗಿ ವಿಚಾರಣೆ ಪ್ರಗತಿಯಲ್ಲಿದೆ. ಇನ್ನು 700 ಪ್ರಕರಣಗಳಲ್ಲಿ ತನಿಖೆ ನಡೆಯುತ್ತಿದೆ. ನಿಗ್ರಹ ದಳದ ರಚನೆಯ ಗೊಂದಲ, ವಿಳಂಬದ ಜತೆ ಈ ಪ್ರಕರಣಗಳ ವರ್ಗಾವಣೆ ಈ ಎಲ್ಲಾ ಪ್ರಕರಣಗಳಲ್ಲಿ ಇನ್ನಷ್ಟು ತೀವ್ರ ವಿಳಂಬ, ಗೊಂದಲ ತರಲಿದೆ ಎನ್ನುವುದು ಖಚಿತ. ಇದಲ್ಲದೆ ಮೇಲೆ ಹೇಳಿದ ವ್ಯವಸ್ಥೆಯ ನ್ಯೂನತೆಗಳಿಂದ ಈ ಪ್ರಕರಣಗಳಲ್ಲಿ ನ್ಯಾಯ ಸಿಗುವ ಸಾಧ್ಯತೆ ಇನ್ನಷ್ಟು ಕಡಿಮೆ.

ಹಾಗಾದರೆ ಸರಕಾರ ಏಕೆ ತರಾತುರಿಯಲ್ಲಿ ಈ ಬದಲಾವಣೆ ತರುತ್ತಿದೆ? ಮುಖ್ಯಮಂತ್ರಿಗಳ ವಿರುದ್ಧ ಇರುವ ಪ್ರಕರಣಗಳು ಮುಖ್ಯ ಕಾರಣ ಎಂಬ ಆಪಾದನೆ ಬಂದಿದೆ. ಸರಕಾರ ಲೋಕಾಯುಕ್ತರಾಗಿ ನೇಮಿಸಲು ಹೊರಟಿರುವ ನ್ಯಾ. ಎಸ್. ಆರ್. ನಾಯಕ್ ಅವರ ವಿರುದ್ಧ ದೂರುಗಳ ತನಿಖೆ ಮೇಲೆ ನಿಯಂತ್ರಣ ತೆಗೆದುಕೊಳ್ಳುವುದು ಎನ್ನುವುದು ಇನ್ನೊಂದು ಆಪಾದನೆ. ಭ್ರಷ್ಟಾಚಾರ ತನಿಖೆ, ಸಾರ್ವಜನಿಕ ಕುಂದುಕೊರತೆ ದೂರು ನಿರ್ವಹಣೆಯನ್ನು ಲೋಕಾಯುಕ್ತದಿಂದ ಹಂತ ಹಂತವಾಗಿ ಬೇರ್ಪಡಿಸಿ ಅದನ್ನು ಮುಚ್ಚುವುದೇ ಸರಕಾರದ ಪ್ರಯತ್ನ ಎಂಬ ತೀವ್ರವಾದ ಆಪಾದನೆಗಳು ಬಂದಿವೆ.

ಲೋಕಾಯುಕ್ತ ವ್ಯವಸ್ಥೆ ಅತ್ಯಂತ ಉತ್ತಮ ವ್ಯವಸ್ಥೆ. ಅದಕ್ಕೆ ಬದಲಿ ಇಲ್ಲ ಎಂಬುದು ಇದರ ಅರ್ಥವಲ್ಲ. ಕರ್ನಾಟಕದಲ್ಲಿ ಸಾಕಷ್ಟು ಉತ್ತಮವಾಗಿ ಕೆಲಸ ಮಾಡಿದ ಈ ವ್ಯವಸ್ಥೆ ಕೆಲವು ಹೈ–ಪ್ರೊಫೈಲ್ (ಮುಖ್ಯಮಂತ್ರಿ ಯೆಡಿಯೂರಪ್ಪರನ್ನು ಜೈಲಿಗೆ ಕಳಿಸಿದ್ದು) ಪ್ರಕರಣಗಳನ್ನು ಬಿಟ್ಟರೆ ಭ್ರಷ್ಟರನ್ನು ಶಿಕ್ಷಿಸುವುದರಲ್ಲಿ ಅಷ್ಟೇನೂ ಯಶಸ್ವಿಯಾಗಿಲ್ಲ. ಆದರೆ ಭ್ರಷ್ಟ ಮಂತ್ರಿ, ಜನಪ್ರತಿನಿಧಿಗಳು, ಅಧಿಕಾರಿಗಳ ವಿರುದ್ಧ ದೂರು ಕೊಡಬಹುದು. ಅವರ ವಿರುದ್ಧ ತನಿಖೆಯಾದರೂ ನಡೆಯುತ್ತದೆ ಎಂಬ ಭರವಸೆ ಮೂಡಿಸಿತ್ತು. ಭ್ರಷ್ಟ ಮಂತ್ರಿ, ಜನಪ್ರತಿನಿಧಿಗಳು, ಅಧಿಕಾರಿಗಳಿಗೂ ಆಪಾದನೆ, ತನಿಖೆ, ಲೋಕಾಯುಕ್ತ ದಾಳಿಯ ಕುಖ್ಯಾತಿಯ ನೈತಿಕ ಭಯವನ್ನಾದರೂ ಮೂಡಿಸಿತ್ತು. ಸರಕಾರದ ಸೇವೆಗಳ ಬಗ್ಗೆ ದೂರುಗಳ ಬಗೆಗೂ ಇದನ್ನೇ ಹೇಳಬಹುದು. ಲೋಕಾಯುಕ್ತದಲ್ಲಿ ದಾಖಲಾದ ದೂರುಗಳ ಸಂಖ್ಯೆಯೇ ಅದರ ಯಶಸ್ಸಿನ ಬಗ್ಗೆ ಹೇಳುತ್ತದೆ.

ಇದಕ್ಕೆ ಲೋಕಾಯುಕ್ತ ಸರಕಾರಿ ವ್ಯವಸ್ಥೆಯಿಂದ ಸ್ವತಂತ್ರವಾದ ವ್ಯವಸ್ಥೆ ಆಗಿದ್ದು ಕಾರಣ. ಕೆಲವಾದರೂ ಸ್ವಚ್ಛ ಲೋಕಾಯುಕ್ತ/ಉಪ ಲೋಕಾಯುಕ್ತರುಗಳು ಕೆಲವಾದರೂ ಲೋಕಾಯುಕ್ತ ಪೋಲಿಸ್ ಅಧಿಕಾರಿಗಳು ಜತೆ ಸೇರಿ ಮುತುವರ್ಜಿಯಿಂದ ಕೆಲಸ ನಿರ್ವಹಿಸಿದ್ದೂ ಕಾರಣ. ಕಾನೂನಿನ ಬೆಂಬಲ ಇಲ್ಲದೆಯೂ ಪೋಲಿಸ್ ಅಧಿಕಾರಿಗಳ ನೇಮಕ, ತನಿಖೆಯ ಮೇಲುಸ್ತುವಾರಿಯನ್ನು ಲೋಕಾಯುಕ್ತ/ಉಪ ಲೋಕಾಯುಕ್ತರುಗಳು ನಿರ್ವಹಿಸಿದ್ದು ಕಾರಣ. ತನಿಖೆಯ ಮೇಲುಸ್ತುವಾರಿಯನ್ನು ಲೋಕಾಯುಕ್ತ/ಉಪ ಲೋಕಾಯುಕ್ತರುಗಳು ವಹಿಸುವಂತೆ ಲೋಕಾಯುಕ್ತ ಕಾನೂನಿನಲ್ಲಿ ಇಲ್ಲದಿರುವುದು ಕೆಲವು ಕೋರ್ಟು ತೀರ್ಪುಗಳಿಗೆ ಕಾರಣವಾಗಿದೆ. ಇಂತಹ ತಿದ್ದುಪಡಿ ಸಾ ಧ್ಯ ಹಾಗೂ ಅವನ್ನು ಮಾಡುವಂತೆ ಲೋಕಾಯುಕ್ತರೂ ಹಲವು ಆಸಕ್ತ ನಾಗರಿಕರೂ ಒತ್ತಾಯಿಸಿದ್ದರು. ಈ ತಿದ್ದುಪಡಿಗಳೊಂದಿಗೆ ಲೋಕಾಯುಕ್ತ ವ್ಯವಸ್ಥೆ ಇದ್ದುದರಲ್ಲಿ ಉತ್ತಮ ವ್ಯವಸ್ಥೆಯೇ.

ಆದರೆ ಇತ್ತೀಚೆಗೆ ಲೋಕಾಯುಕ್ತ ವ್ಯವಸ್ಥೆ ಆಂತರಿಕವಾಗಿ ಸಹ ದುರ್ಬಲವಾಗಿತ್ತು. ಕಳೆದ ಲೋಕಾಯುಕ್ತ ನ್ಯಾ. ಭಾಸ್ಕರ ರಾವ್ ಅವರ ಸ್ಥಾನದ ದುರುಪಯೋಗ ಮಾಡಿ ಅವರ ಮಗನ ಭ್ರಷ್ಟ ನಡೆಗಳು, ಅವುಗಳಲ್ಲಿ ಕೆಲವು ಲೋಕಾಯುಕ್ತ ಅಧಿಕಾರಿಗಳ ಶಾಮೀಲು, ಅದರ ವಿಶ್ವಾಸಾರ್ಹತೆಯನ್ನು ಕುಂದಿಸಿದ್ದವು. ಲೋಕಾಯುಕ್ತ ಉಪ–ಲೋಕಾಯುಕ್ತ ಸ್ಥಾನಗಳಿಗೆ ನಾಮಾಂಕಿತರಾದವರ ಮೇಲೆ ಭ್ರಷ್ಟಾಚಾರದ ಆಪಾದನೆಗಳು ಈ ವ್ಯವಸ್ಥೆಯನ್ನು ಮುಂದುವರೆಸುವುದರಲ್ಲಿ ತೀವ್ರ ಬಿಕ್ಕಟ್ಟು ಉಂಟು ಮಾಡಿದ್ದವು. ಭ್ರಷ್ಟಾಚಾರ ತಡೆಯ ಬಗ್ಗೆ ರಾಜ್ಯದ ಮೂರೂ ಪ್ರಮುಖ ರಾಜಕೀಯ ಪಕ್ಷಗಳ ಕಾಳಜಿ, ಬದ್ಧತೆಗಳ ಅಭಾವ ಈ ಬಿಕ್ಕಟ್ಟನ್ನು ಇನ್ನಷ್ಟು ತೀವ್ರ ಗೊಳಿಸಿದ್ದವು. ತಮ್ಮ ನಾಯಕರ, ಆಪ್ತ ಅಧಿಕಾರಿಗಳ ಭ್ಷಷ್ಟಾಚಾರದ ಬಗ್ಗೆ ತನಿಖೆ, ಕ್ರಮ ತಡೆಯುವ ಸಮಾನ ಉದ್ದೇಶ ಹೊಂದಿದ ಈ ಪಕ್ಷಗಳು ಪರಸ್ಪರ ಆಕ್ರಾಮಕವಾಗಿ ಕಂಡರೂ ಲೋಕಾಯುಕ್ತ ವ್ಯವಸ್ಥೆಯನ್ನು ಕುಂದಿಸಲು ಬಯಸಿವೆ. ಚಮಚಾ ಬಂಡವಾಳಶಾಹಿ ವ್ಯಾಪಕವಾಗಿರುವ ಹಿನ್ನೆಲೆಯಲ್ಲಿ ಚುನಾವಣೆಗಳಲ್ಲಿ, ರಾಜಕಾರಣ, ಆಡಳಿತ, ಆರ್ಥಿಕ, ಮಾಧ್ಯಮ, ನ್ಯಾಯಾಂಗದಲ್ಲಿ ಭ್ಷಷ್ಟಾಚಾರ ಹರಡುತ್ತಿದೆ. ಈ ಹಿನ್ನೆಲೆಯಲ್ಲಿ ಯಾವುದೇ ವ್ಯವಸ್ಥೆ (ನಿಗ್ರಹ ದಳ, ಲೋಕಾಯುಕ್ತ) ಇರಲಿ, ಅದಕ್ಕೆ ಬೇಕಾದ ಸ್ವಚ್ಛ ದಕ್ಷ ಸ್ವತಂತ್ರ ಮುಖ್ಯಸ್ಥರು, ತನಿಖಾಧಿಕಾರಿಗಳು, ಸಿಬ್ಬಂದಿ ಒದಗಿಸುವುದು ಹೆಚ್ಚೆಚ್ಚು ಕಷ್ಟವಾಗುತ್ತಿರುವುದು, ಆಂತರಿಕವಾಗಿಯೇ ಭ್ರಷ್ಟವಾಗಿರುವ ಅವನತ ಬಂಡವಾಳಶಾಹಿ ವ್ಯವಸ್ಥೆಯಿಂದಲೇ ಎಂಬುದನ್ನು ಮರೆಯಬಾರದು.

ಭ್ಷಷ್ಟಾಚಾರ ನಿಗ್ರಹ ದಳ (ಎಸಿಬಿ) ರಚಿಸುವ ಮೂಲಕ ಸಿದ್ಧರಾಮಯ್ಯ ಸರಕಾರ ಭ್ರಷ್ಟಾಚಾರ ತಡೆ ಬಗ್ಗೆ ತನ್ನ ಎಡಬಿಡಂಗಿ ನೀತಿಯನ್ನು ತಾರಕಕ್ಕೆ ಒಯ್ದಿದೆ. ಲೋಕಾಯುಕ್ತ ಸಂಸ್ಥೆಯನ್ನು ಗಟ್ಟಿಗೊಳಿಸುವ ಬದಲು ಅದನ್ನು ಮುಚ್ಚುವತ್ತ ಸಾಗುತ್ತಿದೆ ಎಂಬ ಸಕಾರಣ ಆಪಾದನೆಗೆ ಗುರಿಯಾಗಿದೆ. ಕಳೆದ ಮೂರು ವರ್ಷಗಳಲ್ಲಿ ಲೋಕಾಯುಕ್ತ ಸಂಸ್ಥೆ ಎದುರಿಸಿದ ಸವಾಲುಗಳನ್ನು ನಿಭಾಯಿಸುವುದರಲ್ಲಿ ಮತ್ತು ದಕ್ಷ ಸ್ವಚ್ಛ ಭ್ರಷ್ಟಾಚಾರ ತಡೆ ವ್ಯವಸ್ಥೆ ಸ್ಥಾಪಿಸುವುದರಲ್ಲಿ ಸರಕಾರ ಸದಾ ಎಡವತ್ತ ಬಂದಿದೆ. ಈಗಿನ ನಡೆ ಲೋಕಾಯುಕ್ತ ಸಂಸ್ಥೆಯನ್ನು ಮುಚ್ಚುವ ಹುನ್ನಾರ ಎಂಬ ಬಗ್ಗೆ ಯಾವುದೇ ಸಂದೇಹವಿಲ್ಲ. ಇದನ್ನು ನಿಲ್ಲಿಸಿ ಎಂದು ಎಚ್ಚರಿಕೆ ಕೊಡುವುದರ ಜತೆಗೆ ಈ ಬಗ್ಗೆ ರಾಜಕೀಯ ಪ್ರಚಾರ–ಪ್ರಕ್ಷೋಭೆ ಅಗತ್ಯ.



ಕೃಪೆ : ಪಿ. ಮಹಮ್ಮದ್, ವಿಜಯ ಕರ್ನಾಟಕ

ಕಾಂಗ್ರೆಸ್ ಪಕ್ಷಕ್ಕೆ ನಾಚಿಕೆಯಾಗಬೇಕು. ಜಿಲ್ಲಾಧಿಕಾರಿ ಎ ಬಿ ಇಬ್ರಾಹಿಂ ಮುಸ್ಲಿಂ ಎಂಬ ಏಕೈಕ ಕಾರಣಕ್ಕೆ, ಪುತ್ತೂರು ಮುಜರಾಯಿ ಇಲಾಖೆ ದೇವಸ್ಥಾನದ ಜಾತ್ರೆಯ ಆಹ್ವಾನ ಪತ್ರಿಕೆಯಲ್ಲಿ ಹಾಕಿರುವ ಜಿಲ್ಲಾಧಿಕಾರಿಯ ಹೆಸರು ಕಿತ್ತುಹಾಕಬೇಕು ಎಂದು ಸಂಘಪರಿವಾರ ತನ್ನ ಕೋಮುಕ್ಯಾತೆ ತೆಗೆದಿದೆ. ಅಧಿಕಾರಿಗಳು ಪರಿವಾರದ ಈ ತಕರಾರಿಗೆ ಸೊಪ್ಪುಹಾಕಿಲ್ಲ. ಸಂಘಪರಿವಾರದ ಇಂತಹ ನಿರ್ಲಜ್ಜ ಕೋಮು ರಾಜಕಾರಣವನ್ನು ದೃಢವಾಗಿ ಎದುರಿಸಬೇಕಾದ ಆಡಳಿತ ಪಕ್ಷ ಕಾಂಗ್ರೆಸ್‌ನ ಘಟಾನುಘಟಿ ನಾಯಕರು, ಜಿಲ್ಲಾ ಮಂತ್ರಿಗಳು ಮಾತ್ರ ಮೌನವಹಿಸಿದ್ದರೆ,

ಆದರೆ ಪುತ್ತೂರಿನ ಕಾಂಗ್ರೆಸ್ ಶಾಸಕಿ ಶಕುಂತಲಾ ಶೆಟ್ಟಿ ಒಂದು ಹೆಜ್ಜೆ ಮುಂದೆ ಹೋಗಿ, ಜಿಲ್ಲಾಧಿಕಾರಿ ಇಬ್ರಾಹಿಂ ಹೆಸರನ್ನು ಕಿತ್ತಹಾಕಬೇಕು ಎಂಬ ತೀರಾ ಅಪ್ರಬುದ್ಧ ಮಾತನ್ನಾಡಿದ್ದಾರೆ. ಈ ಹೇಳಿಕೆ ಜಿಲ್ಲೆಯ ಕೋಮುಧ್ರುವೀಕರಣವನ್ನು ಇನ್ನಷ್ಟು ಹಚ್ಚಿಸುವಂತಹದ್ದು. ಕಾಂಗ್ರೆಸ್ ಪಕ್ಷ ಬಿಜೆಪಿಯ ಬಿ ಟೀಮ್ ಎಂಬುದನ್ನು ಸಾಬೀತು ಪಡಿಸುವಂತದ್ದು. ಓರ್ವ ಜಿಲ್ಲಾಧಿಕಾರಿಗೆ ಮುಸ್ಲಿಂ ಎಂಬ ಐಡೆಂಟಿಟಿ ಕರಾವಳಿಯಲ್ಲಿ ಇಂತಹ ನಿಸ್ಸಹಾಯಕ ಸ್ಥಿತಿ ಉಂಟುಮಾಡುತ್ತದೆ ಅಂತಾದರೆ ಸಾಮಾನ್ಯ ಮುಸ್ಲಿಮರ ಪಾಡೇನು?

ಕಾಂಗ್ರೆಸ್ ಶಾಸಕಿಯ ಇಂತಹ ಮೃದು ಕೋಮುವಾದ, ಬೇಜವಾಬ್ದಾರಿಯುತ ಮಾತಿನ ಬಗ್ಗೆ ಕಾಂಗ್ರೆಸ್ ರಾಜ್ಯ ಸಮಿತಿ ಕ್ಷಮೆಯಾಚಿಸಬೇಕು.

– ಮುನೀರ್ ಕಾಟಿಪಳ್ಳ



ಮುನಿಸಿಪಾಲ್ ಕಾರ್ಮಿಕರ ಮುಷ್ಕರದ ಪರಿಣಾಮ



ನೇರ ನೇಮಕಾತಿಗೆ ತಾತ್ಕಾಲಿಕ ತಡೆ

ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳಾದ ಪಟ್ಟಣ ಪಂಚಾಯಿತಿ, ನಗರಸಭೆ, ನಗರ ಪಾಲಿಕೆಗಳಲ್ಲಿ ನೇರ ನೇಮಕಾತಿಗೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿ ಚಾಲನೆಗೆ ಸೂಚಿಸಿದ್ದ ಅದೇಶವನ್ನು ತಾತ್ಕಾಲಿಕವಾಗಿ ತಡೆ ಹಿಡಿರುವುದಾಗಿ ನಗರಾಭಿವೃದ್ದಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ.ಅನಿಲ್ ಕುಮಾರ್ ಬೆಂಗಳೂರಿನ ಸ್ವಾತಂತ್ರ ಉದ್ಯಾನವನದಲ್ಲಿ ಮುನಿಸಿಪಾಲ್ ಕಾರ್ಮಿಕರು ನಡೆಸುತ್ತಿದ್ದ ಮುಷ್ಕರದಲ್ಲಿ ಭಾಗವಹಿಸಿ ತಿಳಿಸಿದರು.

15–20 ವರ್ಷಗಳಿಂದ ಗುತ್ತಿಗೆ ಅಧಾರದಲ್ಲಿ ದುಡಿಯುತ್ತಿರುವ ಮುನಿಸಿಪಾಲ್ ಕಾರ್ಮಿಕರಿಗೆ ಆನ್ಯಾಯವಾಗಿದ್ದು, ನೇರ ನೇಮಕಾತಿ ವಿರೋಧಿಸಿ, ಗುತ್ತಿಗೆ ಮುನಿಸಿಪಾಲ್ ಕಾರ್ಮಿಕರ ಖಾಯಮಾತಿಗಾಗಿ ಒತ್ತಾಯಿಸಿ ಕರ್ನಾಟಕ ರಾಜ್ಯ ಮುನ್ಸಿಪಾಲ್ ಕಾರ್ಮಿಕರ ಸಂಘ ಸಿಐಟಿಯು ನೇತ್ರತ್ವದಲ್ಲಿ ದಿನಾಂಕ 10–11, ಮಾರ್ಚ 2016ರಂದು ಸಾವಿರಾರು ಗುತ್ತಿಗೆ ಮುನಿಸಪಾಲ್ ಕಾರ್ಮಿಕರು ಹಗಲು–ರಾತ್ರಿ ಧರಣಿ ನಡೆಸಿದರು.

ಪೌರ ಕಾರ್ಮಿಕರನ್ನು ಖಾಯಂಗೊಳಿಸದೆ ಇದ್ದಲ್ಲಿ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಹೋರಾಟಕ್ಕೆ ಕೈ ಜೋಡಿಸುವುದಾಗಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ನಾರಾಯಣ ಅವರು ಮುಷ್ಕರ ನಿರತರಿಗೆ ಭರವಸೆ ನೀಡಿದರು, ಅವರು ಹರಿಯಾಣ ಮಾದರಿ ನೇರ ಸಂಬಳ ನೀಡುವ, ಗುತ್ತಿಗೆ ಪದ್ದತಿಯನ್ನು ತೆಗೆದು ಹಾಕುವ ಕುರಿತು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದಾಗಿ ನುಡಿದರು.

ಸಮಾನ ವೇತನ. ಶಾಸನಾತ್ಮಕ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಕಾನೂನು ಬದ್ದವಾದ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಕಾರ್ಮಿಕ ಇಲಾಖೆ ಕ್ರಮವಹಿಸಿ ನ್ಯಾಯ ಕೊಡಿಸುವುದಾಗಿ ಕಾರ್ಮಿಕ ಇಲಾಖೆಯ ಜಂಟಿ ಅಯುಕ್ತರಾದ ಡಾ.ಶ್ರೀಪಾದ ಭಟ್ ಅವರು ರಾತ್ರಿ ಧರಣಿ ನಿರತರನ್ನು ಭೇಟಿ ಮಾಡಿ ಮನವಿ ಸ್ವೀಕರಿಸಿ ಮಾತನಾಡಿದರು.

ಎರಡು ದಿನಗಳ ಕಾಲ ನಡೆದ ಈ ಹೋರಾಟವನ್ನು ಕರ್ನಾಟಕ ಮುನಿಸಿಪಾಲ್ ಕಾರ್ಮಿಕರ ಸಂಘ(ಸಿಐಟಿಯು) ಮುಂದಾಳತ್ವದಲ್ಲಿ ನಡೆಸಲಾಯಿತು.

ಸಂಘದ ಅಧ್ಯಕ್ಷರಾದ ಹರೀಶ್ ನಾಯಕ್, ಪ್ರಧಾನ ಕಾರ್ಯಧರ್ಶಿ ಸೈಯದ್ ಮುಜಿಬ್, ಖಚಾಂಚಿ, ಸಿ.ವೆಂಕಟೇಶ್, ಹಾಸನದ ಪ್ರಕಾಶ್, ಬಿಜಾಪುರದ ಲಕ್ಷ್ಮಣ್ ಹಂದ್ರಾಳ್, ಬೆಳಗಾವಿಯ ಬಸವರಾಜು ಕಾಂಬಳೆ, ಉತ್ತರ ಕನ್ನಡದ ಸ್ಯಾಮ್‌ಸಾನ್, ತುಮಕೂರಿನ ಎನ್.ಕೆ.ಸುಬ್ರಮಣ್ಯ, ಚಂದ್ರಪ್ಪ, ಸಫಾಯಿ ಕರ್ಮಚಾರಿ ಕಾವಲು ಸಮಿತಿಯ ಓಬಳೇಶ್ ಸಿಐಟಿಯುನ ರಾಜ್ಯ ಕಾರ್ಯದರ್ಶಿ ಉಮೇಶ್.ಕೆ.ಎನ್, ಮಾತನಾಡಿದರು.

ಪ್ರತಿಭಟನಾ ನಿರತರ ಮುಖಂಡರನ್ನು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಿಗೆ ಭೇಟಿ ಮಾಡಿಸಿ ಮುಂದೆ ಈ ಪ್ರಶ್ನೆಗಳ ಅಧಾರದಲ್ಲಿ ಸಭೆ ನಡೆಸುವುದಾಗಿ ಅಧಿಕಾರಿಗಳು ಆಶ್ವಾಸನೆ ನೀಡಿದ ಹಿನ್ನೆಲೆಯಲ್ಲಿ ಮುನಿಸಿಪಾಲ್ ಕಾರ್ಮಿಕರು ಪ್ರತಿಭಟನೆ ಹಿಂದಕ್ಕೆ ಪಡೆದರು.

– ಸೈಯದ್ ಮುಜಿಬ್

PEÃV½ZÀÄÝ

ಭಾರತ ಜಗತ್ತಿಗೆ ಮಾರ್ಗದರ್ಶನ
ಮಾಡುತ್ತಿದೆ:

ಸುಳ್ಳು ಹೇಳುವ ಕಲೆ
(ಆರ್ಟ್ ಆಫ್ ಲೈಯಿಂಗ್)

ಬದುಕುವ ಕಲೆ
(ಆರ್ಟ್ ಆಫ್ ಲಿವಿಂಗ್)

ಪರಾರಿಯಾಗುವ ಕಲೆ
(ಆರ್ಟ್ ಆಫ್ ಲೀವಿಂಗ್)

– ಸಂಜೀವ ಭಟ್ (ಗುಜರಾತಿನ ಮಾಜಿ ಐಪಿಎಸ್ ಅಧಿಕಾರಿ)
ಶ್ರೀ ಶ್ರೀ ಶ್ರೀ ಮತ್ತು ಮಲ್ಯ ಜಗತ್ತಿಗೆ
ಕಲಿಸಬಹದಾದ ಕಲೆಗಳ ಬಗ್ಗೆ

ಉಡುಪಿ, ಮಂಗಳೂರಿನಲ್ಲಿ ಜೆ.ಸಿ.ಟಿ.ಯು. ಪ್ರತಿಭಟನೆಗಳು



ಪ್ರಮುಖ ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತರಲು ಹೊರಟಿರುವ ಕೇಂದ್ರ ಸರ್ಕಾರ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳಲು ಮುಂದಾಗಿದೆ. ಗುತ್ತಿಗೆ ಕಾರ್ಮಿಕ ಕಾನೂನಿಗೆ ತಿದ್ದುಪಡಿ ಮಾಡಿ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ರಾಷ್ಟ್ರವ್ಯಾಪಿ ಕನಿಷ್ಟ ವೇತನ ರೂ.18,000 ನಿಗದಿ ಮಾಡಬೇಕು. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ನಿಧಿ ಸ್ಥಾಪನೆ ಮಾಡಬೇಕು. ಕಲ್ಯಾಣ ಯೋಜನೆಗಳ ಜಾರಿಗಾಗಿ ಹಣ ಮೀಸಲಿಡಬೇಕು. ಕೈಗಾರಿಕಾ ವಿವಾದ ಕಾಯ್ದೆ, ಪ್ಯಾಕ್ಟರಿಗಳ ಕಾಯ್ದೆ, ಅಪ್ರೆಂಟಿಸ್ ಕಾಯಿದೆ, ಕನಿಷ್ಟ ಕೂಲಿ ಕಾಯಿದೆ ಮೊದಲಾದ ಕಾನೂನುಗಳನ್ನು ಕಾರ್ಮಿಕ ವಿರೋಧಿಯಾಗಿ ತಿದ್ದುಪಡಿಗೊಳಿಸಲು ಪ್ರಸ್ತಾವಗಳನ್ನು ಕೈಬಿಡಬೇಕು– ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ರಾಷ್ಟ್ರವ್ಯಾಪಿಯಾಗಿ ಕಾರ್ಮಿಕ ಹಾಗೂ ನೌಕರ ಸಂಘಟನೆಗಳು ಮಾರ್ಚ್ 10 ರಂದು ಹಮ್ಮಿಕೊಂಡಿದ್ದ ಜಂಟಿ ಪ್ರತಿಭಟನೆಯ ಭಾಗವಾಗಿ ಉಡುಪಿ ಮತ್ತು ಮಂಗಳೂರುಗಳಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಗಳ ಆಶ್ರಯದಲ್ಲಿ ಪ್ರತಿಭಟನೆಗಳನ್ನು ನಡೆಸಲಾಯಿತು.

ಉಡುಪಿಯಲ್ಲಿ ಸರ್ವಿಸ್ ಬಸ್ ನಿಲ್ದಾಣದ ಎದುರು ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡರಾದ ವಿಶ್ವನಾಥ ರೈ, ಅದಮಾರು ಶ್ರೀಪತಿ ಆಚಾರ್ಯ, ಕೆ.ಶಂಕರ್, ಬಾಲಕೃಷ್ಣ ಶೆಟ್ಟಿ, ಎಐಟಿಯುಸಿ ಮುಖಂಡ ಕೆ.ವಿ.ಭಟ್, ವಿಮಾ ನೌಕರರ ಸಂಘದ ಮುಖಂಡ ಯು.ಗುರುದತ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಉಡುಪಿ ಜಿಲ್ಲಾ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಸಂಚಾಲಕ ಅದಮಾರು ಶ್ರೀಪತಿ ಆಚಾರ್ಯ ಮತ್ತಿತರರು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್, ಜಯಂತಿ ಬಿ.ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಯೋಗೀಶ್ ಜಪ್ಪಿನಮೊಗರು, ಎಐಟಿಯುಸಿ ಮುಖಂಡರಾದ ಎಚ್.ವಿ.ರಾವ್, ಕರುಣಾಕರ, ಬ್ಯಾಂಕ್ ಎಂಪ್ಲೋಯಿಸ್ ಫೆಡರೇಶನ್ ಆಫ್ ಇಂಡಿಯಾದ ಮುಖಂಡರಾದ ಸುನಿಲ್ ಕುಮಾರ್, ಪುರುಷೋತ್ತಮ, ಬಿಎಸ್‌ಎನ್‌ಎಲ್ ನೌಕರ ಸಂಘದ ಮುಖಂಡರಾದ ನಾರಾಯಣ ಮತ್ತಿತರರು ಭಾಗವಹಿಸಿದ್ದರು. ಸಭೆಯನ್ನುದ್ದೇಶಿಸಿ ಸಿಐಟಿಯುವಿನ ವಸಂತ ಆಚಾರಿ, ಜೆ.ಬಾಲಕೃಷ್ಣ ಶೆಟ್ಟಿ, ಎಐಟಿಯುಸಿಯ ಎಚ್.ವಿ.ರಾವ್, ಬ್ಯಾಂಕ್ ನೌಕರರ ಫೆಡರೇಶನ್ನಿನ ಸುನಿಲ್ ಕುಮಾರ್, ಬಿಎಸ್‌ಎನ್‌ಎಲ್ ಮುಖಂಡರಾದ ನಾರಾಯಣ ಮಾತನಾಡಿದರು.

– ವಾಸುದೇವ ಉಚ್ಚಿಲ್





ಕಾಮ್ರೇಡ್ ಎನ್.ಕೆ.ಉಪಾಧ್ಯಾಯ ಜನ್ಮ ಶತಮಾನೋತ್ಸವ

ಸ್ವಾತಂತ್ರ್ಯ ಹೋರಾಟಗಾರರು, ಸಿಪಿಐ(ಎಂ) ಪಕ್ಷದ ಮುಖಂಡರು, ಗ್ರಾಮ ಪಂಚಾಯತಿ ನೌಕರರ ಸಂಘದ ಮುಂದಾಳು ಆಗಿದ್ದು ಕಾಮ್ರೇಡ್ ಎನ್.ಕೆ.ಉಪಾಧ್ಯಾಯ ರವರ ಜನ್ಮ ಶತಮಾನೋತ್ಸವ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘಟನೆಯ ರಾಜ್ಯ ಸಮಿತಿಯು ಬೆಂಗಳೂರಿನ ಸಚಿವಾಲಯ ನೌಕರರ ಕ್ಲಬ್‌ನ ಸಭಾಂಗಣದಲ್ಲಿ ಮಾರ್ಚ್ 12ರಂದು ಆಯೋಜಿಸಿತ್ತು.

ಈ ಕಾರ್ಯಕ್ರಮಕ್ಕೆ ಗ್ರಾಮ ಪಂಚಾಯತಿ ಸಂಘಟನೆಯ ಮುಖಂಡರಾದ ವಿ.ಪಿ.ಕುಲಕರ್ಣಿ, ಮಾರುತಿ ಮಾನ್ಪಡೆ, ಸಿಪಿಐ(ಎಂ) ಪಕ್ಷದ ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ಆರ್.ಎಸ್.ಬಸವರಾಜು, ಮಂಡ್ಯ ಜಿಲ್ಲಾ ಕಾರ್ಯದರ್ಶಿ ರಾಮಕೃಷ್ಣ, ರೈತ ಮುಖಂಡರಾದ ಭೀಮಸೀ ಕಲಾದಗಿ, ಕಾರ್ಮಿಕ ಮುಖಂಡರಾದ ಮಹೇಶ್ ಪತ್ತಾರ್ ಮತ್ತಿತರ ಮುಖಂಡರು ಭಾಗವಹಿಸಿದ್ದರು.



ಮೈಸೂರಿನಲ್ಲಿ ಹಿಂಸಾಚಾರ: ಬಿಜೆಪಿಯ ದಿವಾಳಿತನದ ರಾಜಕಾರಣ

– ಎಸ್.ವೈ. ಗುರುಶಾಂತ್

ಶಾಂತಿ, ಸೌಹಾರ್ದತೆ ಹಾಗೂ ಸಾಂಸ್ಕೃತಿಕ ಹಿರಿಮೆಯಗರಿ ಇರಿಸಿಕೊಂಡ ನಾಡಿನ ಪರಂಪರೆಯ ಹೆಗ್ಗಳಿಕೆಯ ಮೈಸೂರು ನಗರಕ್ಕೆ ಹಿಂಸಾಚಾರದಕಪ್ಪು ಮಸಿ ಮತ್ತೇ, ಮತ್ತೇ ಮೆತ್ತಲಾಗುತ್ತಿದೆ.ಕಿಡಿ ಹೊತ್ತಿಸಲು ಕಾರಣಗಳು ಕ್ಷುಲ್ಲಕ. ಆದರೆ ಅವುಗಳನ್ನು ತಮ್ಮ ರಾಜಕೀಯ ಅಧಿಕಾರದ ಮೆಟ್ಟಿಲಿಗೆ, ಮತೀಯ ವಿಭಜನೆ, ಅಸಹಿಷ್ಣುತೆಯ ವಿಸ್ತರಣೆಗೆ ಬಳಸುವ ಪ್ರಜ್ಞಾಪೂರ್ವಕ ಪ್ರಯತ್ನಗಳೇ ಪರಿಸ್ಥಿತಿಯನ್ನು ಹಾಳುಗೆಡಹುತ್ತಿವೆ.

ಮೊನ್ನೆಯ ರವಿವಾರ 2016ರ ಮಾರ್ಚ್ 13 ರಂದಿನಿಂದ ಪ್ರತಿ ದಿನವೂ ಹಿಂಸಾಚಾರ, ಇಲ್ಲವೇ ಪ್ರಕ್ಷುಬ್ದ ಸ್ಥಿತಿ ಮೈಸೂರು ನಗರದಲ್ಲಿ ನಿರ್ಮಾಣವಾಗಿದೆ. ಅಂತಿಮ ಪರೀಕ್ಷೆಗೆ ತೆರಳುತ್ತಿರುವ ವಿದ್ಯಾರ್ಥಿಗಳ ಮೇಲೆ ಮಾತ್ರವಲ್ಲ ಜನಜೀವನವನ್ನು ಅಸ್ತವ್ಯಸ್ತಗೊಳಿಸುವ ಘಟನೆಗಳು ನಡೆಯುತ್ತಲೇ ಇವೆ.

ಈ ಎಲ್ಲವನ್ನೂ ಸಂಘಪರಿವಾರ–ಬಿಜೆಪಿ ಸರತಿಯಂತೆ ನಡೆಸುತ್ತಿವೆ. ಟೀ ಅಂಗಡಿಯಲ್ಲಿ ಕುಳಿತು ಚಹಾ ಕುಡಿಯುತ್ತಿದ್ದ ಭೂದಂಥೆ, ವಿದ್ಯುತ್ ಕಂಟ್ರಾಕ್ಟರ್ ಆಗಿದ್ದ ರಾಜು ಎನ್ನುವಾತನನ್ನು ಸಮಾಜಘಾತುಕರ ತಂಡವೊಂದು ಕೊಲೆ ನಡೆಸಿದ ಪ್ರಕರಣದ ಸುತ್ತ ಈ ವಿದ್ಯಾಮಾನಗಳು ನಡೆಯುತ್ತಿವೆ. ರಾಜ್ಯದ ಬಿಜೆಪಿ ನಾಯಕರ ದಂಡು ಇಲ್ಲೇ ಬೀಡು ಬಿಟ್ಟಿದೆ. ಶಾಸಕ ಸಿ.ಟಿ ರವಿ ಮತ್ತು ಸಂಸದ ಪ್ರತಾಪಸಿಂಹರವರು ಘಟನೆಯ ತಕ್ಷಣವೇ ಅಲ್ಲಿದ್ದಾರೆ. ಕೊಲೆಯ ನಂತರ ಅಲ್ಲಿಗೆ ಬಂದ ಚಿಕ್ಕಮಗಳೂರು ಶಾಸಕ ಸಿ.ಟಿ.ರವಿಯೇ ಬಂದ್‌ಗೆ ಕರೆ ಕೊಡಲು ಮತ್ತು ಅಂದು ಪರಿವಾರದ ತಂಡಗಳು ಅಂಗಡಿ ಲೂಟಿ, ವಾಹನಗಳಿಗೆ ಬೆಂಕಿ ಇಡುವುದು, ದಾಂಧಲೆ, ಹಿಂಸಾಚಾರ ನಡೆಸುವಲ್ಲಿ ಪ್ರಮುಖ ಕಾರಣವೆಂದು ದೂರನ್ನು ಸಹ ನೀಡಲಾಗಿದೆ. ಅಲ್ಲಿಂದ ಇಲ್ಲಿಯವರೆಗೆ ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷ ಬಿ.ಎಸ್.ಯಡಿಯೂರಪ್ಪ, ಪಕ್ಷದ ಅಧ್ಯಕ್ಷ ಪ್ರಹ್ಲಾದ್ ಜೋಷಿ, ಈಶ್ವರಪ್ಪ, ಮುಂತಾದವರು 'ಹೋರಾಟದಲ್ಲಿ' ಭಾಗವಹಿಸಿದ್ದಾರೆ ಅರ್ಥಾತ್ ಸರಕಾರದ ಹತ್ತಿದ ಬೆಂಕಿ ಮತ್ತಷ್ಟು ಉರಿಯಲು ತಿದಿ ಊದಿದ್ದಾರೆ. ರಾಜ್ಯ ಸರಕಾರ ಕೊಲೆಗಾರರ ಪತ್ತೆ ಹಚ್ಚಲು, ಹಿಡಿಯಲು ಪ್ರಯತ್ನ ನಡೆಸಿರುವಾಗಲೂ ರಾಜ್ಯ ಸರಕಾರದ ವಿರುದ್ಧ, ಸಿದ್ದರಾಮಯ್ಯನವರ ವಿರುದ್ಧ ಧಾಳಿ ನಡೆಸಿ ರಾಜಕೀಯ ದುರ್ಲಾಭ ಗಿಟ್ಟಿಸಲು ಶತಾಯ ಪ್ರಯತ್ನಿಸುತ್ತಿದ್ದಾರೆ.

ಕೊಲೆಗೀಡಾದ ವ್ಯಕ್ತಿ ಯಾರು? ಹಿನ್ನೆಲೆ ಏನು ಎಂಬುದನ್ನು ಪರಿಶೀಲಿಸಬೇಕಿದೆ. ಭೂದಂ ಥೆಗಾರ, ಕ್ರಿಮಿನಲ್ ದಾಖಲೆ, ಮೊಕದ್ದಮೆ ಇರುವಾತ. ಹಿಂದೆ ಮೈಸೂರಿನಲ್ಲಿ ನಡೆದ ಹಲವಾರು ಕೋಮುಗಲಭೆಗಳಲ್ಲಿ ನೇರ ಪಾತ್ರವನ್ನು ವಹಿಸಿದಾತ. ಮೈಸೂರನ್ನು ತಲ್ಲಣಗೊಳಿಸಿದ ಮಸೀದಿಯ ಬಳಿ ಹಂದಿ ಮಾಂಸ ಇರಿಸಿದ ಪ್ರಕರಣದ ಆರೋಪಿ. ಇತ್ತೀಚಿನ ದಿನಗಳಲ್ಲಿ ವ್ಯವಹಾರಗಳಲ್ಲಿ ಹಲವರೊಂದಿಗೆ ವ್ಯಾಜ್ಯಗಳು ಇರುವಾತ. ಮಹಿಳೆಯೊಂದಿಗಿನ ಸಂಬಂಧದಲ್ಲಿ ಜಗಳವಿದೆಯೆಂಬ ಆರೋಪವೂ ಇದೆ. ಈತನ ಸಮಾಜ ಸೇವೆಯೆಂದರೆ ಆರೆಸ್ಸೆಸ್, ಬಿಜೆಪಿಯ ಕಾರ್ಯಕರ್ತನಾಗಿರುವುದು. ಈ ಎಲ್ಲಾ ಹಿನ್ನೆಲೆಯಿಂದಾಗಿ ಕೊಲೆ ಕಾರಣಗಳು ಯಾವುವೂ ಇರಬಹುದು ಎಂದು ಊಹಿಸಬಹುದು. ಈಗ ಬಿಜೆಪಿ ಆರೋಪಿಸಲಾಗುತ್ತಿರುವಂತೆ ಪಿ.ಎಫ್.ಐ– ಅಥವಾ ಅಲ್ಪಸಂಖ್ಯಾತ ಮೂಲಭೂತವಾದಿಗಳೋ ಅಥವಾ ಯಾವುದಾದರೂ ಕ್ರಿಮಿನಲ್ ಗ್ಯಾಂಗ್‌ಗಳ ಕೃತ್ಯವೂ ಇರಬಹುದು. ತನಿಖೆಯ ನಂತರವಷ್ಟೇ ನಿಖರವಾಗಿ ಹೇಳಬಹುದು. ಈಗಲೇ ಅಲ್ಲ.

ನಿಜ, ಈ ಕೊಲೆ ಕಾರಣ ಏನೇ ಇದ್ದರೂ ಖಂಡನೀಯ. ಕೃತ್ಯ ಎಸಗಿದವರಿಗೆ ಕಠಿಣ ಕಾನೂನಾತ್ಮಕ ಶಿಕ್ಷೆ ಆಗಲೇಬೇಕು. ಅದಕ್ಕೆ ಸರಕಾರದ ತನಿಖಾ ಸಂಸ್ಥೆಗಳು ವಿಳಂಬಿಸದೇ ಶೀಘ್ರ ತನಿಖೆ ನಡೆಸಿ ಅಪರಾಧಿಗಳನ್ನು ಬಂಧಿಸಬೇಕು. ಹೀಗಿರುವಾಗಲೂ ತನಿಖಾ ಸಂಸ್ಥೆಗೆ ಕಾಲಾವಕಾಶ ಕೊಡಬೇಕಿದೆ. ಅಲ್ಲಿಯವರೆಗೆ ಸಂಯಮ ಬೇಕು. ಶಾಂತಿ, ಸೌಹಾರ್ದತೆ ಕದಡುವುದು ಸಲ್ಲದು.

ನಾಳಿನ ಕಾರ್ಯಕ್ರಮಗಳು :

1. **ಮಾರ್ಚ್** 21: ರೋಹಿತ್ ವೆಮುಲ ಬಲಿ, ಜೆ.ಎನ್.ಯು. ಮೇಲೆ ಧಾಳಿ ಏಕೆ ? ಸಂವಾದ– ಮಸ್ತಕ ಬಿಡುಗಡೆ–ಡಾಕ್ಯುಮೆಂಟರಿ ಚಿತ್ರ ಪ್ರದರ್ಶನ. ಸಂಜೆ 4.00ಕ್ಕೆ, ಎಸ್‌ಸಿಎಂ ಹೌಸ್, ಮಿಶನ್ ರಸ್ತೆ, ಬೆಂಗಳೂರು.
2. **ಮಾ.** 21 : ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿಚಾರ ಸಂಕಿರಣ, ಮಹಾರಾಣಿ ಕಾಲೇಜ್, ಬೆಂಗಳೂರು ಉತ್ತರ ಜಿಲ್ಲಾ ಸಮಿತಿ
3. **ಮಾರ್ಚ್** 23: 'ಆಜಾದಿ ಮಾರ್ಚ್' ಬೆ.10.30ಕ್ಕೆ, ಹುತಾತ್ಮ ಸ್ತಂಭ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು. ಎಸ್‌ಎಫ್‌ಐ–ಡಿವೈಎಫ್‌ಐ ವತಿಯಿಂದ.
4. **ಮಾರ್ಚ್** 23: 'ಆಜಾದಿ ಮಾರ್ಚ್', ಮಧ್ಯಾಹ್ನ 3 ಗಂಟೆಗೆ, ಅಂಬೇಡ್ಕರ್ ವೃತ್ತದಿಂದ ಪುರಭವನ ವರೆಗೆ, ಮಂಗಳೂರು.
5. **ಮಾರ್ಚ್** 25: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, 2015ನೇ ಸಾಲಿನ ಗೌರವ ಪ್ರಶಸ್ತಿ ಪ್ರಧಾನ, ಮಸ್ತಕ ಮರಸ್ಕಾರ. ಸಂಜೆ 6.00 ಗಂಟೆಗೆ, ಕುಮಾರ ಗಂಧರ್ವ ಭವನ, ಬೆಳಗಾವಿ.
6. **ಮಾರ್ಚ್** 30: ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಅನಿರ್ದಿಷ್ಟ ಧರಣಿ, ಬೆಂಗಳೂರು.
7. **ಏಪ್ರಿಲ್** 11: ಕೇಂದ್ರ ಸರ್ಕಾರಿ ನೌಕರರ ರೈಲ್ವೇ ಮತ್ತು ರಕ್ಷಣಾ ಕ್ಷೇತ್ರದ ನೌಕರರ ಸೇರಿದಂತೆ 11 ಬೇಡಿಕೆಗಳಿಗಾಗಿ ಮುಷ್ಕರ.
8. **ಏಪ್ರಿಲ್ 8 ರಿಂದ** 14: ದೇಶವ್ಯಾಪಿ ರೈತರ ಪ್ರತಿಭಟನಾ ವಾರಾಚರಣೆ: ಎಐಕೆಎಸ್
9. **ಏಪ್ರಿಲ್** 14: ಡಾ॥ಬಿ.ಆರ್.ಅಂಬೇಡ್ಕರ್ 125ನೇ ಜನ್ಮದಿನ. ವಿವಿಧೆಡೆ ಕಾರ್ಯಕ್ರಮಗಳು.

ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಶೇ.30 ರಷ್ಟು ಹಣ ಮೀಸಲಿಡಿ : ಎಸ್‌ಎಫ್‌ಐ ಆಗ್ರಹ



ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಮಾ.18ರಂದು ಮಂಡಿಸುವ 2016–17ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಹೆಚ್ಚು ಹಣ ಮೀಸಲಿರಿಸಲು ಹಾಗೂ ಮೀಸಲಿಟ್ಟ ಹಣ ಸಮರ್ಪಕ ಬಳಕೆಗೆ ಒತ್ತಾಯಿಸಿ ಮಾರ್ಚ್ 11ರಂದು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಿದೆ. ಪ್ರತಿಭಟನೆಗಳಲ್ಲಿ ಬಜೆಟ್ ಬಗ್ಗೆ ಮನವಿ ಸಲ್ಲಿಸಲಾಯಿತು.

ಶಿಕ್ಷಣಕ್ಕೆ ಹೆಚ್ಚಿನ ಹಣ ಮೀಸಲಿಡದ ಪರಿಣಾಮವಾಗಿ ಶಿಕ್ಷಣದ ವ್ಯವಸ್ಥೆ ದಿನೇ ದಿನೇ ಕುಸಿಯುತ್ತಿದ್ದು ಸರಕಾರಿ ಶಾಲಾ–ಕಾಲೇಜ್–ಹಾಸ್ಟೆಲ್‌ಗಳು ಮೂಲ ಸೌಲಭ್ಯವಿಲ್ಲದೆ ನರಳುತ್ತಿವೆ. ಕೊಠಾರಿ ಆಯೋಗದ ಶಿಫಾರಸ್ಸಿನ ಪ್ರಕಾರ ಶೇ.30ರಷ್ಟು ಹಣ ಮೀಸಲಿರಿಸಲು ಹಾಗೂ ಮೀಸಲಿರಿಸಿದ ಹಣವನ್ನು ಸಮರ್ಪಕ ಬಳಕೆ ಮಾಡುವಂತೆ ಎಸ್.ಎಫ್‌ಐ ಮನವಿಯಲ್ಲಿ ಒತ್ತಾಯಿಸಿದೆ.

ರಾಜ್ಯದ ಶೈಕ್ಷಣಿಕ ಕ್ಷೇತ್ರ ಗೊಂದಲದ ಗೂಡಾಗಿದೆ. ಶೇ.46ರಷ್ಟು ಸರ್ಕಾರಿ ಶಾಲಾ–ಕಾಲೇಜುಗಳು ಕನಿಷ್ಠ ಮೂಲಭೂತ ಸೌಲಭ್ಯಗಳಿಲ್ಲದೆ ನರಳುತ್ತಿವೆ. ಶೇ.68ರಷ್ಟು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯಗಳಿಲ್ಲ. ಒಟ್ಟು 2 ಲಕ್ಷ ಸರ್ಕಾರಿ ಶಾಲಾ ಕೊಠಡಿಗಳಲ್ಲಿ ಸುಮಾರು 34,591 ಕೊಠಡಿಗಳಿಗೆ ದುರಸ್ತಿಯ ಅಗತ್ಯವಿದೆ. ಕಳೆದ ಎರಡು ಶೈಕ್ಷಣಿಕ ವರ್ಷದಲ್ಲಿ (2012–14) ಒಂದ–ರಿಂದ ಐದನೇ ತರಗತಿಯವರೆಗೆ ಓದುತ್ತಿದ್ದ 2.91 ಲಕ್ಷ ಮಕ್ಕಳು ಶಾಲೆಯನ್ನು ತೊರೆದಿದ್ದಾರೆ.

ಶಿಕ್ಷಣದಿಂದ ವಂಚಿತರಾದ ಮಕ್ಕಳಿಗಾಗಿ ಶಿಕ್ಷಣ ನೀಡಲು ಶಿಕ್ಷಣ ಹಕ್ಕು ಕಾಯ್ದೆ(ಆರ್.ಟಿ.ಇ) ಸಮರ್ಪಕವಾಗಿ ಜಾರಿಯಾಗಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳು ಕಾನೂನು ಬಾಹಿರವಾಗಿ ಆಕ್ರಮ ಡೋನೇಷನ್ ಹಾವಳಿ ತಡೆಗಟ್ಟಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಶಿಕ್ಷಣ ರೆಗ್ಯೂಲೇಟಿಂಗ್ ಪ್ರಾಧಿಕಾರವು ನಿಷ್ಕ್ರಿಯೆಗೊಂಡು ಹಲ್ಲುಕಿತ್ತ ಹಾವಿನಂತಾಗಿದೆ. ಪಾಲಕರಿಂದ ಮನಸ್ಸೋ ಇಚ್ಛೆ ಹಣ ಪಡೆಯುತ್ತಿರುವವರ ಮೇಲೆ ಕ್ರಮ ಜರುಗಿಸಲು ಮುಂದಾಗಬೇಕೆಂದು ಆಗ್ರಹಿಸಲಾಯಿತು.

ರಾಜ್ಯದಲ್ಲಿ ಪ್ರತಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೊಂದರಂತೆ ಎರಡು ಖಾಸಗಿ ಕಾಲೇಜುಗಳಿವೆ. ಇರುವಂತಹ ಸರ್ಕಾರಿ ಪಿಯು ಕಾಲೇಜುಗಳಲ್ಲಿ ಉಪನ್ಯಾಸಕರು, ಗ್ರಂಥಾಲಯ, ಪ್ರಯೋಗಾಲಯ ಹಾಗೂ ಇತರೆ ಮೂಲಭೂತ ಸೌಲಭ್ಯಗಳ ಕೊರತೆಯಿದ್ದು, ವಿದ್ಯಾರ್ಥಿಗಳು ಪರದಾಡುವಂತಾಗಿದೆ.

2,585 ಖಾಸಗಿ ಪಿ.ಯು ಕಾಲೇಜುಗಳಲ್ಲಿ ಪ್ರವೇಶಾತಿ ಸಂದರ್ಭದಲ್ಲಿಯೇ ಟ್ಯೂಷನ್‌ಗೆ ಶುಲ್ಕವನ್ನು ಪಡೆಯಲಾಗುತ್ತಿದೆ. ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಕಡ್ಡಾಯವಾಗಿ ಟ್ಯೂಷನ್ ಶುಲ್ಕ ನೀಡಬೇಕು. ಇಲ್ಲದಿದ್ದರೆ ಪ್ರಾಯೋಗಿಕ ಅಂಕದ ಹೆಸರಿನಲ್ಲಿ ವಿದ್ಯಾರ್ಥಿಗಳನ್ನು ಬೆದರಿಸುವ ಕೆಲಸ ನಡೆಯುತ್ತಿದೆ. ಲಕ್ಷಾಂತರ ರೂ. ಹಣವನ್ನು ಪಡೆ–ಯುತ್ತಿದ್ದಾರೆ. ಪಿ.ಯು ವಿದ್ಯಾರ್ಥಿಗಳ ಭವಿಷ್ಯಕ್ಕೆ ದಾರಿ ದೀಪವಾಗಬೇಕಿದ್ದ ಕಾಲೇಜುಗಳು ವಿಫಲತೆಯ ದಾರಿ ಹಿಡಿದಿವೆ ಎಂದು ಎಸ್‌ಎಫ್‌ಐ ಆರೋಪಿಸಿದೆ.

ಪದವಿ ಶಿಕ್ಷಣ ರಾಜ್ಯದಲ್ಲಿ ಚಿಂತಜನಕವಾಗಿದ್ದು, ಉನ್ನತ ಶಿಕ್ಷಣವನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಆಸಕ್ತಿ ತೋರುತ್ತಿಲ್ಲ. 46% ಸರ್ಕಾರಿ ಪದವಿ ಕಾಲೇಜುಗಳು ಉಪನ್ಯಾಸಕರ ಕೊರತೆಯನ್ನು ಎದುರಿಸುತ್ತಿವೆ. ಹಿಂದೆ ಬಿಜೆಪಿ ಸರ್ಕಾರ ಆರಂಭಿಸಿದ ಹೊಸಹೆಜ್ಜೆ, ಸಹಯೋಗ, ಆಪ್ತಮಿತ್ರ ಕಾರ್ಯಕ್ರಮಗಳು ಪದವಿ ಶಿಕ್ಷಣ ವ್ಯವಸ್ಥೆಯನ್ನು ದಿವಾಳಿಗೊಳಿಸಿವೆ. ಪರೀಕ್ಷೆ ವಿಧಾನ, ಅಂಕಪಟ್ಟಿ ದೋಷ, ಶುಲ್ಕ ಏರಿಕೆ ಸೆಮಿಸ್ಟರ್ ಪದ್ಧತಿಯ ಸಮಸ್ಯೆಗಳು ವಿದ್ಯಾರ್ಥಿಗಳನ್ನು ಭಾದಿಸುತ್ತಿವೆ.

ರಾಜ್ಯದಲ್ಲಿರುವ ವಿ.ವಿಗಳು ಭ್ರಷ್ಟಚಾರದ ಕೂಪಗಳಾಗಿವೆ. ಉಪಕುಲಪತಿ–ಕುಲಸಚಿವರುಗಳನ್ನು ನೇಮಿಸುವಲ್ಲಿ ಜಾತಿವಾದ ತಾಂಡವಾಡುತ್ತಿದೆ. ಮೂಲ ವಿಜ್ಞಾನದ ಅಧ್ಯಯನ, ವಸ್ತುನಿಷ್ಠ ಇತಿಹಾಸದ ಸಂಶೋಧನೆಗಳ ಬದಲಿಗೆ ಬಂಡವಾಳಶಾಹಿಗಳಿಗೆ ಪೂರಕವಾಗುವ ರೀತಿಯಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಖಾಸಗಿ ವಿವಿಗಳನ್ನು ಪ್ರೋತ್ಸಾಹಿಸುವ ಸರ್ಕಾರ, ಸರ್ಕಾರಿ ವಿವಿಗಳನ್ನು ನಿರ್ಲಕ್ಷಿಸಿದೆ. ವಿವಿಗಳಲ್ಲಿ ನಡೆಯುತ್ತಿದ್ದ ವಿದ್ಯಾರ್ಥಿ ಸಂಘಗಳ ಚುನಾವಣೆಗಳನ್ನು ರದ್ದು ಮಾಡಿ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ. ಸಿಂಡಿಕೇಟ್‌ಗಳಿಗೆ ತಮಗೆ ಬೇಕಾದವರನ್ನು ನೇಮಿಸುವ ಮೂಲಕ ಸರ್ಕಾರ ವಿವಿಯ ಘನತೆಯನ್ನು ಕುಗ್ಗಿಸಿದೆ. ಹಾಗಾಗಿ ನ್ಯಾಯಮೂರ್ತಿ ಲಿಂಗ್ಡೋ ಸಮಿತಿಯ ಶಿಫಾರಸ್ಸಿನಂತೆ ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ನಡೆಸಿ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಾಪಾಡಬೇಕಿದೆ ಎಂದು ಎಸ್‌ಎಫ್‌ಐ ಆಗ್ರಹಿಸಿದೆ.

ಪಿ.ಯು ವಿದ್ಯಾರ್ಥಿಗಳ ಮರುಮೌಲ್ಯಮಾಪನ, ಮರು ಎಣಿಕೆಗಾಗಿ ಹಿಂದೆ ನಿಗದಿ ಪಡಿಸಲಾಗಿದ್ದ ನಿಯಮಗಳಲ್ಲಿ ಹಲವಾರು ಬದಲಾವಣೆಗಳನ್ನು ತರುವ ಮೂಲಕ ವಿದ್ಯಾರ್ಥಿ–ವಿರೋಧಿ ನೀತಿಯನ್ನು ರಾಜ್ಯ ಸರಕಾರ ಅನುಸರಿಸುತ್ತಿದೆ.

ರಾಜ್ಯದಲ್ಲಿರುವ ಬಹುತೇಕ ಡಿಪ್ಲೋಮೊ, ಐಟಿಐ ಶಿಕ್ಷಣ ಸಂಸ್ಥೆಗಳು ಖಾಸಗಿಯಾಗಿದ್ದು, ಕನಿಷ್ಠ ಸೌಲಭ್ಯಗಳನ್ನು ನೀಡದೆ ವಿದ್ಯಾರ್ಥಿಗಳಿಗೆ ವಂಚಿಸುತ್ತಿವೆ. ಸರ್ಕಾರಿ ಕಾಲೇಜುಗಳ ಸ್ಥಿತಿ ಗಂಭೀರವಾಗಿದೆ. ಐಟಿಐನಲ್ಲಿ ಎನ್.ಸಿ.ವಿ.ಟಿ. ಮತ್ತು ಎಸ್.ಸಿ.ವಿ.ಟಿ. ಎಂಬ ಗೊಂದಲದಿಂದಾಗಿ, ಅತಂತ್ರದ ವಾತಾವರಣ ನಿರ್ಮಾಣವಾಗಿದೆ. ಪರೀಕ್ಷೆ ಪದ್ಧತಿಯಲ್ಲಂತೂ ವ್ಯಾಪಕ ಭ್ರಷ್ಟಚಾರ ನಡೆ–ಯುತ್ತಿದೆ. ಇದಕ್ಕೆ ಕಡಿವಾಣ ಹಾಕಿ ಪಾರದರ್ಶಕವಾಗಿ ಪರೀಕ್ಷೆಗಳು ನಡೆಯಬೇಕಿದೆ ಹಾಗೂ ಕಠಿಣವಾದ ಪಠ್ಯಕ್ರಮ ಸರಳೀಕರಣಗೊಳಿಸಿ ಪರೀಕ್ಷೆಯನ್ನು ಮಾತ್ರ

ಪುಟ 10 ಕ್ಕೆ





ನಮ್ಮ ಚುರು-ಟ್ವೀಟ್

@SitaramYechury

ಶಾರದಾದಿಂದ ನಾರದವರೆಗೆ ನಿಮ್ಮನ್ನು ಬಂಗಾಳ ಗಮನಿಸುತ್ತಿದೆ. #ಬಂಗಾಳ–ನೋಡುತ್ತಿದೆ #ಬಂಗಾಳ–ಉತ್ತರ–ಕೊಡುತ್ತದೆ

– ಸೀತಾರಾಂ ಯೆಚೂರಿ

ಅತಿಥಿ ಅಂಕಣ



ಪ್ರೊ.ಟಿ.ಆರ್. ಚಂದ್ರಶೇಖರ್

ಉದ್ಯೋಗ ಖಾತ್ರಿ ಯೋಜನೆಯ ಪರಿಣಾಮಗಳ ಬಗ್ಗೆ ಅನೇಕ ಅಧ್ಯಯನಗಳಾಗಿವೆ. ಈ ಎಲ್ಲ ಅಧ್ಯಯನಗಳು ಸದರಿ ಯೋಜನೆಯು ಭೂಸಾರ ಸಂರಕ್ಷಣೆಗೆ, ಅಂತರ್ ಜಲ ಸಂವರ್ಧನೆಗೆ, ಅರಣ್ಯ ಪ್ರದೇಶದ ವಿಸ್ತರಣೆಗೆ, ಪರಿಸರಕ್ಕೆ ರಕ್ಷಣೆಗೆ, ಭೂಮಿಯಲ್ಲಿ ಇಂಗಾಲದ ಪ್ರಮಾಣವನ್ನು ಉತ್ತಮ ಪಡಿಸಿರುವುದಕ್ಕೆ ನೀಡಿರುವ ಕೊಡುಗೆಯನ್ನು ದಾಖಲಿಸಿವೆ. ಈ ಯೋಜನೆಯಿಂದ ಆರ್ಥಿಕತೆಯ ಮೇಲೆ 2010ರ ನಂತರ ಉಂಟಾಗಿರುವ ಪರಿಣಾಮವನ್ನು ವಿಶ್ವಬ್ಯಾಂಕು ನಡೆಸಿದ ಅಧ್ಯಯನ ಮತ್ತು ಇತರೆ ಅಧ್ಯಯನಗಳು ಗುರುತಿಸಿವೆ. ಅದೇನೆಂದರೆ ಸದರಿ ಯೋಜನೆಯಿಂದಾಗಿ ದೇಶದಲ್ಲಿ ಅನುಭೋಗ ವೆಚ್ಚ ಹೆಚ್ಚಾಗದಿದ್ದರೂ ಅದು ಉನ್ನತ ಸ್ಥಾನದಲ್ಲಿದೆ. ಅದು ಕುಸಿತವನ್ನು ಕಂಡಿಲ್ಲ.

ಉದ್ಯೋಗ ಖಾತ್ರಿ ಯೋಜನೆ ಮತ್ತು ಮಾನವ ಹಕ್ಕು

ಇಂದು ನಾವು ಹಕ್ಕುಗಳ ಯುಗದಲ್ಲಿ ಬದುಕುತ್ತಿದ್ದೇವೆ. ಅಭಿವೃದ್ಧಿಯನ್ನು ಮಾನವ ಹಕ್ಕನ್ನಾಗಿ ಯುಎನ್ಒ ಘೋಷಿಸಿದೆ. ಎರಡನೆಯ ಮಹಾಯುದ್ಧದ ನಂತರ ಅನೇಕ ದಶಕಗಳ ಕಾಲ ಪಶ್ಚಿಮದ ದೇಶಗಳು ಶಿಕ್ಷಣ, ಆರೋಗ್ಯ, ಉದ್ಯೋಗ, ಆಹಾರ ಮುಂತಾದ ಅಭಿವೃದ್ಧಿ ಸಂಬಂಧಿ ಹಕ್ಕುಗಳನ್ನು ಮಾನವ ಹಕ್ಕುಗಳೆಂದು ಒಪ್ಪಲು ಸಿದ್ಧವಿರಲಿಲ್ಲ. ನಾಗರಿಕ ಮತ್ತು ರಾಜಕೀಯ ಹಕ್ಕುಗಳನ್ನು ಮಾತ್ರ ಮಾನವ ಹಕ್ಕುಗಳೆಂದು ಅವು ಪ್ರತಿಪಾದಿಸುತ್ತಿದ್ದವು. ಆದರೆ ಕಳೆದ ಶತಮಾನದ ಕೊನೆಯ ದಶಕದಲ್ಲಿ ಅಭಿವೃದ್ಧಿಶೀಲ ದೇಶಗಳ ಒತ್ತಡಕ್ಕೆ ಮಣಿದು ಯುಎನ್ಒ ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳನ್ನು ಮಾನವ ಹಕ್ಕುಗಳೆಂದು ಅನುಮೋದಿಸಿತು. ಇದನ್ನು ಅನೇಕ ವರ್ಷಗಳ ಕಾಲ ವಿರೋಧಿಸುತ್ತಾ ಬಂದಿದ್ದ ಅಮೇರಿಕೆಯು ಕೊನೆಗೆ ತನ್ನ ಅನುಮೋದನೆಯನ್ನು ನೀಡಿತು.

ಈ ಹಿನ್ನೆಲೆಯಲ್ಲಿ ಭಾರತವು ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗಗಳನ್ನು ಹಕ್ಕುಗಳನ್ನಾಗಿ ಪರಿಗಣಿಸಿ ಶಾಸನಗಳನ್ನು ರೂಪಿಸಿತು. ಆಹಾರ ಭದ್ರತೆಯ ಹಕ್ಕು, ಕಡ್ಡಾಯ ಮತ್ತು ಉಚಿತ ಶಿಕ್ಷಣದ ಹಕ್ಕು ಮತ್ತು ಉದ್ಯೋಗದ ಹಕ್ಕುಗಳನ್ನು ಇತ್ಯಾತ್ಮಕ(ಪಾಸಿಟಿವ್) ಹಕ್ಕುಗಳೆಂದು ಪರಿಭಾವಿಸಿಕೊಳ್ಳುವ ಅಗತ್ಯವಿದೆ. ರಾಜಕೀಯ ಮತ್ತು ನಾಗರಿಕ ಹಕ್ಕುಗಳು ಕೇವಲ ನೇತ್ಯಾತ್ಮಕ(ನೆಗೆಟಿವ್) ಹಕ್ಕುಗಳು. ಅವುಗಳನ್ನು ಚಲಾಯಿಸುವುದಕ್ಕೆ ಯಾವುದೇ ಅಡ್ಡಿ ಬಾರದಂತೆ ಸರ್ಕಾರ ಭರವಸೆ ನೀಡುತ್ತದೆ ಮತ್ತು ರಕ್ಷಣೆ ಒದಗಿಸುತ್ತದೆ. ಅವುಗಳನ್ನು ಚಲಾಯಿಸಲು ಅಗತ್ಯವಾದ ಪೋಷಣೆಗೆ ಅಲ್ಲಿ ಅವಕಾಶ ಇರುವುದಿಲ್ಲ. ಆಹಾರ, ಶಿಕ್ಷಣ, ಆರೋಗ್ಯ, ಅಭಿವೃದ್ಧಿ ಮುಂತಾದ ಸಂಗತಿಗಳನ್ನು ಮಾನವ ಹಕ್ಕುಗಳೆಂದು ಘೋಷಿಸುವುದಕ್ಕೆ ಅಮೇರಿಕೆಯು ಮೀನಮೇಷ ಎಣಿಸುತ್ತಿದ್ದುದಕ್ಕೆ ಕಾರಣವೆಂದರೆ ಅವುಗಳನ್ನು ಸಾರ್ವಜನಿಕರಿಗೆ ಒದಗಿಸಲು ಅಗತ್ಯವಾದ ಸಂಪನ್ಮೂಲ ಅಭಿವೃದ್ಧಿಶೀಲ ದೇಶಗಳಲ್ಲಿ ಇಲ್ಲ ಎಂಬುದಾಗಿತ್ತು.

ಮತ ಚಲಾಯಿಸುವ ಹಕ್ಕು, ಧಾರ್ಮಿಕ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು-ಇವೆಲ್ಲ ನೇತ್ಯಾತ್ಮಕ ಹಕ್ಕುಗಳು. ಇವು ಒಂದು ದೇಶದ ಎಲ್ಲ ನಾಗರಿಕರಿಗೂ ದೊರೆಯುತ್ತವೆ. ಅವುಗಳನ್ನು ಚಲಾಯಿಸಲು ನಾಗರಿಕನಿಗೆ ಅಧಿಕಾರವನ್ನು ಆಯಾ ದೇಶಗಳ ಸಂವಿಧಾನ ಒದಗಿಸಿರುತ್ತದೆ. ಆದರೆ ಶಿಕ್ಷಣದ, ಆರೋಗ್ಯದ, ಅಭಿವೃದ್ಧಿಯ, ಆಹಾರದ ಹಕ್ಕುಗಳನ್ನು ಪಡೆದುಕೊಳ್ಳಲು ಅನೇಕ ಜನವರ್ಗಕ್ಕೆ ಧಾರಣಾ ಸಾಮರ್ಥ್ಯ ಇರುವುದಿಲ್ಲ. ಅವರೆಲ್ಲ ಈ ಬಗೆಯ ಹಕ್ಕುಗಳಿಂದ ವಂಚಿತರಾಗಿ ಬಿಡುತ್ತಾರೆ. ಈ ಹಕ್ಕುಗಳನ್ನು ಅನುಭವಿಸಲು ನಾಗರಿಕರಿಗೆ ಸರ್ಕಾರ ಆಹಾರವನ್ನು, ಆರೋಗ್ಯ ಸೇವೆಯನ್ನು, ಉದ್ಯೋಗವನ್ನು ಒದಗಿಸಬೇಕಾಗುತ್ತದೆ. ಸರ್ಕಾರವು ಇವುಗಳನ್ನೆಲ್ಲ ಒದಗಿಸಬೇಕು ಎಂದು ನಾಗರಿಕರು ಒತ್ತಾಯ ಮಾಡಬಹುದು.

ಆಹಾರ ಭದ್ರತೆ ಮತ್ತು ಉದ್ಯೋಗ ಖಾತ್ರಿ ಹಕ್ಕು

ಈ ಹಕ್ಕುಗಳನ್ನು ಜನತೆಗೆ ಒದಗಿಸುವುದಕ್ಕೆ ಅಪಾರ ಸಂಪನ್ಮೂಲ ಬೇಕು ಎಂಬ ವಾದಕ್ಕೆ ಗಟ್ಟಿಯಾದ ಆಧಾರವೇನಿಲ್ಲ. ಉದಾಹರಣೆಗೆ ಭಾರತದಲ್ಲಿ ಜನರಿಗೆ ಆಹಾರ ಭದ್ರತೆಯನ್ನು ನೀಡಲು ಅಗತ್ಯವಾದ ಸಂಪನ್ಮೂಲ ದೇಶದ ಜಿಡಿಪಿಯ ಶೇಕ್ಕಡಂತ ಕಡಿಮೆ. ಕೇಂದ್ರ ಸರ್ಕಾರವು 2016-17ನೆಯ ಸಾಲಿಗೆ ಉದ್ಯೋಗ ಖಾತ್ರಿ ಯೋಜನೆಗೆ ನೀಡಿರುವ ಮೊತ್ತ ರೂ38500 ಕೋಟಿ. ಇದು ಬಜೆಟ್ಟಿನ ಒಟ್ಟು ವೆಚ್ಚದ ಶೇ0.2ರಷ್ಟಾಗುತ್ತದೆ. ಆದರೆ 2014-15ನೆಯ ಸಾಲಿನಲ್ಲಿ ತೆರಿಗೆಗಳಲ್ಲಿನ ರಿಯಾಯಿತಿ ಮತ್ತು ವಿನಾಯಿತಿ ಮೂಲಕ ಉದ್ದಿಮೆ ವಲಯದಿಂದ ಸರ್ಕಾರವು ಕಳೆದುಕೊಂಡ ತೆರಿಗೆ ಮೊತ್ತ ರೂ. 5.8 ಲಕ್ಷ ಕೋಟಿ(ಟ್ಯಾಕ್ಸ್ ಪೋರ್‌ಗಾನ್). ಇದು 2016-17ನೆಯ ಸಾಲಿನ ಬಜೆಟ್ಟು ಗಾತ್ರದ ಶೇ 30ರಷ್ಟಾಗುತ್ತದೆ. ಇದಲ್ಲದೆ ತೆರಿಗೆ ವಿವಾದಗಳಿಂದಾಗಿ ಉದ್ದಿಮೆಗಳಿಂದ ಉಳಿದುಕೊಂಡಿರುವ ತೆರಿಗೆ ಬಾಕಿ ಮೊತ್ತ ಕೂಡ ರೂ 3 ಲಕ್ಷ ಕೋಟಿ ಎಂದು ಅಂದಾಜು ಮಾಡಲಾಗಿದೆ. ಈ ಎಲ್ಲ ಮೊತ್ತಗಳಿಗೆ ಹೋಲಿಸಿದರೆ ಉದ್ಯೋಗ ಖಾತ್ರಿ ಯೋಜನೆ ಮತ್ತು ಆಹಾರ ಭದ್ರತೆ ಯೋಜನೆಗಳಿಗೆ ಖರ್ಚು ಮಾಡುತ್ತಿರುವ ಮೊತ್ತ ನಿಕೃಷ್ಟವಾದುದು. ಆದರೆ ನಿಕೃಷ್ಟ ಮೊತ್ತದ ಕಾರ್ಯಕ್ರಮಗಳ ಬಗ್ಗೆ ಉಗ್ರ ಟೀಕೆ ಮಾಡುವ ನಮ್ಮ ನಗರವಾಸಿ ಮಧ್ಯಮವರ್ಗದ ಜನರು ಉದ್ದಿಮೆಗಳಿಗೆ, ವ್ಯಾಪಾರಗಾರರಿಗೆ, ವಾಣಿಜ್ಯೋದ್ಯಮಗಳಿಗೆ ನೀಡುತ್ತಿರುವ ಬೃಹತ್ ಮೊತ್ತದ ರಿಯಾಯಿತಿಗಳ ಬಗ್ಗೆ ಚಕಾರವೆತ್ತುತ್ತಿಲ್ಲ. ಇದರ ತಥ್ಯ ಇಷ್ಟೆ! ನಮ್ಮ ಸಮಾಜ ಯಾವತ್ತೂ ಬಡವರ ಬಗ್ಗೆ, ಹಸಿವವನ್ನು ಎದುರಿಸುತ್ತಿರುವವರ ಬಗ್ಗೆ, ಸಾಮಾಜಿಕ ಪ್ರತ್ಯೇಕತನಕ್ಕೆ ಒಳಗಾದವರ ಹಿತಾಸಕ್ತಿಗಳ ಬಗ್ಗೆ ಮಾತನಾಡಿಲ್ಲ.

ಡಾ. ಬಿ.ಆರ್.ಅಂಬೇಡ್ಕರ್ ಅವರು ತಮ್ಮ ಬರವಣಿಗೆಗಳಲ್ಲಿ ಮತ್ತೆ ಮತ್ತೆ ರಾಜಕೀಯ ಮತ್ತು ನಾಗರಿಕ ಸ್ವಾತಂತ್ರ್ಯಗಳಿಗಿಂತ ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳ ಬಗ್ಗೆ ಮಾತನಾಡುತ್ತಿದ್ದರು. ರಾಜಕೀಯ ಸ್ವಾತಂತ್ರ್ಯದಿಂದ ಮಾತ್ರ ಜನರು ಬದುಕು ಸಮೃದ್ಧವಾಗುವುದಿಲ್ಲ. ಬಡತನದಿಂದ, ಹಸಿವಿನಿಂದ, ಸಾಮಾಜಿಕ ಪ್ರತ್ಯೇಕತನದಿಂದ, ಅಸಮಾನತೆಯಿಂದ ಬಿಡುಗಡೆ ಪಡೆಯಬೇಕಾದರೆ ಜನರ ಧಾರಣ ಶಕ್ತಿಯನ್ನು ಉತ್ತಮ ಪಡಿಸಬೇಕು. ಇದು ಇತ್ಯಾತ್ಮಕ ಹಕ್ಕುಗಳಿಂದ ಸಾಧ್ಯ. ಆಹಾರ ಭದ್ರತೆಯ ಬಗ್ಗೆ ಮತ್ತು ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಉಳ್ಳವರು ಏನೆಲ್ಲ ಟೀಕೆ ಮಾಡುತ್ತಿರಬಹುದು. ಅಲ್ಲಿ ಅನೇಕ ಲೋಪದೋಷಗಳಿರಬಹುದು. ಆದರೆ ಅದು ಕೆಳಸ್ತರದಲ್ಲಿ ಬದುಕುತ್ತಿರುವ ದುಡಿಮೆಗಾರರಿಗೆ ಕಾಮಧೇನುವಾಗಿದೆ.

ಕರ್ನಾಟಕದ ಅನ್ನಭಾಗ್ಯ ಯೋಜನೆಯಲ್ಲಿ ಅಕ್ಕಿಯನ್ನು ಉಚಿತವಾಗಿ ನೀಡುತ್ತಿರುವಂತೆ ಕಾಣುತ್ತದೆ. ಆದರೆ ಅದು ಉಚಿತವಾಗಿ ನೀಡುತ್ತಿರುವ ಭಾಗ್ಯವಲ್ಲ. ಅರ್ಥಶಾಸ್ತ್ರದಲ್ಲಿ ದುಡಿಮೆಗಾರರಿಗೆ ಅವರು ಉತ್ಪಾದಿಸಿದ ಮೌಲ್ಯಕ್ಕೆ ಸಮನಾಗಿ ಕೂಲಿಯನ್ನು ನೀಡಬೇಕು ಎಂಬ ನಿಯಮವಿದೆ. ವಾಸ್ತವದಲ್ಲಿ ದುಡಿಮೆಗಾರರಿಗೆ ಅವರ ದುಡಿಮೆಗೆ ಸಮಾನವಾಗಿ ಸಂಭಾವನೆ ದೊರೆಯುತ್ತಿಲ್ಲ. ಈ ಅಂತರವನ್ನು ಸಮಾಜ ಅನ್ನಭಾಗ್ಯದ ಮೂಲಕ ದುಡಿಮೆಗಾರರಿಗೆ ನೀಡುತ್ತದೆ. ಅನ್ನಭಾಗ್ಯದಿಂದ, ಉದ್ಯೋಗ ಖಾತ್ರಿ ಯೋಜನೆಯಿಂದ ದುಡಿಮೆಗಾರರು ಸೋಮಾರಿಗಳಾಗುತ್ತಿದ್ದಾರೆ, ದುಡಿಮೆಗೆ ಕೂಲಿಕಾರರೇ ದೊರೆಯುತ್ತಿಲ್ಲ ಎಂದು ಉಳ್ಳವರು, ನಗರದ ಮಧ್ಯಮವರ್ಗದ ಜನರು ಹುಯಿಲೆಬ್ಬಿಸುತ್ತಿದ್ದಾರೆ. ಕೂಲಿಕಾರರ ಬದುಕು ಉತ್ತಮವಾಗಿ ಕೂಲಿ ಮಾಡುವ ಒತ್ತಡದಿಂದ ಅವರು ಬಿಡುಗಡೆಯನ್ನು ಪಡೆಯಲೇಬಾರದು ಎಂಬ ಉಳ್ಳವರ ಪ್ರತಿಗಾಮಿ ಧೋರಣೆ ಇದ್ದಂತಿದೆ.

ಉದ್ಯೋಗ ಖಾತ್ರಿ ಯೋಜನೆ

ಉದ್ಯೋಗ ಖಾತ್ರಿ ಯೋಜನೆಯು 2006ರಲ್ಲಿ ದೇಶದ 200 ಹಿಂದುಳಿದ ಜಿಲ್ಲೆಗಳಲ್ಲಿ ಆರಂಭವಾಯಿತು. ಮುಂದೆ ಅದನ್ನು ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲಾಯಿತು. ಇದನ್ನು ಜಗತ್ತಿನಲ್ಲಿಯೇ ಬೃಹತ್ ಉದ್ಯೋಗ ಯೋಜನೆ ಎಂದು ಹೇಳಲಾಗುತ್ತಿದೆ.

ಕರ್ನಾಟಕದಲ್ಲಿ ಇದು 2006-07ರಿಂದ ಜಾರಿಯಲ್ಲಿದೆ. ಯಾವುದೇ ಯೋಜನೆಯಾಗಲಿ ಅದು ಯಶಸ್ವಿಯಾಗಬೇಕಾದರೆ ಅದರ ಅನುಷ್ಠಾನ ಮತ್ತು ಅದರ ಫಲಶ್ರುತಿ ಮುಖ್ಯ. ಉದ್ಯೋಗ ಖಾತ್ರಿ ಯೋಜನೆಯ ಪರಿಣಾಮಗಳ ಬಗ್ಗೆ ಅನೇಕ ಅಧ್ಯಯನಗಳಾಗಿವೆ. ಈ ಎಲ್ಲ ಅಧ್ಯಯನಗಳು ಸದರಿ ಯೋಜನೆಯು ಭೂಸಾರ ಸಂರಕ್ಷಣೆಗೆ, ಅಂತರ್ ಜಲ ಸಂವರ್ಧನೆಗೆ, ಅರಣ್ಯ ಪ್ರದೇಶದ ವಿಸ್ತರಣೆಗೆ, ಪರಿಸರಕ್ಕೆ ರಕ್ಷಣೆಗೆ, ಭೂಮಿಯಲ್ಲಿ ಇಂಗಾಲದ ಪ್ರಮಾಣವನ್ನು ಉತ್ತಮ ಪಡಿಸಿರುವುದಕ್ಕೆ ನೀಡಿರುವ ಕೊಡುಗೆಯನ್ನು ದಾಖಲಿಸಿವೆ. ಈ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳು ಸರ್ವೆ ಸಾಮಾನ್ಯವಾಗಿ (ಶೇ80) ಭೂಸಾರ ಸಂರಕ್ಷಣೆ, ನೀರಿನ ಸಂವರ್ಧನೆ, ಭೂಸವಕಳಿ ತಡೆಯುವುದಕ್ಕೆ ಸಂಬಂಧಿಸಿರುತ್ತವೆ. ಈ ಯೋಜನೆಯಿಂದ ಆರ್ಥಿಕತೆಯ ಮೇಲೆ 2010ರ ನಂತರ ಉಂಟಾಗಿರುವ ಪರಿಣಾಮವನ್ನು ವಿಶ್ವಬ್ಯಾಂಕು ನಡೆಸಿದ ಅಧ್ಯಯನ ಮತ್ತು ಇತರೆ ಅಧ್ಯಯನಗಳು ಗುರುತಿಸಿವೆ. ಅದೇನೆಂದರೆ ಸದರಿ ಯೋಜನೆಯಿಂದಾಗಿ ದೇಶದಲ್ಲಿ ಅನುಭೋಗ ವೆಚ್ಚ ಹೆಚ್ಚಾಗದಿದ್ದರೂ ಅದು ಉನ್ನತ ಸ್ಥಾನದಲ್ಲಿದೆ. ಅದು ಕುಸಿತವನ್ನು ಕಂಡಿಲ್ಲ.

ನಮ್ಮ ದೇಶವು 2008ರಲ್ಲಿ ಎದುರಿಸಿದ ಆರ್ಥಿಕ ಕುಸಿತದ ಸಂದರ್ಭದಲ್ಲಿ ಉದ್ಯೋಗ ಖಾತ್ರಿ ಯೋಜನೆ ಆರ್ಥಿಕತೆಯಲ್ಲಿ ಅನುಭೋಗದ ಮಟ್ಟವನ್ನು ಕಾಯ್ದುಕೊಂಡಿತು. ಇಂದು ನಮ್ಮ ಆರ್ಥಿಕತೆಯು ಬೇಡಿಕೆಯ ಕೊರತೆಯನ್ನು ತೀವ್ರವಾಗಿ ಅನುಭವಿಸುತ್ತಿದೆ. ನಮ್ಮ ಜಿಡಿಪಿಯ ಬೆಳವಣಿಗೆ ಗತಿಯು ಮಂದವಾಗಿರುವುದಕ್ಕೆ ತಜ್ಞರು ಗುರುತಿಸಿರುವ ಒಂದು ಕಾರಣವೆಂದರೆ ಬೇಡಿಕೆಯಲ್ಲಿನ ಕೊರತೆ. ಮೇಕ್ ಇನ್ ಇಂಡಿಯಾ, ಸ್ಟಾರ್ಟ್‌ಅಪ್ ಇಂಡಿಯಾ, ಡಿಜಿಟಲ್ ಇಂಡಿಯಾ ಮುಂತಾದವು ಮುಕ್ಕಾಲು ಮೂರುವೀಸೆ ಪಾಲು ಉಳ್ಳವರ ವರಮಾನವನ್ನು ಹೆಚ್ಚಿಸಬಹುದು. ಇದರಿಂದ ನಾಡಿನಲ್ಲಿ ಬೇಡಿಕೆ ದಷ್ಟಪುಷ್ಟವಾಗಲಾರದು. ಇವೆಲ್ಲ 'ಮೊದಲು ಉತ್ಪಾದನೆ, ನಂತರ ವಿತರಣೆ' ಅನ್ನುವ ಎನ್ಐಟಿಐ (ನೀತಿ) ಆಯೋಗದ ಪ್ರಣಾಳಿಕೆಯನ್ನು ಆಧರಿಸಿವೆ. ಈ ಬಗೆಯ ಪ್ರಣಾಳಿಕೆಯು ನಮ್ಮ ಅಭಿವೃದ್ಧಿ ಸಮಸ್ಯೆಗಳನ್ನು ನಿವಾರಿಸಲಾರವು. ಉತ್ಪಾದನೆ ಮತ್ತು ವಿತರಣೆ- ಎರಡನ್ನು ಏಕಕಾಲಕ್ಕೆ ನಿರ್ವಹಿಸುವ ಮಾದರಿ ನಮಗೆ ಬೇಕಾಗಿದೆ. ಈ ದಿಶೆಯಲ್ಲಿ ಎಮ್‌ಜಿಎನ್‌ಆರ್‌ಈಜಿಎ ಕಾರ್ಯಕ್ರಮ ಅಗತ್ಯವಾಗಿದೆ. ನಮ್ಮದು ಮೂಲತಃ ಶ್ರೇಣೀಕೃತ ಸಮಾಜ. ಅಸಮಾನತೆಯು ಪರಂಪರಾಗತವಾಗಿ ಹರಿದುಕೊಂಡು ಬರುತ್ತಿದೆ. ಇದನ್ನು ತೊಲಗಿಸುವುದು ಸುಲಭದ ಕೆಲಸವಲ್ಲ.

ಉದ್ಯೋಗ ಖಾತ್ರಿ ಯೋಜನೆಯ ಸಮಸ್ಯೆಗಳು

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮತ್ತು ಅನ್ನಭಾಗ್ಯ ಯೋಜನೆಯಲ್ಲಿ ಎಲ್ಲವೂ ಸರಿಯಿದೆ ಎಂದು ಹೇಳಲು ಬರುವುದಿಲ್ಲ. ಅಲ್ಲಿ ಅನೇಕ ಸೈದ್ಧಾಂತಿಕ ಮತ್ತು ಸಾಮಾಜಿಕ ಸಮಸ್ಯೆಗಳಿವೆ.

ಮೊದಲನೆಯದಾಗಿ ಯಾವುದನ್ನು ಮೇಲಿನಿಂದ ಹೇರಲಾಗಿರುತ್ತದೋ ಅದು ಅನುಷ್ಠಾನದಲ್ಲಿ ಯಶಸ್ವಿಯಾಗುವುದು ಸಾಧ್ಯವಿಲ್ಲ. ನಿಜ, ಉದ್ಯೋಗ ಖಾತ್ರಿ ಯೋಜನೆಯು ಜನರ, ಹೋರಾಟಗಾರರ ಒತ್ತಾಯದ ಫಲವಾಗಿ ಜಾರಿಗೆ ಬಂದಿದೆ. ಆದರೆ ಇದರ ಅನುಷ್ಠಾನದ ಜವಾಬುದಾರಿಯು ಗ್ರಾಮೀಣ ಪ್ರದೇಶ ಉನ್ನತ ವರ್ಗದ ವಶದಲ್ಲಿದೆ. ಈ ಯೋಜನೆಯು ಯಾರಿಗಾಗಿದೆಯೋ ಅವರು ಒತ್ತಾಯ ಮಾಡಿ ಮತ್ತು ಅದರ ನಿರ್ವಹಣೆಯ ಜವಾಬುದಾರಿಯನ್ನು ತಮ್ಮ ವಶಪಡಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ. ಅವರ ಧಾರಣಾ ಸಾಮರ್ಥ್ಯ ಕೆಳಮಟ್ಟದಲ್ಲಿದೆ. ಈ ವರ್ಗದಲ್ಲಿ ಸಾಕ್ಷರತೆಯ ಪ್ರಮಾಣ ಕಡಿಮೆ ಮತ್ತು ಶಿಕ್ಷಣದ ಮಟ್ಟವೂ ಕಡಿಮೆ.

ಈ ಯೋಜನೆಯಲ್ಲಿ ಪ್ರತಿ ಕುಟುಂಬಕ್ಕೆ ವಾರ್ಷಿಕ ನೂರು ದಿನಗಳ ಉದ್ಯೋಗ ನೀಡಬೇಕಾಗಿದೆ. ಆದರೆ ಅಧ್ಯಯನಗಳು ತೋರಿಸುತ್ತಿರುವಂತೆ ಉದ್ಯೋಗ ಪಡೆದ ಒಟ್ಟು ಕುಟುಂಬಗಳಲ್ಲಿ 100 ದಿನಗಳ ಉದ್ಯೋಗ ಪಡೆದ ಕುಟುಂಬಗಳ ಪ್ರಮಾಣ ಕರ್ನಾಟಕದಲ್ಲಿ ಶೇ. 20 ಮೀರುವುದಿಲ್ಲ. ಮತ್ತೆ ಒಂದು ಅಧ್ಯಯನದ ಪ್ರಕಾರ ಕರ್ನಾಟಕದಲ್ಲಿ ಪ್ರತಿ ಶಾಸಕರ ಕ್ಷೇತ್ರದಲ್ಲಿ ಸದರಿ ಯೋಜನೆಯಲ್ಲಿ ವಾರ್ಷಿಕ ವೆಚ್ಚವಾದ ಮೊತ್ತ 2009-10ರಲ್ಲಿ ರೂ12 ಕೋಟಿ, 2010-11 ರಲ್ಲಿ ವೆಚ್ಚವಾದ ಮೊತ್ತ ರೂ 9 ಕೋಟಿ ಮತ್ತು 2011-12ನೆಯ ಸಾಲಿನಲ್ಲಿ ಅದು ರೂ 4 ಕೋಟಿಗಿಳಿದಿದೆ.

ಜಾಬ್ ಕಾರ್ಡ್ ಕೊಡುವುದರಲ್ಲಿ, ಬ್ಯಾಂಕ್ ಖಾತೆ ತೆರೆಯುವುದರಲ್ಲಿ, ಖಾತೆಗೆ ಕೂಲಿಯನ್ನು ಜಮಾ ಮಾಡುವುದರಲ್ಲಿ, ಬೇಡಿಕೆಗನುಗುಣವಾಗಿ ಉದ್ಯೋಗ ನೀಡುವುದರಲ್ಲಿ, ಅನೇಕ ಸಮಸ್ಯೆಗಳಿವೆ. ಲಂಚ, ರುಷುವತ್ತುಗಳ ಸಮಸ್ಯೆಯಿದೆ, ಅನಗತ್ಯ ಕಾಲವಿಳಂಬದ ಸಮಸ್ಯೆಯಿದೆ. ಜಮೀನುದಾರಿ ಪಾಳೆಯಗಾರರ ಅಟ್ಟಹಾಸವಿದೆ. ಸದರಿ ಯೋಜನೆಯಲ್ಲಿ ರೂ.174 ದಿನಗೂಲಿ ನೀಡಿದರೆ ಅದು ಒಂದು ಸ್ಟಾಂಡರ್ಡ್ ಆಗಿ ಬಿಡುತ್ತದೆ. ರೈತರು ನೀಡಬೇಕಾಗುತ್ತದೆ. ಅದಕ್ಕಾಗಿ ಜಮೀನುದಾರರು ಸದರಿ ಯೋಜನೆಯನ್ನು ವಿರೋಧಿಸುತ್ತಿದ್ದಾರೆ. ಅದನ್ನು ವಿಫಲಗೊಳಿಸಲು ಅವರು ಪ್ರಯತ್ನಿಸುತ್ತಿದ್ದಾರೆ.

ಈ ಯೋಜನೆಯ ಮುಖ್ಯ ಗುರಿ ಗ್ರಾಮೀಣ ಪ್ರದೇಶದಲ್ಲಿನ ವಲಸೆಯನ್ನು ತಡೆಯುವುದು. ಆದರೆ ನಮ್ಮ ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ತೀವ್ರ ಗತಿಯಲ್ಲಿ ನಡೆಯುತ್ತಿದೆ. ಉದಾಹರಣೆಗೆ 2001 ರಿಂದ 2011ರ ಅವಧಿಯಲ್ಲಿ ಗ್ರಾಮೀಣ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಶೇ 7.40ರಷ್ಟಿದ್ದರೆ ನಗರ ಪ್ರದೇಶದ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಶೇ31.54. ಇದರ ಅರ್ಥ ಏನು? ವಲಸೆಯು ತೀವ್ರ ಗತಿಯಲ್ಲಿದೆ. ವಲಸೆಯು ತೀವ್ರ ಗತಿಯಲ್ಲಿದೆ ಎಂಬುದೇ ಉದ್ಯೋಗ ಖಾತ್ರಿ ಯೋಜನೆಯು ವಿಫಲವಾಗಿದೆ ಎಂಬುದಕ್ಕೆ ಪ್ರಮಾಣ. ಆದರೆ ಇದು ಯಶಸ್ವಿಯಾಗಬೇಕು. ಅನೇಕ ಸ್ವಯಂಸೇವಾ ಸಂಸ್ಥೆಗಳು ಬಾಗಲಕೋಟೆ, ಕಲಬುರಗಿ, ಬಳ್ಳಾರಿ ಮುಂತಾದ ಜಿಲ್ಲೆಗಳಲ್ಲಿ ಸದರಿ ಯೋಜನೆಯ ಅನುಷ್ಠಾನಕ್ಕೆ ಶ್ರಮಿಸುತ್ತಿವೆ. ರಾಯಚೂರು ಜಿಲ್ಲೆಯಲ್ಲಿ ಸದರಿ ಯೋಜನೆಯಲ್ಲಿ ದುಡಿಯುವ ದುಡಿಮೆಗಾರರ ರಾಜ್ಯ ಸಂಘಟನೆಯನ್ನು ರೂಪಿಸಲಾಗಿದೆ.

ಸರ್ಕಾರಕ್ಕೆ ಜನಪ್ರಿಯ ಯೋಜನೆಗಳನ್ನು ಘೋಷಿಸುವುದಕ್ಕೆ ಎಷ್ಟು ಗಮನ ನೀಡುತ್ತವೆಯೋ ಅಷ್ಟು ಗಮನವನ್ನು ಅವುಗಳ ಅನುಷ್ಠಾನಕ್ಕೆ ತೋರಿಸುವುದಿಲ್ಲ. ಇದು ಬದಲಾಗಬೇಕು. ಇದು ಬದಲಾಗುತ್ತದೆ ಎಂದು ನಾವು ಭಾವಿಸಬಹುದು. ■

ಆಧಾರ್: ಅಂದು 'ರಾಷ್ಟ್ರೀಯ ಭದ್ರತೆಗೆ ಮಾರಕ', ಇಂದು 'ಬಡವರ ಕಲ್ಯಾಣ'ದ ಕಾನೂನು!



'ಅಚ್ಛೇ ದಿನ್'ಗಳ ಇನ್ನೊಂದು ಮ್ಯಾಜಿಕ್

2009ರಿಂದ 2014 ರವರೆಗೆ ತಾನೇ ಸತತವಾಗಿ ವಿರೋಧಿಸಿಕೊಂಡು ಬಂದಿದ್ದ 'ಆಧಾರ್' ಮಸೂದೆಯನ್ನು ಎನ್‌ಡಿಎ ಸರಕಾರ ಹೆಸರು ಬದಲಿಸಿ, 'ಮನಿ ಬಿಲ್' ಎಂಬ ವೇಷ ತೊಡಿಸಿ ಮಾರ್ಚ್ 4ರಂದು ಲೋಕಸಭೆಯಲ್ಲಿ ತರಾತುರಿಯಿಂದ ಮಂಡಿಸಿತು. ಆಗ ಲೋಕಸಭೆಯ 545 ಸದಸ್ಯರಲ್ಲಿ ಸದನದಲ್ಲಿ ಹಾಜರಿದ್ದವರು 73 ಮಂದಿ ಮಾತ್ರ. ಧ್ವನಿಮತದಿಂದ ಅದು ಅಂಗೀಕಾರಗೊಂಡಿತು. ಮಾರ್ಚ್ 16– ರಾಜ್ಯಸಭೆಯಲ್ಲಿ ತೀವ್ರ ಚರ್ಚೆ ನಡೆಯಿತು. ಐದು ತಿದ್ದುಪಡಿಗಳನ್ನು ಬಹುಮತದಿಂದ ಸೂಚಿಸಿ ಅದನ್ನು ಲೋಕಸಭೆಗೆ ಹಿಂದಿರುಗಿಸಿತು. ಲೋಕಸಭೆ ಅವುಗಳಲ್ಲಿ ಯಾವುದನ್ನೂ ಗಮನಕ್ಕೇ ತಗೊಳ್ಳದೇ ಅದೇ ದಿನ ಮಸೂದೆಗೆ ಕಾನೂನಿನ ರೂಪ ಕೊಟ್ಟಿತು! ಸುಪ್ರಿಮ ಕೋರ್ಟ್ 'ಆಧಾರ್'ಅನ್ನು ಕಡ್ಡಾಯಗೊಳಿಸಬಾರದು ಎಂದಿದ್ದರೂ ಈಗ ಅದು ಕಾನೂನು! ಏಳುವರ್ಷಗಳ ಹಿಂದೆ ಬೇಡವಾಗಿದ್ದು ಈಗ ಅತ್ಯಂತ ಆವಶ್ಯಕ ಕ್ರಮ ಹೇಗಾಯಿತು?

* "ಕಾಂಗ್ರೆಸಿಗರು ಅದು ಸರ್ವರೋಗ ಪರಿಹಾರಕ ಮೂಲಿಕೆ ಎಂಬಂತೆ ಕುಣಿಯುತ್ತಿದ್ದಾರೆ. ಅದ–ಕ್ಕೆ ಮಾಡಿರುವ ಖರ್ಚೆಷ್ಟು, ಅದಕ್ಕೆಂದು ತೆಗೆದಿಟ್ಟ ನಿಧಿಗಳೆಲ್ಲ ಎಲ್ಲಿ ಹೋದವು, ಯಾರಿಗೆ ಅದರಿಂದ ಪ್ರಯೋಜನವಾಯಿತು– ಈ ಎಲ್ಲ ಪ್ರಶ್ನೆಗಳಿಗೆ, ಸುಪ್ರಿಂ ಕೋರ್ಟ್ ಸರಕಾರವನ್ನು ತರಾಟೆಗೆ ತಗೊಂಡ ಮೇಲೆ ಜನರು ಪ್ರಧಾನಿಗಳಿಂದ ಉತ್ತರ ಬಯಸುತ್ತಿದ್ದಾರೆ"

ಇದು ಸಪ್ಟಂಬರ್ 2013ರಲ್ಲಿ ತಿರುಚಿರಾಪಳ್ಳಿಯಲ್ಲಿ ನರೇಂದ್ರ ಮೋದಿಯವರು ಬಿಜೆಪಿ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಉದುರಿಸಿದ ನುಡಿಮುತ್ತುಗಳು. ಆಗ ಅವರು ಪ್ರಧಾನಿಗಳಾಗಿರಲಿಲ್ಲ, ಪ್ರಧಾನಿ ಪಟ್ಟ–ಕ್ಕೆ ಬಿಜೆಪಿ ಅಭ್ಯರ್ಥಿಯಾಗಿದ್ದರು. ಅವರು 'ಅದು' ಎಂದಿರುವುದು ಯುಪಿಎ ಸರಕಾರ ಆರಂಭಿಸಿದ್ದ 'ಆಧಾರ್ ಯೋಜನೆ'ಯ ಬಗ್ಗೆ!

ಈಗ ಅವರೇ ಪ್ರಧಾನಿಯಾಗಿ, ಅವರ ಸರಕಾರ ಅದೇ 'ಆಧಾರ್'ಅನ್ನು ಲೋಕಸಭೆಯಲ್ಲಿ ಪಾಸು ಮಾಡಿಸಿ ಕೊಂಡಿದೆ, ಅದೂ ಕೂಡ ಅದಕ್ಕೆ 'ಧನ ವಿನಿಯೋಜನೆಯ ವಿಧೇಯಕ' ಅಂದರೆ ಹಣವನ್ನು ಬಳಸುವುದರ ಕುರಿತಾದ ಮಸೂದೆ ಮಾತ್ರ ಎಂದು ವೇಷ ತೊಡಿಸಿ ರಾಜ್ಯಸಭೆಯ ಅಂಗೀಕಾರ ಮುದ್ರೆ ಅಗತ್ಯವಿಲ್ಲದಂತೆ ಮಾಡುವ ಹುನ್ನಾರದ ಮೂಲಕ!

* "..ನಾವೀಗ ಆಧಾರ್ ಸಂಖ್ಯೆಯ ಯುಗವನ್ನು ಪ್ರವೇಶಿಸುತ್ತಿದ್ದೇವೆ. ಸರಕಾರ ಇತ್ತೀಚೆಗೆ ಆ ಧಾರ್ ಸಂಖ್ಯೆಯನ್ನು ಹಲವು ಚಟುವಟಿಕೆಗಳನ್ನು ನಡೆಸಲು ಒಂದು ಶರತ್ತಾಗಿ ಮಾಡಿದೆ–ಮದುವೆಗಳ ನೋಂದಣಿಯಿಂದ ಹಿಡಿದು ಆಸ್ತಿ ದಸ್ತಾವೇಜುಗಳನ್ನು ಮಾಡುವ ವರೆಗೆ. ಇತರರ ವ್ಯವಹಾರಗಳಲ್ಲಿ ಮೂಗು ತೂರಿಸುವವರು ಈ ವ್ಯವಸ್ಥೆಯನ್ನು ಮುರಿದು ಬ್ಯಾಂಕ್ ಖಾತೆಗಳನ್ನು ಮತ್ತಿತರ ಮಹತ್ವದ ವಿವರಗಳನ್ನು ಪಡೆಯಲು ಸಾಧ್ಯವಾಗುತ್ತದೆಯೋ? ಇದು ಎಂದಾದರೂ ಸಾಧ್ಯವಾದರೆ ಅದರ ಪರಿಣಾಮಗಳಿ ಮತ್ತಷ್ಟು ಗೊಂದಲಕಾರಿಯಾಗಬಹುದು"

ಇದು ಈಗ ಯಾವುದೇ ಪ್ರತಿಪಕ್ಷದ ಮುಖಂಡರು ಮೋದಿ ಸರಕಾರದ ಈ ಮಸೂದೆಯ ಬಗ್ಗೆ ಮಾಡಿರುವ ಟಿಪ್ಪಣಿಯಲ್ಲ, ಸ್ವತಃ ಈಗಿನ ಹಣಕಾಸು ಮಂತ್ರಿಗಳು ರಾಜ್ಯಸಭೆಯಲ್ಲಿ ವಿರೋಧಪಕ್ಷದ ಮುಖಂಡರಾಗಿದ್ದಾಗ ಮಾಡಿರುವ ಟೀಕೆ.

ಅವರೇ ಈ ಬಾರಿ ಲೋಕಸಭೆಯಲ್ಲಿ ಅದನ್ನು 'ಆಧಾರ್(ಹಣಕಾಸು ಮತ್ತು ಇತರ ಸಬ್ಸಿಡಿಗಳು, ಸೌಲಭ್ಯಗಳು ಮತ್ತು ಸೇವೆಗಳನ್ನು ಗುರಿನಿರ್ದೇಶಿತವಾಗಿ ಒದಗಿಸುವ) ಮಸೂದೆ, 2016' ಎಂಬ ಹೆಸರಿನಲ್ಲಿ ಮಂಡಿಸಿದ್ದಾರೆ!

* ಈ ಆಧಾರ್ ಪರಿಕಲ್ಪನೆಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನಂದನ್ ನೀಲೇಕಣಿಯವರ ವಿರುದ್ಧ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದು ಈಗ ಕೇಂದ್ರ ಮಂತ್ರಿಯಾಗಿರುವ ಅನಂತ ಕುಮಾರ್ ಅವರು ಕೇವಲ ಎರಡು ವರ್ಷಗಳ ಹಿಂದೆ ಇದೇ 'ಆಧಾರ್' ಬಗ್ಗೆ ಏನು ಹೇಳಿದ್ದರು ನೋಡಿ:

"ಇದು ರಾಷ್ಟ್ರೀಯ ಭದ್ರತೆಗೆ ಮಾರಕ. ಅಮೆರಿಕ ಮತ್ತು ಬ್ರಿಟನ್ ಇದನ್ನು ರದ್ದು ಪಡಿಸಿವೆ. ಆಸ್ಟ್ರೇಲಿಯಾ ರದ್ದು ಪಡಿಸುವ ಬಗ್ಗೆ ಯೋಚಿಸುತ್ತಿದೆ. ಇದರ ಜಾರಿಯಲ್ಲಿ ತೊಡಗಿಸಿಕೊಂಡಿರುವ ಎಲ್–1, ಅಕ್ಸೆಂಚುರ್‌ಗಳು ಭಾರತೀಯ ಕಂಪನಿಗಳಲ್ಲ, ಅಕೆಂಚರ್‌ನ್ನು ಅಮೆರಿಕಾವೇ ಕಪ್ಪು ಪಟ್ಟಿಗೆ ಸೇರಿಸಿದೆ"!

ಬಿಜೆಪಿ ತಿಪ್ಪರಲಾಗ

ಈಗ ಈ ಎಲ್ಲ ಮುಖಂಡರು ತದ್ವಿರುದ್ಧವಾಗಿ ಮಾತಾಡುತ್ತ ತಾವು ಎರಡು ವರ್ಷಗಳ ಹಿಂದೆ ಬಲವಾಗಿ ವಿರೋಧಿಸಿದ್ದ 'ಆಧಾರ್' ಮಸೂದೆಯನ್ನು, ತಾವೇ ಮಾಡಿದ್ದ ಟೀಕೆಗಳನ್ನೂ ಉಪೇಕ್ಷಿಸಿ, ರಾಜ್ಯಸಭೆ ಬಹುಮತದಿಂದ ಸೂಚಿಸಿದ 5 ತಿದ್ದುಪಡಿಗಳನ್ನೂ ತಿರಸ್ಕರಿಸಿ ಕಾನೂನಾಗಿ ಮಾಡಿದ್ದಾರೆ.

ಯುಪಿಎ–2 ಸರಕಾರದ ಡಿಸೆಂಬರ್ 2010ರಲ್ಲಿ 'ಭಾರತದ ರಾಷ್ಟ್ರೀಯ ಗುರುತು ಪ್ರಾಧಿಕಾರ ಮಸೂದೆ, 2010ನ್ನು ಮಂಡಿಸಿತು. ಇದಕ್ಕೆ ಬಿಜೆಪಿಯೂ ಸೇರಿದಂತೆ ಎಲ್ಲ ಪ್ರತಿಪಕ್ಷಗಳಿಂದ ವಿರೋಧ ಬಂತು. ಅದರಿಂದಾಗಿ ಅದನ್ನು ಹೆಚ್ಚಿನ ಪರಿಶೀಲನೆಗೆ ಸಂಸತ್ತಿನ ಹಣಕಾಸು ಸ್ಥಾಯೀ ಸಮಿತಿಗೆ ಒಪ್ಪಿಸಲಾಯಿತು. ಬಿಜೆಪಿ ಮುಖಂಡ ಯಶವಂತ ಸಿನ್ಹ ಅವರ ನೇತೃತ್ವದ ಈ ಸ್ಥಾಯೀ ಸಮಿತಿ ಈ ಬಗ್ಗೆ ಚರ್ಚೆ–ಅಧ್ಯಯನ ನಡೆಸಿ ಹಲವು ಸಂದೆಹಗಳನ್ನು ವ್ಯಕ್ತಪಡಿಸಿತು, ಸಲಹೆಗಳನ್ನು ಸಲ್ಲಿಸಿತು. ನಿಚ್ಚಳ ಬಹುಮತ ಹೊಂದಿರದ ಯುಪಿಎ ಸರಕಾರ ಈ ಮಸೂದೆಯನ್ನು ಪಾಸು ಮಾಡಿಸಿಕೊಳ್ಳುವ ಪ್ರಯತ್ನ ನಡೆಸದೆ ಅದನ್ನು ಒಂದು ಜ್ಯಾರಿ ಆದೇಶದ ಮೂಲಕ ಕಾರ್ಯಗತಗೊಳಿಸಲು ಪ್ರಯತ್ನಿಸಿತು.

ಈ ನಡುವೆ ಆಧಾರ್‌ಅನ್ನು ವಿಶಿಷ್ಟ ಗುರುತು ದಾಖಲೆಯಾಗಿ ಕಡ್ಡಾಯಗೊಳಿಸಬಾರದು, ಇದು ಖಾಸಗಿತ್ವದ ಹಕ್ಕಿನ ಉಲ್ಲಂಘನೆ ಎಂಬ ಅರ್ಜಿಗಳನ್ನು ಪರಿಶೀಲಿಸಿದ ಸುಪ್ರಿಂ ಕೋರ್ಟ್ ಇದನ್ನು ಕಡ್ಡಾಯಗೊಳಿಸಲಾಗದು ಎಂದು ಮಧ್ಯಂತರ ಆದೇಶವನ್ನೂ ಹೊರಡಿಸಿತ್ತು. ಇದನ್ನು ಆಧರಿಸಿಯೇ ನರೇಂದ್ರ ಮೋದಿಯವರು ಪ್ರಧಾನಿಯಾಗುವ ಮೊದಲು ಆಗಿನ ಪ್ರಧಾನಿಗಳಿಂದ 'ಉತ್ತರ' ಬಯಸಿದ್ದು. ಆದರೆ ಈಗ ಅವರಿಗೆ ಆ ಉತ್ತರಗಳು ಬೇಕಿಲ್ಲ. ಆದರೆ ಜನರಿಗೆ ಬೇಕು, ಏಕೆಂದರೆ

ಆ ಪ್ರಶ್ನೆಗಳು ಮಾತ್ರ ಹಾಗೆಯೇ ಉಳಿದಿವೆ, ಮಾತ್ರವಲ್ಲ, ಅದನ್ನು 'ಧನ ವಿನಿಯೋಜನೆಯ ವಿಧೇಯಕ' ಎಂದು ಪರಿಗಣಿಸಿದ್ದೇಕೆ ಎಂಬ ಪ್ರಶ್ನೆಯೂ ಸೇರಿಕೊಂಡಿದೆ.

'ಧನ ವಿನಿಯೋಜನೆಯ ವಿಧೇಯಕ'ಕ್ಕೆ ರಾಜ್ಯಸಭೆಯ ಒಪ್ಪಿಗೆ ಬೇಕಿಲ್ಲ. ಆದರೆ ಅಂತಹ ವಿಧೇಯಕ ಎನಿಸಿಕೊಳ್ಳಲು ಹಲವು ಶರತ್ತುಗಳಿವೆ. ಈ ಮಸೂದೆ ಆ ಯಾವ ಶರತ್ತನ್ನೂ ಪೂರೈಸುವುದಿಲ್ಲ ಎಂದು ಲೋಕಸಭೆಯ ನಿವೃತ್ತ ಮಹಾಕಾರ್ಯದರ್ಶಿ ಪಿ.ಡಿ.ಟಿ.ಚಾರಿ ಸ್ಪಷ್ಟಪಡಿಸಿದ್ದಾರೆ.

ಆದರೂ 'ಆಧಾರ್' ಮಸೂದೆಗೆ ಈ ವೇಷ ತೊಡಿಸಿದ್ದು, ರಾಜ್ಯಸಭೆಯ ಚರ್ಚೆಯಿಂದ ತಮ್ಮ ಉದ್ದೇಶಕ್ಕೆ ಅಡ್ಡಿ ಬರದಿರಲಿ ಎಂದಷ್ಟೇ ಎಂಬುದು ಸ್ಪಷ್ಟ.

ಎರಡನೆಯದಾಗಿ, ದೇಶದ ಒಬ್ಬ ನಾಗರಿಕನ/ಳ ಖಾಸಗಿತ್ವದ ಹಕ್ಕು ಮೂಲಭೂತ ಹಕ್ಕು ಹೌದೇ ಅಲ್ಲವೇ ಎಂಬ ಪ್ರಶ್ನೆ ಈಗ ದೇಶದ ಸರ್ವೋಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿದೆ. ಮೇಲೆ ಹೇಳಿದಂತೆ ಇದನ್ನು ಕಡ್ಡಾಯಗೊಳಿಸಬಾರದು ಎಂದು ನ್ಯಾಯಾಲಯವೇ ಮಧ್ಯಂತರ ಆದೇಶ ನೀಡಿರುವಾಗ ಅದನ್ನು ತಿರಸ್ಕರಿಸಿ ಈಗ ಅದಕ್ಕೆ ಕಾನೂನಿನ ಸ್ವರೂಪ ಕೊಡಲಾಗಿದೆ.

ಈ ಮೂಲಕ ದೇಶದ ಸಂವಿಧಾನ ಪೀಠದ ಮುಂದಿರುವ ಒಂದು ಅರ್ಜಿಯನ್ನು ಬದಿಗೊತ್ತಿ ಸುಪ್ರಿಂ ಕೋರ್ಟಿಗೆ ನಿರಾದರ ತೋರಿಸಲಾಗಿದೆ ಎಂದು ಪರಿಣಿತರು ಅಭಿಪ್ರಾಯ ಪಡುತ್ತಿದ್ದಾರೆ. ನಾಗರಿಕರ ಖಾಸಗಿತ್ವದ ಹಕ್ಕು ಒಂದು ಮೂಲಭೂತ ಹಕ್ಕು, ಆಧಾರ್ ಕಡ್ಡಾಯ ಮಾಡುವಂತಿಲ್ಲ ಎಂದೇನಾದರೂ ಸಂವಿಧಾನ ಪೀಠ ತೀರ್ಪಿತ್ತರೆ ಈ ಸರಕಾರ ಸಂಸತ್ತನ್ನು ಒಂದು ತಮಾಷೆಯ ಮಟ್ಟಕ್ಕೆ ಇಳಿಸಿದಂತಾಗುವುದಿಲ್ಲವೇ ಎಂದು ಅವರು ಪ್ರಶ್ನಿಸುತ್ತಾರೆ.

ಜನಸಾಮಾನ್ಯರಿಗೆ ಸರಕಾರದ ಯೋಜನೆಗಳ ಫಲ ಯಾವುದೇ ಸೋರಿಕೆಯಿಲ್ಲದೆ ತಲುಪುವಂತೆ ಮಾಡಲು ಇದು ಅಗತ್ಯ ಎನ್ನುವುದು ಇದನ್ನು ಮೊದಲು ರೂಪಿಸಿದವರ ಮತ್ತು ಆಗ ಅದನ್ನು ಒಪ್ಪದೆ ಈಗ ಅದೇ ದಾರಿ ಹಿಡಿದಿರುವವರ ವಾದ.

ಸಾಮೂಹಿಕ ಪತ್ತೇದಾರಿಕೆಯ ಅಪಾಯ

ಆದರೆ ಈ ಯೋಜನೆಯಲ್ಲಿ ಫೋಟೋ ಅಲ್ಲದೆ ಕೈಬೆರಳುಗಳು, ಕಣ್ಣು ಪಾಪೆ ಮುಂತಾದ ಜನಗಳ ಜೈವಿಕ ಮಾಪನಗಳ ದತ್ತಾಂಶಗಳನ್ನು ಸಂಗ್ರಹಿಸಲಾಗುತ್ತದೆ. ಮೊದಲನೆಯದಾಗಿ ಭಾರತದ ಸಂದರ್ಭದಲ್ಲಿ, ಅದರಲ್ಲೂ ಗ್ರಾಮಿಣ ಭಾರತದಲ್ಲಿನ ತಾಂತ್ರಿಕ ಸೌಲಭ್ಯಗಳ ಸಂದರ್ಭದಲ್ಲಿ ಇವು ಗುರುತಿನ ಮಾಪಕಗಳಾಗಿ ಎಷ್ಟು ಸಮರ್ಪಕವಾಗಿವೆ ಎಂಬ ಬಗ್ಗೆ ಬಹಳಷ್ಟು ಅನುಮಾನಗಳಿವೆ. ಎರಡನೆಯದಾಗಿ ಈ ಮಾಹಿತಿಗಳು ಅನಪೇಕ್ಷಿತ ಕೈಗಳಿಗೆ ಹೋಗುವುದಿಲ್ಲ ಎಂದೇನೋ ಹಣಕಾಸು ಮಂತ್ರಿಗಳು ಇದನ್ನು ಸಮರ್ಥಿಸಿಕೊಂಡರೂ ಇಂತಹ ಕಟ್ಟುನಿಟ್ಟಾದ ಭರವಸೆಗಳೇನೂ ಈ ಮಸೂದೆಯಲ್ಲಿ ಇಲ್ಲ.

'ರಾಷ್ಟ್ರೀಯ ಭದ್ರತೆ'ಗೆ ಸಂಬಂಧಪಟ್ಟಂತೆ ಇದನ್ನು ಬಳಸುವುದನ್ನು ಬಿಟ್ಟರೆ ಬೇರೆ ಯಾವುದಕ್ಕೂ ಇದನ್ನು ಬಳಸುವುದಿಲ್ಲ ಎಂದು ಹೇಳಲಾಗಿದೆ. ಆದರೆ ಈಗ 'ದೇಶಪ್ರೇಮ'ಕ್ಕೆ ತಮ್ಮ ಮನಬಂದಂತೆ ಅರ್ಥ ಹಚ್ಚುತ್ತಿರುವುದನ್ನು ನೋಡಿದ ಮೇಲೂ 'ರಾಷ್ಟ್ರೀಯ ಹಿತಾಸಕ್ತಿ'ಗೂ ಆಳರಸರು ತಮ್ಮ ಮನಬಂದಂತೆ ಅರ್ಥ ಹಚ್ಚುವುದಿಲ್ಲ ಎಂಬ ಭರವಸೆಯೇನೂ ಉಳಿದಿಲ್ಲ. ಖಾಸಗಿಯವರ ಕೈಗಳಿಗೆ ಹೋಗುವುದಿಲ್ಲ ಎಂಬ ಬಗ್ಗೆಯೂ ಆಗಲೇ ಅನುಮಾನಗಳು ಉಂಟಾಗಿವೆ (ಬಾಕ್ಸ್ ನೋಡಿ).

ಇದು ಸಾಮೂಹಿಕ ಪತ್ತೇದಾರಿಕೆಗೆ ಹಾದಿ ತೆರೆದು ಕೊಡುವ ಮಹಾ ಅಪಾಯ ಇದೆ ಎಂದು ಹಿರಿಯ ಅರ್ಥಶಾಸ್ತ್ರಜ್ಞ ಜೀನ್ ಡ್ರೇಝ್ ಎಚ್ಚರಿಸಿದ್ದಾರೆ.

ಇನ್ನೊಂದು ಕಡೆ, ಸರಕಾರದ ಸಬ್ಸಿಡಿಗಳ ಸೋರಿಕೆ ತಡೆಯಲಾಗಿದೆ ಎಂಬುದಕ್ಕೂ ಬಲವಾದ ಸಾಕ್ಷ್ಯಾಧಾರಗಳೇನೂ ಸಿಕ್ಕಿಲ್ಲ ಎನ್ನುತ್ತಾರೆ ಪ್ರೊ. ಡ್ರೇಝ್.

ಪುಟ 11 ಕ್ಕೆ

ಸಮರ ಮುಗಿದಿಲ್ಲ, ಅದೀಗ ಬೇರೆ ರಂಗಗಳತ್ತ ಚಲಿಸುತ್ತದೆ

–ಸೀತಾರಾಮ್ ಯೆಚೂರಿ

ಈಗ ಕಾನೂನಾಗಿರುವ ಆಧಾರ್ ಮಸೂದೆಯ ಬಗ್ಗೆ ಮಾತಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯಸಭಾ ಸದಸ್ಯರಾದ ಸೀತಾರಾಮ್ ಯೆಚೂರಿ ಆಧಾರ್ ಮಸೂದೆ ಎಂದಾದರೂ 'ಧನ ವಿನಿಯೋಗದ ಮಸೂದೆ' ಆಗಲು ಸಾಧ್ಯವೇ ಎಂದು ಪ್ರಶ್ನಿಸಿದ್ದಾರೆ.

ಯಾವುದು ಇಂತಹ ಮಸೂದೆ ಎಂಬುದನ್ನು ಕಲಮು 110(1)ರ ಉಪವಿಭಾಗ 'ಎ'ನಿಂದ 'ಜಿ' ನಿರೂಪಿಸಿವೆ. 11(2) ಯಾವುದು 'ಧನ ವಿನಿಯೋಗ ಮಸೂದೆ ಆಗಲು ಸಾಧ್ಯವಿಲ್ಲ ಎಂಬುದನ್ನು ನಿರೂಪಿಸಿದೆ. ಕಲಮು 110(3) ಈ ಬಗ್ಗೆ ವಿವಾದವಿದ್ದರೆ ಲೋಕಸಭಾಧ್ಯಕ್ಷರ ನಿರ್ಣಯ ಅಂತಿಮ ಎನ್ನುತ್ತದೆ. ಆದರೆ ಅವರಿಗೆ ಕೊಟ್ಟಿರುವ ಹಕ್ಕು ಅಬಾಧಿತವಲ್ಲ. ಸಂವಿಧಾನ ಕೊಟ್ಟಿರುವ ಈ ಹಕ್ಕು ಕಲಮು 110(1) ಮತ್ತು (2)ನ್ನು ಮೀರಲು ಸಾಧ್ಯವಿಲ್ಲ. ಈ ಬಗ್ಗೆ ಪ್ರಖ್ಯಾತ ಲೋಕಸಭಾಧ್ಯಕ್ಷರಾದ ಜಿಎಸ್ ಧಿಲ್ಲೋನ್ ಮತ್ತಿತರರ ಮಹತ್ವದ ನಿರ್ಣಯಗಳಿವೆ. ಪ್ರಸ್ತುತ ಲೋಕಸಭಾಧ್ಯಕ್ಷರು ಆಳುವ ಪಕ್ಷದ ಬಯಕೆ–ಯಂತೆ ಸಂವಿಧಾನ ಕೊಟ್ಟಿರುವ ನಿರೂಪಣೆಗಳನ್ನು ಉಪೇಕ್ಷಿಸಿ ಈ ಹಕ್ಕನ್ನು ಚಲಾಯಿಸಿದ್ದಾರೆ ಎಂದು ಯೆಚೂರಿ ಅಭಿಪ್ರಾಯ ಪಟ್ಟಿದ್ದಾರೆ.

ಇವಲ್ಲದೆ ಈ ಮಸೂದೆಯ ಬಗ್ಗೆ ಅವರು ಎತ್ತಿರುವ ಆಕ್ಷೇಪಗಳು ಹೀಗಿವೆ:

1. ಖಾಸಗಿತ್ವ: ಅಂತರ್‍ರಾಷ್ಟ್ರೀಯ ನ್ಯಾಯಶಾಸ್ತ್ರದ ಮಾನದಂಡಗಳ ಪ್ರಕಾರ 'ಬದುಕಿನ ಮತ್ತು ವೈಯಕ್ತಿಕ ಸ್ವಾತಂತ್ರ್ಯ' ಎಂಬ ಮೂಲಭೂತ ಹಕ್ಕಿನಲ್ಲಿ 'ಖಾಸಗಿತ್ವದ ಹಕ್ಕು' ಕೂಡ ಬರುತ್ತದೆ. ಏನೇ ಆಗಲಿ ಐವರು ಸುಪ್ರಿಂ ಕೋರ್ಟ್ ನ್ಯಾಯಾಧೀಶರ ಪೀಠ ಈ ಬಗ್ಗೆ ತೀರ್ಪು ನೀಡಲಿದೆ.
2. 'ರಾಷ್ಟ್ರೀಯ ಭದ್ರತೆ'ಯ ಹೆಸರಲ್ಲಿ ಆಧಾರ್ ಮಾಹಿತಿಗಳನ್ನು ವಿವಿಧ ಏಜೆನ್ಸಿಗಳಿಗೆ ನೀಡಲು ಅವಕಾಶ: ಈ 'ರಾಷ್ಟ್ರೀಯ ಭದ್ರತೆ' ಎಂಬುದು ಬಹಳ ಮಸುಕಾದ ಪದ. ಇದೇ ಹೆಸರಿನಲ್ಲಿ ತಾನೇ ಹಿಟ್ಲರ್‌ಶಾಹೀ ಫ್ಯಾಸಿಸಂನ ಅಡಿಯಲ್ಲಿ ಯೆಹೂದಿಗಳ ಬೇಟೆ ನಡೆಸಿದ್ದು? ನಮ್ಮ ದೇಶದಲ್ಲೂ 'ಮೀಸಾ'ದ ದುರುಪಯೋಗದ ಅನುಭವ ಈಗಿನ ಸಂಸತ್ತಿನಲ್ಲಿ ಇರುವ ಹಲವು ಮುಖಂಡರಿಗಿದೆ.
3. ಯಾವುದೇ ವ್ಯಕ್ತಿಗೆ ದೂರು ಸಲ್ಲಿಸಿ ಪರಿಹಾರ ಕೇಳಲು ಈ ಕಾನೂನಿನಲ್ಲಿ ಅವಕಾಶ ಇಲ್ಲ.
4. ಹೊಸ ವಿಧಗಳ ವೈಯಕ್ತಿಕ ಮಾಹಿತಿಗಳನ್ನು ಸಂಗ್ರಹಿಸಲು ಅದು ಅವಕಾಶ ಕಲ್ಪಿಸಿದೆ. ಈ ಬಗ್ಗೆ ನಿಯಮಗಳನ್ನು ಇನ್ನೂ ನಿರೂಪಿಸಿಲ್ಲ.

ಈ ಕಾನೂನಿನ ಮೂಲಕ ಸರಕಾರಕ್ಕೆ ವಿಪರೀತ ಅಧಿಕಾರ ನೀಡಿರುವುದು ಸಂವಿಧಾನ ಹಾಕಿಕೊಟ್ಟಿರುವ ಪ್ರಜಾತಂತ್ರದ ಬುನಾದಿಗೆ ಹಾನಿಕಾರಕ ಎಂದಿರುವ ಸೀತಾರಾಮ್ ಯೆಚೂರಿಯವರು, ಸಮರ ಇನ್ನೂ ಮುಗಿದಿಲ್ಲ, ಅದೀಗ ಇತರ ರಂಗಗಳತ್ತ ಚಲಿಸುತ್ತದೆ ಎಂದು ಟಿಪ್ಪಣಿ ಮಾಡಿದ್ದಾರೆ.

ಟ್ರಸ್ಟ್‌ಐಡಿ' ಎಂಬೊಂದು ಕಂಪನಿ ಇತ್ತೀಚಿನ ದಿನಗಳಲ್ಲಿ ಜಾಹೀರಾತು ಮಾಡುತ್ತಿದೆ-"ಶಕ್ಲ್ ಪೆ ಮತ್ ಜಾವೊ, ಟ್ರಸ್ಟ್‌ಐಡಿ ಪೆ ಜಾವೊ" (ಮುಖ ನೋಡಿ ನಿರ್ಧರಿಸಬೇಡಿ, ಟ್ರಸ್ಟ್‌ಐಡಿ ನೋಡಿ ನಿರ್ಧರಿಸಿ).ತನ್ನದು ಮೊತ್ತಮೊದಲ ಆಧಾರ್-ಆಧರಿತ ಆಪ್, ನಿಮಗೆ ಮನೆಗೆಲಸದವರು, ಡ್ರೈವರ್, ಇಲೆಕ್ಟ್ರಿಶಿಯನ್, ಬಾಡಿಗೆಯವರು, ಅಥವ ಇನ್ನೂ ಯಾರದೇ ಆದರೂ ಪೂರ್ವಾಪರವನ್ನು ಒಂದು ನಿಮಿಷದಲ್ಲಿ ತಪಾಸಣೆ ಮಾಡಿ ಕೊಡುತ್ತದಂತೆ ಈ ಮೊಬೈಲ್ ಆಪ್. ಇದು ಆಧಾರ್‌ಗೆ ಕಾನೂನು ರೂಪ ಕೊಡುವ ಈ ಮಸೂದೆ ಮಂಡಿಸಲಾಗುತ್ತದೆ ಎಂಬ ಸುದ್ದಿ ಬಂದ ಮೇಲೆ ಅದು ಕಾನೂನಾಗುವ ಮೊದಲೇ ರಾಜಾರೋಷವಾಗಿ ಬರುತ್ತಿರುವ ಜಾಹೀರಾತು. ಇನ್ನೆಷ್ಟು ಖಾಸಗಿ ಕಾರ್ಪೊರೇಟ್‌ಗಳು ಯಾವ್ಯಾವ ರೀತಿಯಲ್ಲಿ ನಿಮ್ಮ ಆಧಾರ್ ಮಾಹಿತಿಗಳನ್ನು ಬಳಸಿಕೊಳ್ಳಲು ಕಾದಿರಬಹುದು ಎಂಬುದಕ್ಕೆ ಇದೊಂದು ಉದಾಹರಣೆ. ಪ್ರೊ. ಜೀನ್ ಡ್ರೇಝ್ 'ಸಾಮೂಹಿಕ ಪತ್ತೇದಾರಿಕೆ' ಎಂದಿದ್ದಾರೆ ಇದನ್ನು. ಬೇರೆ ಯಾವುದೇ ಪ್ರಜಾತಂತ್ರ ಇದಕ್ಕೆ ಅವಕಾಶ ಕೊಟ್ಟಿಲ್ಲ ಎನ್ನುತ್ತಾರೆ ಅವರು.



ಕೃಪೆ: ಸ್ಕ್ರಾಲ್.ಇನ್

ಭಗತ್‌ಸಿಂಗ್, ರಾಜಗುರು, ಸುಖದೇವ್ ಹುತಾತ್ಮರ ನೆನಪಿನಲ್ಲಿ

ಸಾಯುವುದೂ ಆದರ್ಶ ಎಂದು ನಂಬಿದ್ದ ಮಹಾ ದೇಶಪ್ರೇಮಿಗಳು



ಈ ಅಪ್ರತಿಮ ದೇಶಭಕ್ತರ ನೆನಪಿಸಿಕೊಳ್ಳಬೇಕಾದ ಈ ಸಮಯದಲ್ಲಿ ಗಾಂಧಿಯನ್ನು ಕೊಂದ ಗೋಡ್ಸೆಗೆ ಗುಡಿ ಕಟ್ಟಲಾಗುತ್ತಿದೆ. ಸ್ವಾತಂತ್ರ್ಯ ಹೋರಾಟದ ವಿರುದ್ಧ ಮಾತನಾಡಿದವರು ಇಂದು ಮಹಾ ದೇಶಭಕ್ತರಂತೆ ಗಂಟಲು ಹರಿದುಕೊಳ್ಳುತ್ತಿದ್ದಾರೆ. ಭಗತ್‌ಸಿಂಗ್ ಕಂಡ ಕನಸು ನನಸಾಗಬೇಕೆಂದು ಬಯಸುವವರು, ಅದಕ್ಕಾಗಿ ಹೋರಾಟ ನಡೆಸುವವರನ್ನು ಇಂದು 'ದೇಶದ್ರೋಹಿ'ಗಳೆಂದು ಬಿಂಬಿಸಲಾಗುತ್ತಿದೆ. ಭಗತ್‌ಸಿಂಗ್ ವಿಚಾರಗಳನ್ನ ಪ್ರತಿಪಾದಿಸಿದ ಕನ್ಹಯ್ಯ ಕುಮಾರ್, ರೋಹಿತ್ ವೇಮುಲ ಪಟ್ಟಭದ್ರರ ದೃಷ್ಟಿಯಲ್ಲಿ ದೇಶದ್ರೋಹಿಗಳಾಗಿದ್ದಾರೆ.

ಲಿಂಗರಾಜು

'ಇಂಕ್ವಿಲಾಬ್ ಜಿಂದಾಬಾದ್, ಸಾಮ್ರಾಜ್ಯಶಾಹಿ ಮುರ್ದಾಬಾದ್' ಈ ರಣಘೋಷ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾರಿ ಸಂಚಲನ ಸೃಷ್ಟಿಸಿದ್ದ ಘೋಷಣೆ. ರಾಷ್ಟ್ರೀಯ ವಿಮೋಚನಾ ಚಳುವಳಿಯಲ್ಲಿ ಗಾಂಧಿಜಿಯವರ ಸತ್ಯಾಗ್ರಹ, ಸಂಧಾನದಂತಹ ಮಾರ್ಗ ಹಾಗು ಚೌರಿ ಚೌರ ಘಟನೆಗೆ ಸಂಬಂಧಿಸಿ 'ಹಿಮಾಲಯದಷ್ಟು ದೊಡ್ಡ ಪ್ರಮಾದ' ಎಂದು ಬಣ್ಣಿಸಿ ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡದ್ದು, ಈ ಎಲ್ಲವುಗಳಿಂದ ಬೇಸತ್ತಿದ್ದ ಯುವಜನರನ್ನು ಈ ಘೋಷಣೆ ಅಯಸ್ಕಾಂತದಂತೆ ಸೆಳೆದಿತ್ತು. ಹಾಗು ಕಾಂಗ್ರೆಸ್ ಅಂದು ಬ್ರಿಟೀಷರ ಜತೆ ರಾಜಕೀಯ ಅಧಿಕಾರದ ಪಾಲುದಾರಿಕೆಯನ್ನು ಮಾತ್ರವೇ ಪ್ರತಿಪಾದಿಸುತ್ತಿದ್ದ ಸಂದರ್ಭದಲ್ಲಿ ಮೊದಲ ಬಾರಿಗೆ 'ಸಂಪೂರ್ಣ ಸ್ವಾತಂತ್ರ್ಯ' ಘೋಷಣೆ ಮೊಳಗಿತು. ಈ ಎರಡು ಘೋಷಣೆಗಳನ್ನು ಮೊಳಗಿಸಿದ್ದು ರಾಷ್ಟ್ರೀಯ ವಿಮೋಚನ ಚಳುವಳಿಯ ಧ್ರುವತಾರೆ ಶಹೀದ್ ಭಗತ್‌ಸಿಂಗ್. (ಭಾರತ ಕಮ್ಯುನಿಸ್ಟ್ ಪಕ್ಷವು ಇದಕ್ಕೂ ಮೊದಲೇ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆ ಪ್ರತಿಪಾದಿಸಿತ್ತಾದರೂ ಅದು ವ್ಯಾಪಕವಾಗಿ ಇನ್ನೂ ಪ್ರಭಾವಿಸಿರಲಿಲ್ಲ)

ಮಾರ್ಚ್ 23 ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ. ಭಗತ್ ಸಿಂಗ್, ರಾಜಗುರು, ಸುಖದೇವ್ ಎಂಬ 24 ವರ್ಷ ತುಂಬದ ಚಿಗುರು ಮೀಸೆಯ ಯುವಕರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಬಲಿಕೊಡಬೇಕಾದ ಸಂದರ್ಭ ಬಂದರೂ, ಸಾಸಿವೆ ಕಾಳಿನಷ್ಟೂ ಎದೆಗುಂದದೇ 'ಮೇರಾ ರಂಗದೇ ಬಸಂತಿ ಚೋಲಾ ಮೇ ರಂಗದೇ' ಎಂದು ಹಾಡುತ್ತಾ ನಗುನಗುತ್ತಲೇ ಬ್ರಿಟೀಷರ ನೇಣುಗಂಬಕ್ಕೆ ಕೊರಳೊಡ್ಡಿದ ದಿನವೇ ಮಾರ್ಚ್ 23, 1930. ಈ ಅಪ್ರತಿಮ ದೇಶಪ್ರೇಮಿಗಳು ಹುತಾತ್ಮರಾಗಿ ಇಂದಿಗೆ 86 ವರ್ಷ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಗತ್‌ಸಿಂಗ್ ಹೋರಾಟದ ಕಾಲಾವಧಿ ಕೇವಲ 10 ರಿಂದ 12 ವರ್ಷ. ಇದು ರಾಷ್ಟ್ರೀಯ ವಿಮೋಚನೆಯಂತಹ ಆಂದೋಲನದಲ್ಲಿ ಅತ್ಯಂತ ಸಣ್ಣ ಅವಧಿ. ಒಂದು ದಶಕದ ಅವರ ಹೋರಾಟ ಕೇವಲ ಅಂದಿಗೆ ಸೀಮಿತವಾಗದೇ ಇಂದಿಗೂ ಪ್ರಭಾವಿಸುತ್ತಿದೆ. ಆದರೂ ಅಷ್ಟು ಅಲ್ಪ ಸಮಯದಲ್ಲಿಯೇ ಭಗತ್‌ಸಿಂಗ್ ಕೊಟ್ಯಾಂತರ ಭಾರತೀಯರ ಹೃದಯ ಸಾಮ್ರಾಟನಾಗಿದ್ದು, ಅದರಲ್ಲೂ ಯುವಜನರ ಹೀರೋ ಆಗಿ ಬೆಳೆದ್ದದ್ದು ನಿಜಕ್ಕೂ ಸೋಜಿಗದ ಸಂಗತಿ. ಆದರೆ ಅದು ಪವಾಡವಾಗಿರದೇ, ತ್ಯಾಗ, ಬದ್ಧತೆ ಹಾಗೂ ಸೈದ್ಧಾಂತಿಕ ನಿಲುವಿನ ಸ್ಪಷ್ಟತೆಯ ಕಾರಣದಿಂದಾಗಿ ಎಂಬುದನ್ನು ನೆನಪಿಡಬೇಕು.

ಸಣ್ಣ ವಯಸ್ಸಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ

ಭಗತ್‌ಸಿಂಗ್ ಹುಟ್ಟಿದ್ದು 1907 ಸೆಪ್ಟಂಬರ್ 27 ರಂದು ಜಲಂಧರ್ ಜಿಲ್ಲೆ ಖಾತ್ಕರ್ ಕಲಾನ್ ಎಂಬ ಹಳ್ಳಿಯಲ್ಲಿ. ತಂದೆ ಸರ್ದಾರ್ ಕಿಶನ್ ಸಿಂಗ್, ಅವರ ಸರ್ದಾರ್ ಅಜಿತ್ ಸಿಂಗ್ ಕ್ರಾಂತಿಕಾರಿ ಗದರ್ ಆಂದೋಲನದಲ್ಲಿ ಸಕ್ರಿಯರಾಗಿದ್ದು, ಬ್ರಿಟೀಷರಿಗೆ ಸಿಂಹಸ್ವಪ್ನವಾಗಿದ್ದರು. ಇಡೀ ಕುಟುಂಬವೇ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗಿಯಾಗಿತ್ತು. ಭಗತ್ ನಂತರ ಬೆಳದದ್ದು ಲಾಹೋರ್‌ನಲ್ಲಿ. ಲಾಹೋರ್ ಅಂದು ಸ್ವಾತಂತ್ರ್ಯ ಚಳುವಳಿಯ ಕ್ರಾಂತಿಕಾರಿ ಹೋರಾಟಗಾರರ ತಾಣವಾಗಿತ್ತು. ಅಂತಹ ಕೆಂಪು ಮಣ್ಣಿನ ಕುಲುಮೆಯಲ್ಲಿ ಹುಟ್ಟಿದ ಭಗತ್‌ಸಿಂಗ್, 'ಮಕ್ಳ ಇಸ್ಕೂಲ್ ಮನೇಲಲ್ವೇ' ಎಂಬಂತೆ ಅತೀ ಸಣ್ಣ ವಯಸ್ಸಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮಿಕಿದರು. ಆರಂಭದಲ್ಲಿ ಭಗತ್‌ಸಿಂಗ್ ಸ್ಪಷ್ಟತೆ ಕೊರತೆಯಿಂದಾಗಿ ಆಕ್ರಮಣಕಾರಿಯಾಗಿದ್ದುದು ನಿಜ. ಸ್ವತಃ ಭಗತ್‌ಸಿಂಗ್ ಇದನ್ನು ಒಪ್ಪುತ್ತಾರೆ. ಇದರಿಂದಾಗಿ ಕೆಲವರು ಅವರನ್ನು ಭಯೋತ್ಪಾದಕ ಎಂದು ಪ್ರತಿಪಾದಿಸುವುದು ನಡೆದಿದೆ. ಬರಬರುತ್ತಾ ಅವರ ಹಾದಿ ಪ್ರಬುದ್ಧತೆಯತ್ತ ಸಾಗುತ್ತದೆ. ವ್ಯಕ್ತಿಗಳ ಕಸರತ್ತಿಗೆ ಬದಲಾಗಿ ಸಾಮೂಹಿಕ ಕಾರ್ಯಾಚರಣೆಯೆಡೆಗೆ, ಅಂತಿಮವಾಗಿ ಜನ ಚಳುವಳಿಯಾಗಿ ಮಾರ್ಪಾಟಾಗುವುದರತ್ತ ಸಾಗುತ್ತದೆ. ಈ ಸಂಬಂಧ ಬ್ರಿಟೀಷ್ ಸಿಐಡಿ ಸಂಗ್ರಹಿಸಿದ 'ಭಾರತದಲ್ಲಿ ಭಯೋತ್ಪಾದಕತೆ 1917–36' ವರದಿ ಈ ರೀತಿ ಹೇಳುತ್ತದೆ. "ಭಯೋತ್ಪಾದಕರು ಸದ್ಯಕ್ಕಾದರೂ ವೈಯಕ್ತಿಕ ಭಯೋತ್ಪಾದನೆಯನ್ನು ಬಿಟ್ಟು, ಹೆಚ್ಚು ಸುರಕ್ಷಿತವಾದ, ಆದರೂ ಅಷ್ಟೇ ಪರಿಣಾಮಕಾರಿಯಾದ ಸಾಮೂಹಿಕ ಕ್ರಾಂತಿಯ ದಾರಿಯನ್ನು ಹಿಡಿದರು". ಹೀಗಾಗಿಯೇ 'ಹಾದಿ ತಪ್ಪಿದ ಹುಡುಗನಾಗಿದ್ದ' ಭಗತ್‌ಸಿಂಗ್, ಇಂದು ಗಾಂಧಿಯ ಪಕ್ಕದಲ್ಲಿ ನಿಲ್ಲತ್ತಾರೆ.

ರಾಷ್ಟ್ರೀಯ ವಿಮೋಚನಾ ಸಮರದಲ್ಲಿ ಗಾಂಧಿ ಒಂದು ತುದಿಯಾದರೆ ಭಗತ್‌ಸಿಂಗ್ ಮತ್ತೊಂದು ತುದಿ. ಹಾದಿ ಬೇರೆಯದಾದರೂ ಇಬ್ಬರ ಉದ್ದೇಶ ಒಂದೇ ಆಗಿತ್ತು. ಅವರಲ್ಲಿನ ಉತ್ಕಟವಾದ ದೇಶಪ್ರೇಮ ಪ್ರಶ್ನಾತೀತ. ದೇಶದೆಲ್ಲೆಡೆ ಪ್ರಸ್ತುತ ದೇಶಪ್ರೇಮ, ರಾಷ್ಟ್ರೀಯತೆ ಕುರಿತು ಬಹುದೊಡ್ಡ ಚರ್ಚೆಗಳು ಆರಂಭವಾಗಿವೆ. ಕೆಲ ಹಿತಾಸಕ್ತಿಗಳು ಹುಸಿ ದೇಶಪ್ರೇಮದ ಉನ್ಮಾದದಲ್ಲಿ ಇಂದಿನ ಯುವಜನರನ್ನು ಬಲವಂತವಾಗಿ ನೂಕುವ ಈ ಹೊತ್ತಲ್ಲಿ, 'ಮಾರ್ಚ್ 23', ಸತ್ಯ ದರ್ಶನ ಮಾಡಿಸುವಂತೆ ಬಂದಿದೆ. ಹೀಗಾಗಿ ಹುಸಿ ದೇಶಪ್ರೇಮ ಹಾಗು ಪ್ರಾಮಾಣಿಕ ದೇಶಪ್ರೇಮದ ನಡುವಿನ ವ್ಯತ್ಯಾಸ ತಿಳಿಯಲು ಭಗತ್‌ಸಿಂಗ್ ಮತ್ತು ಆತನ ಸಹಚರರ ತ್ಯಾಗ–ಬಲಿದಾನ ಇಂದಿಗೂ, ಎಂದೆಂದಿಗೂ ಒಂದು ಮಾದರಿ.

ವಿಶ್ವದೆಲ್ಲೆಡೆ ನಡೆದಿರುವ ವಿಮೋಚನಾ ಚಳುವಳಿಗಳ ಇತಿಹಾಸವನ್ನು ಕೆದಕಿ ನೋಡಿದರೂ ಸಣ್ಣ ವಯಸ್ಸಿನಲ್ಲಿ ಭಗತ್‌ಸಿಂಗ್ ಮತ್ತು ಆತನ ಗೆಳಯರು ತೋರಿದ ಧೈರ್ಯ, ಸಾಹಸ ಬೇರೆಲ್ಲೂ ಕಾಣಸಿಗುವುದಿಲ್ಲವೆಂದು ಇತಿಹಾಸಜ್ಞರು ಹೆಳುತ್ತಾರೆ. ಕಾಕೋರಿ ಪ್ರಕರಣ, ಸ್ಯಾಂಡರ್ಸ್‌ನ ಹತ್ಯೆ, ಪಾರ್ಲಿಮೆಂಟ್‌ಗೆ ಬಾಂಬ್ ಹಾಕಿದ್ದು, ರಾಜಕೀಯ ಬಂಧಿಗಳ ಸೌಲಭ್ಯಗಳಿಗಾಗಿ ಜೈಲಿನಲ್ಲಿ ಉಪವಾಸ ಸತ್ಯಾಗ್ರಹ, ನ್ಯಾಯಾಲಯದಲ್ಲಿ ವಿಚಾರಣೆ ಸಂದರ್ಭದಲ್ಲಿ ನಡೆದ ವಾದ, ಪ್ರತಿಯೊಂದು ಘಟನೆಗಳು ಯುವಕರಲ್ಲಿ ಬ್ರಿಟೀಷರ ಬಗ್ಗೆ ಹುದುಗಿದ್ದ ಆಕ್ರೋಶವನ್ನು ಬಡಿದೆಬ್ಬಿಸಿದ್ದವು. ಹೀಗಾಗಿಯೇ ರಷ್ಯಾದ ಸಮಾಜವಾದಿ ಕ್ರಾಂತಿಯಿಂದ ಪ್ರೇರಣೆ ಪಡೆದು ಭಗತ್‌ಸಿಂಗ್ ಮತ್ತು ಆತನ ಸ್ನೇಹಿತರು ಹುಟ್ಟು ಹಾಕಿದ 'ಹಿಂದೂಸ್ತಾನ್ ರಿಪಬ್ಲಿಕನ್ ಸೋಷಲಿಸ್ಟ್ ಅಸೋಶಿಯೇಷನ್' ಮತ್ತು 'ನೌಜವಾನ್ ಭಾರತ್ ಸಭಾ' ಸ್ವಾತಂತ್ರ್ಯ ಚಳುವಳಿಯಲ್ಲಿ ಒಂದು ಹೊಸ ಪರ್ಯಾಯವಾಗಿ ಕಂಡಿದ್ದರಲ್ಲಿ ಆಶ್ಚರ್ಯವಿರಲಿಲ್ಲ. ಭಗತ್‌ಸಿಂಗ್ ಮತ್ತು ಆತನ ಸಹಚರರ ಬ್ರಿಟೀಷರ ವಿರುದ್ಧದ ಸಾಹಸಮಯ ಕಾರ್ಯಾಚರಣೆ ಯುವಕರನ್ನು ರೋಮಾಂಚಿತಗೊಳಿಸಿ, ಸ್ವಾತಂತ್ರ್ಯ ಚಳುವಳಿಗೆ ಆಕರ್ಷಿಸಿತ್ತು. ಮಾತ್ರವಲ್ಲ ಭರವಸೆಯನ್ನೂ ಮೂಡಿಸಿತ್ತು.

ದೇಶಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧವಿದ್ದರು

ವಯೋ ಸಹಜ ಬಯಕೆಗಳನ್ನು ಮೀರಿ, ಎಳೆಯ ವಯಸ್ಸಿನಲ್ಲೇ ಮನೆ–ಮಠ ತೊರೆದು, ಸಾವನ್ನು ಬಗಲಲ್ಲಿ ಕಟ್ಟಿಕೊಂಡೇ ಬ್ರಿಟೀಷರ ಎದೆ ನಡುಗಿಸಿದ ಈ ಅಪ್ರತಿಮರಲ್ಲಿ ಭೂಗತವಾಸ, ನರಕಯಾತನೆಯ ಜೈಲುವಾಸ, ಪೊಲೀಸರ ಚಿತ್ರಹಿಂಸೆಯ ನಡುವೆಯೂ ಅವರ ದೇಶಭಕ್ತಿಯ ವ್ರತದಲ್ಲಿ ಕಪ್ಪು ಚುಕ್ಕೆ ಹುಡುಕಲು ಸಾಧ್ಯವೇ ಇಲ್ಲ. 'ತಪ್ಪು ಮಾಡಿಲ್ಲ' ಎಂದು ಬರೆದು ಕೊಟ್ಟಿದ್ದರೆ ಭಗತ್‌ಸಿಂಗ್ ಮತ್ತು ಆತನ ಸಹಚರರು ಬದುಕುಳಿಯುತ್ತಿದ್ದರು. ಜೈಲಿನ ಉಪವಾಸ ಸತ್ಯಾಗ್ರಹದಲ್ಲಿ 'ಗುಟುಕು ಗಂಜಿ' ಸೇವಿಸಿದ್ದರೂ ಸಾಕಿತ್ತು ಜತಿನ್ ದಾಸ್ ಜೀವ ಉಳಿಯುತ್ತಿತ್ತು. ಸಾಯುವುದೂ ಒಂದು ಆದರ್ಶ ಎಂದು ನಂಬಿದ್ದ ಇವರು ಹೇಗೆ ತಾನೆ ಮಾಡಿಯಾರು!. ಇದನ್ನು ನಿರೂಪಿಸುವಂತೆ ಭಗತ್‌ಸಿಂಗ್ ತನ್ನ ಗೆಳೆಯ ಸುಖದೇವ್‌ಗೆ ಬರೆದ ಪತ್ರದಲ್ಲಿ ಹೀಗೆ ಹೇಳುತ್ತಾರೆ.

"ನನಗೆ ಖಚಿತವಿದೆ, ನನಗೆ ಮರಣದಂಡನೆಯೇ ಕಾದಿದೆ. ಅದಕ್ಕಿಂತ ಕೊಂಚವೇ ಕಡಿಮೆಯಿರುವ ಯಾವುದೇ ಶಿಕ್ಷೆ, ವಿನಾಯ್ತಿಯನ್ನು ನಿರೀಕ್ಷಿಸುವುದಿಲ್ಲ. ದೇಶದ ಭವಿಷ್ಯ ನಿರ್ಧಾರವಾಗುವ ಸಮಯದಲ್ಲಿ ವ್ಯಕ್ತಿಗಳ ಭವಿಷ್ಯ ಕುರಿತು ಯೋಚಿಸಬಾರದು. ಚಳುವಳಿ ಉತ್ತುಂಗ ತಲುಪಿದಾಗ ನಮ್ಮನ್ನು ಗಲ್ಲಿಗೇರಿಸಬೇಕು. ಕ್ರಾಂತಿಯಾಗದೇ ನಮ್ಮನ್ನಾಳುವವರ ನಡವಳಿಕೆಯಲ್ಲಿ ಯಾವ ಬದಲಾವಣೆಯನ್ನು ನಿರೀಕ್ಷಿಸುವಂತಿಲ್ಲ. ನನ್ನ ಮಟ್ಟಿಗೆ ನಮ್ಮ ದೇಶಬಾಂಧವರ ಮನದಲ್ಲಿ ಮರಣದಂಡನೆಯ ನೆನಪು ಅಚ್ಚಳಿಯದ ಕ್ರಾಂತಿಯ ಪ್ರಜ್ಞೆಯಾಗಿ ಉಳಿಯುವುದಾದರೆ ಅದಕ್ಕೆ ನಾನು ಸಿದ್ಧ".

ಅವರ ಈ ಮಾತು ದೇಶಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧವಿದ್ದರು ಎಂಬುದನ್ನು ದೃಢಪಡಿಸುತ್ತದೆ. ಇಲ್ಲಿ ಮತ್ತೊಂದು ಸಂಗತಿಯನ್ನು ನೆನಪಿಸುವುದು ಅಗತ್ಯವಿದೆ. ನೇಣುಶಿಕ್ಷೆ ಇನ್ನೇನು ಸಂಭವಿಸುವ ಕೆಲದಿನಗಳ ಮುಂಚೆ ಭಗತ್‌ಸಿಂಗ್‌ರ ತಂದೆ ಟ್ರಿಬ್ಯೂನಲ್‌ಗೆ ಪತ್ರ ಬರೆದು ನನ್ನ ಮಗ ನಿರಪರಾಧಿ, ಅವನು ಸ್ಯಾಂಡರ್ಸ್‌ನ ಹತ್ಯೆಯಲ್ಲಿ ಭಾಗಿಯಾಗಿಲ್ಲವೆಂದು, ಅದನ್ನು ಸಾಬೀತುಪಡಿಸಲು ಇನ್ನೊಂದು ಅವಕಾಶ ನೀಡಬೇಕೆಂದು ಕೋರಿ ಒಬ್ಬ ತಂದೆಯಾಗಿ ಹೆತ್ತ ಮಗನನ್ನು ಉಳಿಸಿಕೊಳ್ಳುವ ಕೊನೆ ಪ್ರಯತ್ನ ಮಾಡುತ್ತಾರೆ. ವಿಷಯ ತಿಳಿದ ಭಗತ್‌ಸಿಂಗ್ ಈ ರೀತಿ ಹೇಳುತ್ತಾರೆ.


"ಪ್ರಿಯ ಅಪ್ಪ.. ವಿಷಯ ತಿಳಿದು ಆಘಾತವಾಯಿತು. ನನ್ನ ಪ್ರಾಣ ನೀವು ತಿಳಿದಷ್ಟು ಅಮೂಲ್ಯವೇನಲ್ಲ, ನಮ್ಮ ತತ್ವಗಳನ್ನು ಮಾರಿ ಜೀವದಾನ ಪಡೆಯುವಷ್ಟು ನನ್ನ ಪ್ರಾಣ ಅಮೂಲ್ಯವಲ್ಲ..... ನನಗೆ ಯಾರೋ ಬೆನ್ನಿಗೆ ಚೂರಿ ಇರಿದಂತಾಗುತ್ತಿದೆ, ನೀವಲ್ಲದೇ ಬೇರಾದರೂ ಈ ರೀತಿ ಮಾಡಿದ್ದರೆ ಅದನ್ನು ದ್ರೋಹವೆಂದೇ ಬಗೆಯುತ್ತಿದ್ದೆ." ಹೀಗೆ ದೇಶಕ್ಕಾಗಿ ಪ್ರಾಣ ಕೊಡುವುದು ಅಸಾಮಾನ್ಯವಾದುದೇನಲ್ಲ ಎಂದು ಅವರು ಬಗೆದಿದ್ದರು.

ಬಿಳಿ ದೊರೆಗಳ ಬದಲು ಕಂದು ದೊರೆಗಳು ಬೇಡ!

ಭಗತ್‌ಸಿಂಗ್ ಮತ್ತು ಆತನ ಸಹಚರರ ಉದ್ದೇಶ ಕೇವಲ ಸ್ವಾತಂತ್ರ್ಯ ಗಳಿಸುವುದಷ್ಟೇ ಆಗಿರಲಿಲ್ಲ. ಸ್ವಾತಂತ್ರ್ಯ ನಂತರದ ಭಾರತ ಹೇಗಿರಬೇಕೆಂಬ ಸ್ಪಷ್ಟ ಕಲ್ಪನೆ ಇತ್ತು. ಧರ್ಮನಿರಪೇಕ್ಷ, ಜಾತ್ಯತೀತ, ಸಮಾಜವಾದಿ ದಾರಿಯಲ್ಲಿ ದೇಶವನ್ನು ಕಟ್ಟುವ ಮಹದಾಸೆ ಹೊಂದಿದ್ದರು. ಅವರ ಬರಹಗಳು, ಜೈಲಿನಲ್ಲಿದ್ದಾಗ ಅವರು ತನ್ನ ಡೈರಿಯಲ್ಲಿ ಮಾಡಿಕೊಂಡ ಟಿಪ್ಪಣಿಗಳು, ಜೈಲಿನಲ್ಲದ್ದುಕೊಂಡೇ ಕೆಲವೇ ದಿನಗಳಲ್ಲಿ ನಾನೂರಕ್ಕೂ ಹೆಚ್ಚು ಪುಸ್ತಕಗಳ ಓದು, ಕೋರ್ಟಿನಲ್ಲಿ ಅವರು ಮಾಡಿದ ವಾದ ಸರಣಿ, ಅಷ್ಟು ಮಾತ್ರವಲ್ಲದೇ ಹೆಚ್.ಎಸ್.ಆರ್.ಎ ಮತ್ತು ನೌಜವಾನ್ ಭಾರತ್ ಸಭಾ ಸಂಘಟನೆಗಳ ಉದ್ದೇಶ, ಗುರಿಗಳು ಮೇಲಿನ ಅಂಶವನ್ನು ದೃಢ ಪಡಿಸುತ್ತವೆ. ಮನುಷ್ಯ–ಮನುಷ್ಯನನ್ನು ಶೋಷಿಸುವ

ಪುಟ 10 ಕ್ಕೆ





ಹಂಪಿ ಕನ್ನಡ ವಿಶ್ವವಿದ್ಯಾಲಯದ ವಾರ್ಷಿಕ ಘಟಿಕೋತ್ಸವ 'ನುಡಿ ಹಬ್ಬ' ಹಲವು ಕಾರಣಗಳಿಗೆ ಸುದ್ದಿಯಾಯಿತು. ಪ್ರೊ. ಪುರುಷೋತ್ತಮ ಬಿಳಿಮಲೆಯವರ ಭಾಷಣವನ್ನು ಐದು ನಿಮಿಷಕ್ಕೆ ಮೊಟಕುಗೊಳಿಸಲಾಯಿತು. ವಿಶ್ವವಿದ್ಯಾಲಯ ನಾಡೋಜ ಪ್ರಶಸ್ತಿಗೆ ಕಳಿಸಿದ್ದ ಶಿಫಾರಸು ಪಟ್ಟಿಗೆ ರಾಜ್ಯಪಾಲರ ಅನುಮತಿ ದೊರಕದೆ ಯಾರಿಗೂ ನಾಡೋಜ ಪ್ರಶಸ್ತಿ ಕೊಡಲಾಗಲಿಲ್ಲ. ಇಲ್ಲಿ ಪ್ರೊ. ಪುರುಷೋತ್ತಮ ಬಿಳಿಮಲೆ ಅವರ ನುಡಿಹಬ್ಬದ ಭಾಷಣದ ಒಂದು ಭಾಗವನ್ನು ಪ್ರಕಟಿಸುತ್ತಿದ್ದೇವೆ. ಅವರು ತಮ್ಮ ಭಾಷಣದಲ್ಲಿ ಕನ್ನಡ ಸಂಶೋಧನೆಗೆ ಸಂಬಂಧಿಸಿದ ಎರಡು ಪ್ರಮುಖ ವಿಷಯಗಳ ಬಗ್ಗೆ ಮಾತನಾಡಿದರು.

1. **ಸಂಶೋಧಕರ ಮುಂದಿರುವ ಆತಂಕಗಳು, ಅಪಾಯಗಳು ಮತ್ತು ಸವಾಲುಗಳು**
2. **ಜ್ಞಾನದ ಅಂತಾರಾಷ್ಟ್ರೀಕರಣ ಮತ್ತು ಕನ್ನಡ. ಇಲ್ಲಿ ಮೊದಲ ವಿಷಯದ ಬಗ್ಗೆ ಅವರ ಭಾಷಣದ ಭಾಗವನ್ನು ಪ್ರಕಟಿಸುತ್ತಿದ್ದೇವೆ.**

ಸಂಶೋಧಕರ ಮುಂದಿರುವ ಆತಂಕಗಳು, ಅಪಾಯಗಳು ಮತ್ತು ಸವಾಲುಗಳು

– ಪ್ರೊ. ಪುರುಷೋತ್ತಮ ಬಿಳಿಮಲೆ

ಈ ವಿಶ್ವವಿದ್ಯಾಲಯನ್ನು ಸಂಶೋಧನೆಗಾಗಿಯೇ ಕಟ್ಟಲಾಯಿತು. 'ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಉನ್ನತ ಮಟ್ಟದ ಸಂಶೋಧನಾ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು ಇದರ ಗುರಿ' ಎಂದು ಮೊದಲಿನಿಂದಲೂ ಹೇಳುತ್ತಾ ಬರಲಾಗಿದೆ. ಈ ಗುರಿ ಸಾಧನೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಬಹುತೇಕ ಯಶಸ್ವಿಯಾಗಿದೆ. ದೇಸೀ ಚಿಂತನಾಕ್ರಮವೊಂದನ್ನು ಕಟ್ಟಲು ಬೇಕಾದ ಮೂಲಸಾಮಗ್ರಿಗಳನ್ನು ಇಲ್ಲಿನ ಅನೇಕ ಸಂಶೋಧಕರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಜೊತೆಗೆ ಇತಿಹಾಸ, ಶಾಸನ, ಹಸ್ತಪ್ರತಿ, ಗ್ರಂಥ ಸಂಪಾದನೆ, ಜಾನಪದ, ಛಂದಸ್ಸು, ಸ್ಥಳನಾಮ, ಮೊದಲಾದ ಕನ್ನಡದ ಮಾಹಿತಿಗಳ ಮೂಲಕವೇ ಕನ್ನಡವನ್ನು ಕಟ್ಟಿದ ಅಪ್ರತಿಮ ಸಂಶೋಧಕ ಡಾ. ಎಂ.ಎಂ.ಕಲಬುರ್ಗಿ ಅವರಂಥವರು ಇಲ್ಲಿ ಕುಲಪತಿಗಳಾಗಿ ಕೆಲಸ ಮಾಡಿದ್ದಾರೆ. ಅವರು ಬರೆದ ಸಾವಿರಕ್ಕೂ ಹೆಚ್ಚು ಲೇಖನಗಳು ಮತ್ತು ನೂರಕ್ಕೂ ಹೆಚ್ಚು ಕೃತಿಗಳು ಕನ್ನಡ ಸಂಶೋಧಕನೊಬ್ಬನ ಚರಮ ಸಿದ್ಧಿಯ ಹಾಗೆ ಭಾಸವಾಗುತ್ತದೆ. ಆದರೆ ಇಂದು ಪರಿಸ್ಥಿತಿ ಬದಲಾಗುತ್ತಿರುವಂತೆ ತೋರುತ್ತಿದೆ.

ಕಲಬುರ್ಗಿಯವರು ತಮ್ಮ ಸಂಶೋಧನೆಯ ಸತ್ಯಗಳಿಂದಾಗಿಯೇ ಅಮಾನುಷವಾಗಿ ಕೊಲೆಯಾದರು. ಸಂಶೋಧಕ ಆಗಾಗ ಶಿಲುಬೆಗೇರಬೇಕಾಗುತ್ತದೆ ಎಂಬ ಅವರ ಮಾತು ಅವರಲ್ಲಿಯೇ ನಿಜವಾಯಿತು. ಕೊಲೆಗಾರರನ್ನು ಇವತ್ತಿನವರೆಗೆ ಸರಕಾರಕ್ಕೆ ಹಿಡಿಯಲಾಗಿಲ್ಲ. ಅಂದರೆ ಸಂಶೋಧಕರು ಇಂದು ತಮ್ಮ ಓದಿನಲ್ಲಿ ಕಂಡುಕೊಂಡ ಅಥವಾ ಕ್ಷೇತ್ರಕಾರ್ಯದಲ್ಲಿ ತಾವು ಸಂಗ್ರಹಿಸಿದ ಮಾಹಿತಿಗಳ ಆಧಾರದ ಮೇಲೆ ತಮ್ಮ ಸಂಶೋಧನೆಯನ್ನು ಮುಂದುವರಿಸುವುದು ಕಷ್ಟವಾಗುತ್ತಿದೆ. ಬದಲು ಸಮಕಾಲೀನ ಸಮಾಜ ಏನನ್ನು ನಿರೀಕ್ಷಿಸುತ್ತದೆಯೋ ಅದನ್ನೇ ಹೇಳಬೇಕಾಗಿರುವ ಒತ್ತಡದಲ್ಲಿ ನಾವು ಸಿಲುಕಿದ್ದೇವೆ. ಟಿಪ್ಪೂ ಸುಲ್ತಾನನ ಲಾವಣಿಯೊಂದರಲ್ಲಿ ಬರುವ

'ಟೀಪು ರಾಜ್ಯದೊಳು ಶರಾಬು, ಶೇಂದಿ, ಗಾಂಜಾ ಅಫೀಮು ಇರಲಿಲ್ಲ,

ಟೀಪುವಿನ ಕಾಲದೊಳು ಜೂಜಿನಾಟ ಮೇಣ್ ವೈಭಿಚಾರದ ಸುಳಿವಿಲ್ಲ'

ಎಂಬ ಸಾಲುಗಳನ್ನು ಉದ್ಧರಿಸಿದ್ದಕ್ಕೆ ನಾನು ಅನೇಕ ಕೆಟ್ಟ ಮತ್ತು ಅಶ್ಲೀಲ ಮಾತುಗಳನ್ನು ಕೇಳಬೇಕಾಯಿತು. ಪಂಡರಾಪುರ ವಿಠ್ಠಲನು ವಲಸೆಗಾರ ಪಶುಪಾಲಕರ ದೈವವಾಗಿರುವ ಸಾಧ್ಯತೆ ಇದೆ ಎಂಬ ಮಾತನ್ನು ಬರೆದದ್ದಕ್ಕೆ ನಾನು ಸಾಕಷ್ಟು ತೊಂದರೆ ಅನುಭವಿಸಬೇಕಾಯಿತು. 'ದೇವನಹಳ್ಳಿಯಲ್ಲಿ ಟಿಪ್ಪು ಹುಟ್ಟಿದ್ದರಿಂದ ಅವನ ಹೆಸರನ್ನು ವಿಮಾನ ನಿಲ್ದಾಣಕ್ಕೆ ಇಡಬಹುದಾಗಿತ್ತು' ಎಂಬ ಒಂದು ಸಣ್ಣ ಅಭಿಪ್ರಾಯನ್ನು ಗಿರೀಶ್ ಕಾರ್ನಾಡರು ವ್ಯಕ್ತಪಡಿಸಿದ್ದೇ ದೊಡ್ಡ ಅಪರಾಧವಾಗಿ ಅನೇಕರಿಗೆ ಕಂಡು ಅವರು ಬಹಿರಂಗವಾಗಿ ಕ್ಷಮೆಯಾಚಿಸಬೇಕಾಯಿತು. ಕರ್ನಾಟಕವೂ ಸೇರಿದಂತೆ, ಈ ದೇಶದ ಸುದೀರ್ಘ ಇತಿಹಾಸದಲ್ಲಿ ಇಲ್ಲಿಗೆ ವಲಸೆ ಬಂದು ನೆಲೆಸಿದ ಜನಾಂಗಗಳ ಮತ್ತು ಸಮುದಾಯಗಳ ಲೆಕ್ಕ ಇಟ್ಟವರಿಲ್ಲ. ಒಂದು ಬಗೆಯ ನಿರಂತರತೆಯನ್ನು ಸದಾ ಕಾಪಾಡುತ್ತಲೇ, ಜೊತೆ ಜೊತೆಗೆ ಬದಲಾಗುತ್ತಾ ಹೋಗಿರುವ ಈ ನೆಲವು, ಬಗೆ ಬಗೆಯ ಸಂಸ್ಕೃತಿಗಳನ್ನು ಉದಾರವಾಗಿ ಸ್ವೀಕರಿಸಿ ಬೆಳೆಯಲು ಅನುವು ಮಾಡಿಕೊಟ್ಟಿದೆ. ಈ ಹಂತದಲ್ಲಿ ನಡೆದ ಹೊಸ ಆವಿಷ್ಕಾರಗಳು, ಸೇರ್ಪಡೆಗಳು, ನಿರಾಕರಣೆಗಳು, ಸಂಘರ್ಷಗಳು ಮತ್ತು ಸಮನ್ವಯಗಳು ನಮ್ಮ ದೇಶವನ್ನು ಇತರ ದೇಶಗಳಿಂದ ಬೇರೆಯಾಗಿಸಿದೆ. ಜಗತ್ತಿನ ಮೂಲೆ ಮೂಲೆಗಳಿಂದ ಇಲ್ಲಿಗೆ ಬೌದ್ಧಿಕತೆ ಹರಿದು ಬಂದಿದೆ, ಭೌತಿಕ ಸಾಮಗ್ರಿಗಳು ಸಾಗಿ ಬಂದಿವೆ. ಅವು ಕಾಲಾಂತರದಲ್ಲಿ ಇಲ್ಲಿಯವರಿಗೆ ಗೊತ್ತಾಗದ ಹಾಗೆ ಇಲ್ಲಿಯವೇ ಆಗಿವೆ. ಇಂದು ಕರ್ನಾಟಕ ಸಂಗೀತದ ಮೂಲ ದ್ರವ್ಯವಾಗಿರುವ ವಯೋಲಿನ್, ಮಧ್ಯ ಏಷಿಯಾದಿಂದ ಇಲ್ಲಿಗೆ ಆಗಮಿಸಿದೆ. ಜನಪದ ಸಂಗೀತದ ಅದರಲ್ಲೂ ಭಾರತದ ದಲಿತರ ಸುಖ ದು:ಖಗಳ ಭಾಗವಾಗಿರುವ ದಪ್ಪು ಕೂಡಾ ಮೂಲತಹ ನಮ್ಮದಲ್ಲ. ಇಂಥ ಘಟನೆಗಳು ನಮಗೆ ಸಹನೆಯನ್ನು ಹೇಳಿಕೊಟ್ಟಿದೆ. ಈ ನೆಲದಲ್ಲಿ ನಡೆದ ಬಹುದೊಡ್ಡ



ಸಂವಾದಗಳು ಇಂದು ನಮ್ಮ ಪ್ರಜಾಪ್ರಭುತ್ವದ ತಳಹದಿಯಾಗಿ ಕೆಲಸ ನಿರ್ವಹಿಸುತ್ತಿದೆ. ಕ್ಷಮೆಯನ್ನು ಧರ್ಮದ 10 ಲಕ್ಷಣಗಳಲ್ಲಿ (ಕ್ಷಮಾ ದಮೋ ಆಸ್ತೇಯಂ..) ಒಂದು ಎಂದು ಪ್ರಾಚೀನ ಹಿಂದೂಗಳು ನಂಬಿದ್ದರು. ಆದರೆ ಈಗ ಏನನ್ನು ಹೇಳಿದರೆ ನಾನು ಅಪಾಯದಿಂದ ಪಾರಾಗಬಹುದು ಎಂದು ಎರಡೆರೆಡು ಬಾರಿ ಯೋಚಿಸಿ ಬರೆಯಬೇಕಾದ ಮತ್ತು ಮಾತಾಡಬೇಕಾದ ವಾತಾವರಣ ನಿರ್ಮಾಣವಾಗುತ್ತಿರುವಾಗ ನಮ್ಮ ಸಂಶೋಧನೆಗಳು ಪೇಲವವಾಗುವುದರಲ್ಲಿ ಅನುಮಾನವಿಲ್ಲ.

ಈ ಸಮಸ್ಯೆ ಇನ್ನೂ ಜಟಿಲವಾಗಿರುವುದು ಸಂಶೋಧನೆಗೆ ಜಾತಿ ಮತ್ತು ಸಮುದಾಯಗಳು ಗಟ್ಟಿಯಾಗಿ ಅಂಟಿಕೊಂಡಿರುವುದರಿಂದ. ಪಂಪ, ಬಸವಣ್ಣ, ಕನಕದಾಸ ಕುವೆಂಪು, ಸಂಗೊಳ್ಳಿ ರಾಯಣ್ಣ, ಕೆಂಪೇಗೌಡ ಮೊದಲಾದ ಇತಿಹಾಸ ಪ್ರಸಿದ್ಧರು, ಎಲ್ಲ ಕನ್ನಡಿಗರ ಸೊತ್ತಾಗಿ ಬೆಳೆಯಬೇಕಾಗಿತ್ತು, ಆದರೆ ಅವರೆಲ್ಲ ಇಂದು ಒಂದೊಂದು ಸಮುದಾಯಗಳಿಗೆ ಸೀಮಿತವಾಗಿ ಕಾಣಿಸಿಕೊಳ್ಳುತ್ತಿದ್ದಾರೆ, ಮತ್ತು ನಿರೀಕ್ಷೆಗೂ ಮೀರಿ ಎಲ್ಲ ಬಗೆಯ ವಿಮರ್ಶೆಗಳ ಗಡಿದಾಟಿ ಬೆಳೆದು ನಿಲ್ಲುತ್ತಿದ್ದಾರೆ. ಕರ್ನಾಟಕದ ಅನೇಕ ಚಾರಿತ್ರಿಕ ಘಟನೆಗಳನ್ನು, ಇತಿಹಾಸ ನಿರ್ಮಾಪಕರನ್ನು ಮತ್ತು ಸಾಹಿತಿಗಳನ್ನು ಜಾತಿಯ ಕಬಂಧ ಬಾಹುಗಳಿಂದ ಬಿಡಿಸದೇ ಹೋದರೆ ಯಾವ ಬಗೆಯ ಚರ್ಚೆಯೂ ಸಾಧ್ಯವಿಲ್ಲ, ಸಂಶೋಧನೆಯೂ ಸಾಧ್ಯವಿಲ್ಲ. ಈ ಮಾತು ಅನೇಕ ಜನಪದ ಕಲೆಗಳಿಗೂ ಅನ್ವಯವಾಗುತ್ತದೆ. ಯಕ್ಷಗಾನದಂಥ ಜನಪ್ರಿಯ ಕಲೆಯಲ್ಲಿ ವಿದೂಷಕನಿಗಿದ್ದ ಮುಕ್ತ ಅವಕಾಶ ಈಗ ಸಂಕುಚಿತವಾಗಿಬಿಟ್ಟಿದೆ. ಅರಸರನ್ನೂ, ದೇವಾನು ದೇವತೆಗಳನ್ನು, ಋಷಿಗಳನ್ನೂ ರಂಗದ ಮೇಲೆ ಎಗ್ಗಿಲ್ಲದೆ ಹಾಸ್ಯ ಮಾಡುವ ಅವಕಾಶ ಸಂಸ್ಕೃತ ರಂಗಭೂಮಿಯಿಂದ ತೊಡಗಿ ಜನಪದ ರಂಗಭೂಮಿಯವರೆಗೆ ವಿದೂಷಕನಿಗೆ ಮೊದಲಿನಿಂದಲೂ ಇತ್ತು. ಆದರೆ ಈಗ ಇಲ್ಲ ಅಥವಾ ಅಂಥ ಅವಕಾಶ ಕಡಿಮೆಯಾಗಿದೆ. ಪ್ರಜಾಪ್ರಭುತ್ವದ ಮೂಲ ಆಶಯಕ್ಕೆ ವಿರುದ್ಧವಾಗಿ ಕಲಾವಿದರ ಮುಕ್ತ ಅಭಿವ್ಯಕ್ತಿಗೆ ಈಗ ಅಂಕುಶ ಬಿದ್ದಿದೆ. ಇಂಥಲ್ಲಿ ಸೃಜನಶೀಲತೆ, ಸಂಶೋಧನೆ ಮತ್ತು ವಿಮರ್ಶೆ ಆರೋಗ್ಯಕರವಾಗಿ ಬೆಳೆಯುವುದು ಅಸಾಧ್ಯ. ಮಾರ್ಗ–4 ರಲ್ಲಿ ಕಲಬುರ್ಗಿಯವರು ಹೀಗೆ ಬರೆಯುತ್ತಾರೆ–

'ಇತ್ತೀಚೆಗೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ ರಾಜಕೀಯ–ಧಾರ್ಮಿಕ ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟು ಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಇತಿಹಾಸವನ್ನು ಮುಂದು ಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ (ಮಾರ್ಗ–4, ಮಾರ್ಗಕ್ಕೆ ಮೊದಲು, 2004)

ಬಹುಶ: ಕನ್ನಡ ಎಂದೂ ಇಂಥ ಪರಿಸ್ಥಿತಿಯನ್ನು ಇದಿರಿಸಿಲ್ಲ ಎಂಬ ಅಂಶವು ನಮ್ಮ ಆತಂಕವನ್ನು ಇನ್ನೂ ಹೆಚ್ಚು ಮಾಡುತ್ತಿದೆ.

ಅರಿಕೇಸರಿಯ ಆಸ್ಥಾನ ಕವಿಯಾಗಿದ್ದ ಪಂಪನಿಗೆ 'ಓಲಗಿಸಿ ಬಾಳ್ವುದು ಕಷ್ಟಂ ಇಳಾಧಿನಾಥರಾ' ಎಂದು ಹೇಳುವ ಧೈರ್ಯವಿತ್ತು. 'ಮೂರ್ಧಾಭಿಷಿಕ್ತರಾದ ಹಲವು ಅರಸರು ವಿಷಯ ಭೋಗಗಳಿಂದಾಗಿ ಮದೋನ್ಮತ್ತರಾಗಿ ತಮ್ಮಂ ಮರೆತು ಧರ್ಮವೆಂಬ ದೋಣಿಯಿಂದ ಜಾರಿ ಬೀಳುತ್ತಾರೆ' ಎಂದು ಅವನು ಕೆಂಡ ಕಾರುತ್ತಾನೆ. ಊರೆಲ್ಲಾ ತುಂಬಿಕೊಂಡಿರುವ ಬ್ರಹ್ಮಚಾರಿಗಳನ್ನು ಕಂಡ ಉರಿಲಿಂಗ ಪೆದ್ದಿಯು– 'ಹೊನ್ನ ಬಿಟ್ಟು, ಹೆಣ್ಣ ಬಿಟ್ಟು, ಮಣ್ಣ ಬಿಟ್ಟು, ಬ್ರಹ್ಮಚಾರಿಗಳಾಗಬೇಕೆಂದು ಬಣ್ಣಿವಿಟ್ಟು ನುಡಿವ ಅಣ್ಣಗಳ ಪರಿಯ ನೋಡಿರೋ' ಎಂದು ಕೆಣಕುತ್ತಾನೆ. ಮಧ್ಯಕಾಲೀನ ಕರ್ನಾಟಕದ ವೈಭವದ ಅರಸೊತ್ತಿಗೆಯನ್ನು ಕಣ್ಣಾರೆ ಕಂಡ ಕುಮಾರವ್ಯಾಸನು 'ಅರಸು ರಾಕ್ಷಸ, ಮಂತ್ರಿಯೆಂಬುವ ಮೊರೆವ ಹುಲಿ, ಪರಿವಾರ ಹದ್ದಿನ ನೆರವಿ, ಬಡವರ ಬಿನ್ನಪವನಿನ್ನಾರು ಕೇಳುವರು, ಉರಿವುರಿವುತಿದೆ ದೇಶ, ನಾವಿನ್ನಿರಲು ಬಾರದು' ಎಂದು ಗುಡುಗಿದ್ದಲ್ಲದೆ, 'ಸಿರಿಯನುಳ್ಳವನವನೆ ಕುಲಜನು, ಸಿರಿಯನುಳ್ಳವನೇ ವಿದಗ್ಧನು, ಸಿರಿಯನುಳ್ಳವನೇ ಮಹಾತ್ಮನು ಸಕಲಗುಣಯುತನು' ಎಂದು ವ್ಯಂಗ್ಯವಾಡುತ್ತಾನೆ. ಹಂಪಿಯ ಅಪಾರ ಸಂಪತ್ತನ್ನು ತಾತ್ವಿಕವಾಗಿ ನಿರಾಕರಿಸುವ ಪುರಂದರದಾಸರು

'ಲೊಳಲೊಟ್ಟೆ, ಎಲ್ಲಾ ಲೊಳಲೊಟ್ಟೆ,
ಆನೆಕುದುರೆ ಎಲ್ಲ ಲೊಳಲೊಟ್ಟೆ
ಸೇನೆ ಭಂಡಾರವು ಲೊಳಲೊಟ್ಟೆ
ಮುತ್ತು ಮಾಣಿಕ್ಯ ಲೊಳಲೊಟ್ಟೆ
ಛತ್ರಚಾಮರ ಧ್ವಜ ಲೊಳಲೊಟ್ಟೆ'

ಎಂದು ಹೇಳಿ 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ಎಂದು ಘೋಷಿಸುತ್ತಾನೆ. ಆ ಕಾಲದ ವರ್ತಕರು

ಪುಟ 10 ಕ್ಕೆ

ರಾಜ್ಯಪಾಲರಿಂದ ಅಕಾಡೆಮಿಕ್ ಸ್ವಾತಂತ್ರ್ಯಕ್ಕೆ ಭಂಗ

ಘಟಿಕೋತ್ಸವದಲ್ಲಿ ರಾಜ್ಯಪಾಲರ ಕೆಲಸ ಅವರಿಗೆ ನೀಡಿದ ಜವಾಬ್ದಾರಿಯನ್ನು ನಿರ್ವಹಿಸುವುದಷ್ಟೆ. ಅವರು ಘಟಿಕೋತ್ಸವದ ಅತಿಥಿಗಳಷ್ಟೇ. ಘಟಿಕೋತ್ಸವ ವಿವಿಗೆ ಸೇರಿದ್ದು. ರಾಜ್ಯಪಾಲರ ಕಛೇರಿಗೆ ಸೇರಿದ್ದಲ್ಲ. ರಾಜ್ಯಪಾಲರ ದುರಂಹಕಾರ ಮತ್ತು ಸರ್ವಾಧಿಕಾರಿ ಧೋರಣೆಯನ್ನು ಖಂಡಿಸಬೇಕು. ನಾಡೋಜ ಗೌರವ ನೀಡಿಕೆಯ ಬಗ್ಗೆಯೂ ಇವರ ಧೋರಣೆ ಖಂಡನೀಯ. ಯಾರಿಗೆ ಗೌರವ ಪದವಿ ನೀಡಬೇಕೆಂಬುದು ಕೂಡ ವಿವಿಯ ತೀರ್ಮಾನ. ಇವರ ಪಾತ್ರ ಸಂವಿಧಾನಕ್ಕೆ ವಿರುದ್ಧವಾದ ನಡೆಗಳೇನಾದರೂ ಇದ್ದರೆ ಪರಿಶೀಲಿಸುವುದಷ್ಟೆ. ದೇಶದಲ್ಲಿ ಆರ್.ಎಸ್.ಎಸ್. ಅಂಗಗಳು ವಿವಿಧ ವಿ.ವಿ.ಗಳ ಸ್ವಾಯತ್ತತೆ ಮತ್ತು ಅಕಾಡೆಮಿಕ್ ಸ್ವಾತಂತ್ರ್ಯದ ಬಗ್ಗೆ ಯಾವ ಹಾವಳಿ ಮಾಡುತ್ತಿದ್ದಾವೋ ಅದನ್ನು ಇಲ್ಲಿ ಆರ್.ಎಸ್.ಎಸ್. ಅಂಗವಾದ ರಾಜ್ಯಪಾಲರಿಂದ ಮಾಡಿಸುತ್ತಿದ್ದಾರೆ. ಘಟಿಕೋತ್ಸವದ ಭಾಷಣವನ್ನು ಕಡಿತಗೊಳಿಸಿದ್ದಕ್ಕೆ ಪ್ರಗತಿಪರ ವಿಚಾರಗಳು ಜನತೆಗೆ ತಿಳಿಯಬಾರದೆಂದು ತಡೆಹಿಡಿಯುವುದೇ ಆಗಿದೆ. ರಾಜ್ಯಾದ್ಯಂತ ಪ್ರಗತಿಪರರು ಇದರ ವಿರುದ್ಧ ರಾಜ್ಯಪಾಲರಿಗೆ ಪತ್ರ ಬರೆಯಬೇಕು. ಮತ್ತು ಪತ್ರಿಕಾ ಹೇಳಿಕೆಗಳ ಮೂಲಕ ಖಂಡಿಸಬೇಕು.

– ಜಿ.ಎನ್. ನಾಗರಾಜ್

ಇದು ವಿದ್ವಾಂಸರಿಗೆ ಮಾಡುವ ಅಪಮಾನ

ನುಡಿಹಬ್ಬದ ಭಾಷಣವನ್ನು ಐದು ನಿಮಿಷಕ್ಕೆ ಮೊಟಕುಗೊಳಿಸಿರುವುದಕ್ಕೆ ಪ್ರೊ. ಪುರುಷೋತ್ತಮ ಬಿಳಿಮಲೆ ಅವರು ಅಸಮಾಧಾನ ವ್ಯಕ್ತಪಡಿಸಿದ್ದು ಹೀಗೆ :

"ನಾನು ದೆಹಲಿಯಿಂದ ಇಲ್ಲಿಗೆ ಬಂದಿದ್ದೇನೆ. ಇಲ್ಲಿಗೆ ಬಂದ ನಂತರ ಕೇವಲ ಐದು ನಿಮಿಷ ಮಾತನಾಡಬೇಕು ಎಂದು ಹೇಳಿದ್ದಾರೆ. ಹೀಗೆ ಮಾಡುವುದಾದರೆ ಘಟಿಕೋತ್ಸವ ಭಾಷಣ ರದ್ದುಪಡಿಸುವುದು ಉತ್ತಮ. ಇಲ್ಲವಾದಲ್ಲಿ ಕಾಲಾವಕಾಶವನ್ನು ವಿಸ್ತರಿಸಿ... .. ಇದು ವಿದ್ವಾಂಸರಿಗೆ ಮಾಡುವ ಅಪಮಾನ.. .. ಈ ರೀತಿ ಮಾಡುವುದಾದರೆ ಘಟಿಕೋತ್ಸವ ಭಾಷಣ ಮೊಟಕುಗೊಳಿಸಬೇಕು. ವಿದ್ವಾಂಸರ ಬದಲಾಗಿ ಸ್ಥಳೀಯ ರಾಜಕಾರಣಿಗಳನ್ನು ಕರೆಸಬೇಕು"

ಸಂಶೋಧಕರ ಮುಂದಿರುವ ಸವಾಲುಗಳು.......... ಪುಟ 9 ರಿಂದ

ಮುತ್ತು ರತ್ನಗಳನ್ನು ಬೀದಿಯಲ್ಲಿ ಮಾರಾಟ ಮಾಡುತ್ತಿದ್ದಾಗ, ಅದೇ ಬೀದಿಯಲ್ಲಿ ಓಡಾಡಿದ ದಾಸರು– 'ಲಂಗೋಟಿ ಬಲು ಒಳ್ಳೇದಣ್ಣ ಒಬ್ಬರ ಹಂಗಿಲ್ಲದೆ ಮಡಿಗೆ ಒದಗುವುದಣ್ಣ,' ಎಂದು ಹಾಡಿ ಪ್ರತಿಭಟಿಸಿದರು. 'ಕೆಂಡಗಣ್ಣ ನೊಸಲೊಳಗಿಟ್ಟ ನಮ್ಮ ಶಿವ ಕೆಂಡವ ಸೋಂಕಲು ಅಳುವೆಯಲ್ಲೋ ಖೋಡಿ' ಎಂದು ದೈವವನ್ನೇ ಹಾಸ್ಯ ಮಾಡಲು ಅವರು ಹಿಂಜರಿಯಲಿಲ್ಲ.

ಹೀಗೆ ಎಲ್ಲ ಬಗೆಯ ಸ್ಥಾಪಿತ ಹಿತಾಸಕ್ತಿಗಳನ್ನು ವಿರೋಧಿಸಿಯೇ ಕನ್ನಡ ಸಾಹಿತ್ಯ ಬೆಳೆದಿದೆ. ಈ ಮಾತಿಗೆ ಕನ್ನಡದಲ್ಲಿ ಬರೆದ ಸೂಫಿ ಸಂತರು ಕೂಡಾ ಹೊರತಲ್ಲ. ಸಾಲಗುಂದ ಗುರು ಖಾದರಿ ಪೀರನು 'ಮಸೀದಿ ಎಂಬುದು ಹಾಳಾದ ಜಾಗ, ಅದರ ಗೊಡವಿ ನಿನಗ್ಯಾಕಂತೆ' ಎಂದು ಸಡ್ಡು ಹೊಡೆಯುತ್ತಾನೆ. ಹೀಗೆ ನಮ್ಮ ಸಾಹಿತ್ಯ ಪರಂಪರೆಗೆ ಅದರದ್ದೇ ಒಂದು ಗುಣವಿದೆ, ಅದು ಕನ್ನಡವನ್ನು ಕರ್ನಾಟಕವನ್ನು ಇದುವರೆಗೆ ಬದುಕಿಸಿದೆ. ಆದರೆ ಈಗ ಅದರ ಹಾದಿ ಬದಲುವಂತಿದೆಯಾದ್ದರಿಂದ ನಾವೆಲ್ಲ ಅರೆಕ್ಷಣ ನಿಂತು, ಯೋಚಿಸಿ, ಮುಂದುವರೆಯಬೇಕಾಗಿದೆ.

ಹಾಗೆ ನೋಡಿದರೆ, ಆಧುನಿಕತೆಯ ಪರಿಣಾಮವಾಗಿ ನಮ್ಮ ಸಮಾಜ ತೀವ್ರಗತಿಯಲ್ಲಿ ಬದಲಾಗುತ್ತಾ ಪ್ರಗತಿಗಾಮಿಯಾಗಬಹುದೆಂದು ಸ್ವಾತಂತ್ರ್ಯಾ ನಂತರದ ಕಾಲಘಟ್ಟದಲ್ಲಿ ಹುಟ್ಟಿದ್ದ ನಾವೆಲ್ಲ ನಂಬಿದ್ದೆವು. ಆದರೆ ಅದು ಹಾಗಾಗದೆ, ಮತ್ತೆ ನಮ್ಮ ಸಮಾಜದ ಪ್ರತಿಗಾಮೀ ಬೇರುಗಳು ಗಟ್ಟಿಗೊಳ್ಳುತ್ತಿವೆ. ಜಾತಿಯ ಪ್ರಜ್ಞೆ ಹೊಸ ರೂಪ ತಾಳುವುದರ ಜೊತೆಗೆ ಅದರೊಂದಿಗೆ ಕೋಮುವಾದವೂ ಸೇರಿಕೊಂಡು, ಸೃಜಶೀಲವಾಗಿದ್ದ ಜನ ಸಂಸ್ಕೃತಿಗಳು ಇಂದು ಪತನಮುಖಿಯಾಗುತ್ತಲಿವೆ. ಈ ಬೆಳವಣಿಗೆಯ ತಕ್ಷಣದ ಪರಿಣಾಮವೆಂದರೆ ಸಮುದಾಯ, ಜಾತಿ ಮತ್ತು ಕೋಮುಗಳು ತಮ್ಮ ಆಂತರಿಕ ವಿಮರ್ಶನ ಪ್ರಜ್ಞೆಯನ್ನು ಕಳೆದುಕೊಂಡು, ಸ್ವಯಂ ವಿನಾಶದ ಕಡೆಗೆ ಚಲಿಸುವುದು. ನಿಖರ ಮತ್ತು ಪ್ರಖರ ವಿಮರ್ಶೆಗೆ ತೆರೆದುಕೊಂಡಿದ್ದ ಸಮುದಾಯಗಳು ಇಂದು ಒಂದು ಸಣ್ಣ ಟೀ–ಕೆಗೆ ಬೆಚ್ಚಿ ಬೀಳುತ್ತಿವೆ ಎಂದರೆ ಅವು ಆಂತರಿಕವಾಗಿ ಕುಸಿದಿವೆ ಎಂದೇ ಅರ್ಥ. ಹಾಗಾಗಿಯೇ ಅವು ತಮ್ಮ ಕೀಳರಿಮೆಯನ್ನು ಕಳೆದುಕೊಳ್ಳಲು ಇತರರ ಮೇಲೆ ಆಕ್ರಮಣ ಮಾಡಲಾರಂಭಿಸಿವೆ. ಮೊದಲು ದಲಿತರನ್ನು ಸಜೀವವಾಗಿ ಸುಡಲಾಗುತ್ತಿತ್ತು, ಆದರೆ ಈಗ ದಲಿತರು ಆತ್ಮಹತ್ಯೆ ಮಾಡಿಕೊಳ್ಳುವ ಹಾಗೆ ಮಾಡಲಾಗುತ್ತಿದೆ. ಕೋಮುವಾದಕ್ಕೆ ಕೋಮುವಾದ ಉತ್ತರವಾದರೆ, ಜಾತಿಗೆ ಜಾತಿ ಉತ್ತರವಾದರೆ, ದ್ವೇಷಕ್ಕೆ ದ್ವೇಷ ಉತ್ತರವಾದರೆ ಅವೆಲ್ಲವೂ ದ್ವಿಗುಣಗೊಳ್ಳುತ್ತವೆ ಎಂಬ ಸರಳ ಸತ್ಯವನ್ನು ನಾವೀಗ ಮನಗಾಣಲಾರದಾಗಿದ್ದೇವೆ.

ಈ ಬಗೆಯ ಬೆಳವಣಿಗೆಗಳು ಜನರು ಸುದೀರ್ಘ ಕಾಲಾವಧಿಯಲ್ಲಿ ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಬೆಳೆಸಿಕೊಂಡು ಬಂದ ಸಂಸ್ಕೃತಿಯನ್ನು ಅಧೋಮುಖಿಯಾಗಿಸುತ್ತವೆ, ಇಲ್ಲವೇ ಅನ್ಯ ಸಂಸ್ಕೃತಿಯ ಅಧೀನಕ್ಕೆ ಒಳಗಾಗಿ ತಮ್ಮ ಸೃಜನಶೀಲತೆಯನ್ನು ಕಳೆದುಕೊಳ್ಳಲು ಒತ್ತಡ ಹೇರುತ್ತವೆ. ನಮ್ಮ ಸಂಶೋಧನೆಗಳು ಈ ಬಗೆಯ ಬೆಳವಣಿಗೆಗಳಿಗೆ ಮುಖಾಮುಖಿಯಾಗದೇ ಹೋದರೆ ಅವು ಅನುಪಯುಕ್ತವಾಗಿಬಿಡುತ್ತವೆ. ಸಾಮಾಜಿಕ ಆಯಾಮವಿಲ್ಲದ ಸಂಶೋಧನೆಗಳು ಭಾರತದಲ್ಲಿ ವಿಶೇಷವಾದ್ದೇನನ್ನೂ ಸಾಧಿಸಲಾರವು.

ಕರ್ನಾಟಕದ ಸಾಂಸ್ಕೃತಿಕ ವೈವಿಧ್ಯದ ಸಂಕೇತಗಳೆಂದರೆ ಇಲ್ಲಿನ ಜನಪದ ಕಲೆಗಳು. ಗೀಗೀ ಪದಗಳಲ್ಲಿ ಗಂಡು ಹೆಚ್ಚೋ, ಹೆಣ್ಣು ಹೆಚ್ಚೋ ಚರ್ಚೆ ನಡೆಯುತ್ತದೆ. ಮುಸಲ್ಮಾನರ ರಂಜಾನ್ ಪದಗಳಲ್ಲಿ ಎಳೆ ವಯಸ್ಸಿನಲ್ಲಿ ಸತ್ತು ಹೋದ ಅಸಗರನನ್ನು ಅಭಿಮನ್ಯುವಿಗೆ ಹೋಲಿಸಲಾಗಿದೆ. ಅಕಾಲ ಮರಣಕ್ಕೀಡಾದ ಕುಂಬಳೆಯ ಆಲಿ, ಮತ್ತು ಕಡಲ ಪಯಣದಲ್ಲಿ ವಿಕ್ರಮ ಸಾಧಿಸಿದ ಬೊಬ್ಬರ್ಯ ಇಬ್ಬರೂ ಸಾಂಸ್ಕೃತಿಕ ವೀರರೆಂದು ಗುರುತಿಸಿಕೊಂಡು ತುಳುನಾಡಿನ ಭೂತಾರಾಧನೆಯಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ. ಇಸ್ಲಾಂ ಧರ್ಮವು ಭೂತಾರಾಧನೆಯನ್ನು ತಾತ್ವಿಕವಾಗಿ ಒಪ್ಪದು, ಹಿಂದೂ ಧರ್ಮವು ಮುಸ್ಲಿಂ ನಾಯಕರನ್ನು ತಮ್ಮ ದೈವವಾಗಿ ಅಂಗೀಕರಿಸದು. ಆದರೆ ಇವೆರಡೂ ಕರಾವಳಿಯ ಮಣ್ಣಲ್ಲಿ ಸಾಧ್ಯವಾಗಿದೆ. ತನಗೆ ದೇವಸ್ಥಾನ ಕಟ್ಟಿಕೊಟ್ಟ ಬಪ್ಪ ಬ್ಯಾರಿಗೆ ಮೂಲ್ಕಿಯ ದುರ್ಗಾ ಪರಮೇಶ್ವರಿಯು ಇಂದಿಗೂ ಗಂಧ ಪ್ರಸಾದ ನೀಡುತ್ತಾಳೆ, ಮಾತ್ರವಲ್ಲ ಆ ಊರಿಗೆ ಬಪ್ಪನಾಡೆಂಬ ಹೆಸರು ಪ್ರದಾನ ಮಾಡುತ್ತಾಳೆ. ಹಡಗಲಿಯ ಮೈಲಾರ ಲಿಂಗಪ್ಪನು ಅತಿಯಾದ ಹಣದಾಸೆಯ ತಿರುಪತಿ ತಿಮ್ಮಪ್ಪನ ಮಗಳನ್ನು ಮೋಸದಿಂದ ಮದುವೆಯಾಗುವುದಲ್ಲದೆ, ಚಿಕ್ಕಾಸು ಕೂಡಾ ಕೊಡದೆ ತಿಮ್ಮಪ್ಪನನ್ನು ನಿರಂತರವಾಗಿ ಗೋಳಾಡಿಸುತ್ತಾನೆ. ವಿಲೋಮ ವಿವಾಹ ನಿಷಿದ್ಧ ಎಂದು ಶಾಸ್ತ್ರಗಳು ಸಾರುತ್ತಿರುವಾಗಲೇ ಬಾವಿಗೆ ಬಿದ್ದ ದಲಿತ ಹುಡುಗನನ್ನು ಸೀರೆಯ ಸೆರಗಿಳಿಸಿ ಮೇಲೆತ್ತಿದ ಬ್ರಾಹಣ ಕನ್ಯೆಯ ಕತೆಗಳನ್ನು ಜನರು ಹೇಳುತ್ತಾ ಬಂದಿದ್ದಾರೆ. ಮುಸಲ್ಮಾನ ಅರಸರು ಹಿಂದೂ ರಾಜ್ಯವನ್ನು ನಾಶ ಮಾಡಿದರು ಎಂದು ಅನೇಕರು ಬರೆಯುತ್ತಿದ್ದಾಗ ಮುಸಲ್ಮಾನ ಹುಡುಗಿಯು ಹಿಂದೂ ಯುವಕನ್ನು ಪ್ರೀತಿಸಿದ ಕತೆಯನ್ನು ನಮ್ಮ ಜನಪದ ಕಲೆಗಳು ರಂಗದ ಮೇಲೆ ಪ್ರದರ್ಶಿಸುತ್ತಾ ಬಂದಿವೆ. ಇಂಥ ಹಲವು ಮುಕ್ತ ಮತ್ತು ಅದ್ಭುತ ನಿರೂಪಣೆಗಳಿರುವ ನಾಡು ಇದೀಗ ತನ್ನ ಬಾಗಿಲುಗಳನ್ನು ಮತ್ತಷ್ಟು ವಿಸ್ತಾರವಾಗಿ ತೆರೆದುಕೊಳ್ಳಬೇಕಿತ್ತು. ಆದರೆ ಅವು ಹೆಚ್ಚು ಹೆಚ್ಚು ಸಂಕುಚಿತಗೊಂಡು ಮುಚ್ಚಿಕೊಳ್ಳುತ್ತಿವೆ. ಜನಪದ ಸಂಸ್ಕೃತಿಗಳ ಅವನತಿಯು ಪ್ರಚಲಿತ ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ವಿದ್ಯಮಾನಗಳಲ್ಲಿ ಒಂದು. ಇಂಥ ಬೆಳವಣಿಗೆಗಳ ಬಗೆಗೆ ಗಂಭೀರವಾದ ಚರ್ಚೆ ನಮ್ಮ ವಿಶ್ವವಿದ್ಯಾಲಯಗಳಲ್ಲಿ ನಡೆಯಲು ಸಾಧ್ಯವಾದರೆ ಅದರಿಂದ ಸಮಾಜಕ್ಕೆ ತುಂಬಾ ಪ್ರಯೋಜನವುಂಟು. ಭಾಷೆ, ಗಡಿ ಮತ್ತು ಸಂಸ್ಕೃತಿಯ ವಿಷಯಗಳು ಬಹುಬೇಗ ಜನರನ್ನು ತಪ್ಪುದಾರಿಗೆಳೆದದ್ದನ್ನು ವಿಶ್ವದ ಇತಿಹಾಸ ರುಜುವಾತು ಪಡಿಸಿದೆ. ಜಗತ್ತಿನ ಎಲ್ಲೆಡೆಯೂ ಈ ಮೂರು ಶಬ್ದಗಳನ್ನು ಉಪಯೋಗಿಸಿಯೇ ಫ್ಯಾಸಿಸ್ಟ್ ಶಕ್ತಿಗಳು ವಿಜೃಂಭಿಸಿವೆ. ಕಾರಣ ನಮ್ಮ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನೆಗಳು ಈ ಬೆಳವಣೆಗೆಗಳ ಕುರಿತು ವಿಶೇಷ ಎಚ್ಚರ ವಹಿಸಬೇಕೆಂದು ನಾನು ಭಾವಿಸುತ್ತೇನೆ. ●

ಸಾಯುವುದೂ ಆದರ್ಶ ಎಂದು ನಂಬಿದ.............. ಪುಟ 8 ರಿಂದ

ಬಂಡವಾಳಷಾಹಿ ವ್ಯವಸ್ಥೆಯನ್ನು ಕಿತ್ತು ಹಾಕಿ ಶ್ರಮಜೀವಿ ವರ್ಗದ ಸಮಾಜವಾದಿ ವ್ಯವಸ್ಥೆಯನ್ನು ನಿರ್ಮಿಸುವುದರಿಂದ ಮಾತ್ರವೇ ಶೋಷಣೆಗೆ ಅಂತ್ಯ ಹಾಡಬಹುದೆಂದು ಭಗತ್‌ಸಿಂಗ್ ನಂಬಿದ್ದರು. ಅವರ ಮಾತಲ್ಲೇ ಹೇಳುವುದಾದರೆ "ಈ ನೆಲದ ಶ್ರಮಜೀವಿಗಳೆಲ್ಲಾ ಒಂದಾಗಿ. ಈ ದೇಶದ ಸಂಪತ್ತನ್ನು ಸೂರೆಗೊಳ್ಳಲು, ಇಲ್ಲಿನ ಅನಕ್ಷರಸ್ಥ–ಬಡ–ಅಂತರ್ಯುದ್ಧ ಪೀಡಿತ ಜನರನ್ನು ಶೋಷಿಸಲು ಬಂದ ಬಂಡವಾಳಷಾಹಿ, ಸಾಮ್ರಾಜ್ಯಷಾಹಿಗಳನ್ನು ದೇಶ ಬಿಟ್ಟು ಓಡಿಸಿ" ಎನ್ನುತಾರೆ. ಹಾಗೆಯೇ ಭಗತ್‌ಸಿಂಗ್ ತನ್ನ ತಾಯಿಗೆ ಬರೆದ ಪತ್ರದಲ್ಲಿ ಹೀಗೆನ್ನುತ್ತಾರೆ.

"ಈ ದೇಶ ಒಂದಲ್ಲಾ ಒಂದು ದಿನ ಸ್ವಾತಂತ್ರ್ಯ ಗಳಿಸುತ್ತದೆ ಎಂಬ ಅಚಲವಾದ ನಂಬಿಕೆ ಇದೆ. ಆದರೆ ನನಗಿರುವ ಆತಂಕ ಬಿಳಿ ದೊರೆಗಳ ಬದಲು ಕಂದು ದೊರೆಗಳು ಕುರ್ಚಿಯಲ್ಲಿ ಬಂದು ಕೂರುವುದರಿಂದ ಯಾವ ಪ್ರಯೋಜನವಾಗಲಾರದು, ಕೇವಲ ಯಜಮಾನರ ಬದಲಾವಣೆಯಿಂದ ಸ್ವಾತಂತ್ರ್ಯ ಬಂದಂತಾಗುವುದಿಲ್ಲ, ಜಡ್ಡುಗಟ್ಟಿದ ಈ ಪುರಾತನ ವ್ಯವಸ್ಥೆಯನ್ನು ನಾಶ ಮಾಡದೇ ಬದಲಾವಣೆ ಅಸಾಧ್ಯ.". ಅಂದರೆ ಭಗತ್‌ಸಿಂಗ್ ಕಂಡ ಕನಸು ವ್ಯವಸ್ಥೆಯ ಸಂಪೂರ್ಣ ಬದಲಾವಣೆ, ಅದನ್ನೇ ಅವರು 'ಕ್ರಾಂತಿ' ಎಂದು ಕರೆದದ್ದು.

ಭಗತ್‌ಸಿಂಗ್ ಕವಿ, ಲೇಖಕ, ಅದ್ಭುತ ಮಾತುಗಾರನಾಗಿದ್ದ. ಆ ವಯಸ್ಸಿಗೆ ಅವನಿಗಿದ್ದ ಜ್ಞಾನದಾಹ ದಂಗು ಬಡಿಸುತ್ತದೆ. ಅವನು ಓದುವ ಭರಕ್ಕೆ ಪುಸ್ತಕ ಒದಗಿಸಲಾರದ ಸ್ಥಿತಿ ಇತ್ತು. ಜೈಲಿನ ಒಳಗೆ ಇರುವೆಯೂ ನುಸುಳಲು ಅಸಾಧ್ಯವಾಗಿದ್ದ ಸಂದರ್ಭದಲ್ಲಿ ಹೊರಗಿನಿಂದ ತರಿಸಿಕೊಂಡು ಜೈಲಿನಲ್ಲಿಯೇ ನಾನೂರುಕ್ಕೂ ಹೆಚ್ಚು ಪುಸ್ತಕಗಳನ್ನು ಓದಿದ್ದ. ಅವನ ಅಸಾಧಾರಣ ತಿಳುವಳಿಕೆ, ವ್ಯವಸ್ಥೆಯ ಕುರಿತು ಸ್ಪಷ್ಟತೆ, ಒಬ್ಬ ವ್ಯಕ್ತಿಯಾಗಿ, ಪ್ರಜೆಯಾಗಿ, ರಾಜಕೀಯ ಕಾರ್ಯಕರ್ತನಾಗಿ ಮಾದರಿಯಾಗಿ ನಿಲ್ಲುತ್ತಾರೆ. ರಾಜಕೀಯ ಯುವ ಕಾರ್ಯಕರ್ತರಿಗೆ ಹೇಳುವ ಈ ಮಾತು ಅವರಲ್ಲಿದ್ದ ನಿಸ್ವಾರ್ಥ ಮನೋಭಾವ, ಆತ್ಮವಿಶ್ವಾಸ, ದೃಢತೆಯನ್ನು ನಿರೂಪಿಸುತ್ತದೆ. 'ಮೊದಲು ನಿಮ್ಮ ವೈಯಕ್ತಿಕತೆಯನ್ನು ನುಚ್ಚುನೂರು ಮಾಡಿ, ವೈಯಕ್ತಿಕ ಸುಖದ ಕನಸನ್ನು ಭಗ್ನಗೊಳಿಸಿ, ನಂತರ ಕೆಲಸ ಮಾಡಲು ತೊಡಗಿ, ನೀವು ಒಂದೊಂದೇ ಅಂಗುಲ ಮುಂದಕ್ಕೆ ಸಾಗಬೇಕು. ಯಾವ ಕಷ್ಟ ಕಾರ್ಪಣ್ಯಗಳೂ ನಿರಾಶೆಗೊಳಿಸುವುದಿಲ್ಲ. ಯಾವ ವೈಫಲ್ಯಗಳೂ ನಿಮ್ಮನ್ನು ಕಂಗೆಡಿಸುವುದಿಲ್ಲ. ತ್ಯಾಗ ಮತ್ತು ನರಳಾಟಗಳ ಅಗ್ನಿದಿವ್ಯವನ್ನು ಹಾದು ನೀವು ವಿಜಯಶಾಲಿಗಳಾಗುತ್ತೀರಿ. ಈ ವೈಯಕ್ತಿಕ ಗೆಲುವುಗಳು ಕ್ರಾಂತಿಯ ಬಹುದೊಡ್ಡ ಆಸ್ತಿ'.

'ದೇಶಭಕ್ತರು' vs 'ದೇಶದ್ರೋಹಿ'ಗಳು

ಈ ಅಪ್ರತಿಮ ದೇಶಭಕ್ತರ ನೆನಪಿಸಿಕೊಳ್ಳಬೇಕಾದ ಈ ಸಮಯದಲ್ಲಿ ಗಾಂಧಿಯನ್ನು ಕೊಂದ ಗೋಡ್ಸೆಗೆ ಗುಡಿ ಕಟ್ಟಲಾಗುತ್ತಿದೆ. ಸ್ವಾತಂತ್ರ್ಯ ಹೋರಾಟದ ವಿರುದ್ಧ ಮಾತನಾಡಿದವರು ಇಂದು ಮಹಾ ದೇಶಭಕ್ತರಂತೆ ಗಂಟಲು ಹರಿದುಕೊಳ್ಳುತ್ತಿದ್ದಾರೆ. ಭಗತ್‌ಸಿಂಗ್ ಕಂಡ ಕನಸು ನನಸಾಗಬೇಕೆಂದು ಬಯಸುವವರು, ಅದಕ್ಕಾಗಿ ಹೋರಾಟ ನಡೆಸುವವರನ್ನು ಇಂದು 'ದೇಶದ್ರೋಹಿ'ಗಳೆಂದು ಬಿಂಬಿಸಲಾಗುತ್ತಿದೆ. ಭಗತ್‌ಸಿಂಗ್ ವಿಚಾರಗಳನ್ನೆ ಪ್ರತಿಪಾದಿಸಿದ ಕನ್ಹಯ್ಯ ಕುಮಾರ್, ರೋಹಿತ್ ವೇಮುಲ ಪಟ್ಟಭದ್ರರ ದೃಷ್ಟಿಯಲ್ಲಿ ದೇಶದ್ರೋಹಿಗಳಾಗಿದ್ದಾರೆ. ಆದರೆ ವಾಸ್ತವ? ಭಗತ್‌ಸಿಂಗ್ ಆತಂಕ ನಿಜವಾಗಿದೆ. ಸ್ವತಂತ್ರ ಭಾರತದ 69 ವರ್ಷಗಳ ಆಡಳಿತ, ಭಗತ್‌ಸಿಂಗ್ ಅವರ ಆಶಯಗಳನ್ನು ನುಚ್ಚುನೂರು ಮಾಡಿವೆ. ಬಡತನ, ಹಸಿವು, ನಿರುದ್ಯೋಗದಂತಹ ಸಮಸ್ಯೆಗಳು ಹೆಮ್ಮರವಾಗಿ ಬೆಳೆದಿವೆ. ಜನರ ಸಂಕಷ್ಟಗಳು ಕಡಿಮೆಯಾಗುವ ಬದಲು ಮತ್ತಷ್ಟೂ ಹೆಚ್ಚುತ್ತಿವೆ.

ಭಗತ್‌ಸಿಂಗ್ ಇಂದಿನ ಯುವ ಭಾರತಕ್ಕೆ ಆದರ್ಶವಾಗಬೇಕಿತ್ತು. ಆದರೆ ಇಂದಿನ ಪೀಳಿಗೆಗೆ ಸಿಗದ ಹಾಗೆ ಇತಿಹಾಸದ ಪಠ್ಯಗಳಿಂದ ಅವರನ್ನು ದೂರ ಇಡಲಾಯಿತು. ಅವರ ಆದರ್ಶ, ಕನಸು, ಬರಹ, ಅವರ ಮಾತು ಯಾವುದೂ ಹೊರ ಬರಲಾರದಂತೆ ತಡೆಯಲಾಗಿದೆ. ನೇಣುಗಂಬಕ್ಕೆ ಏರುವ ತನ್ನ 23ನೇ ವಯಸ್ಸಿಗೆ ಅಸಾಧಾರಣ ತಿಳುವಳಿಕೆ ಹೊಂದಿದ್ದ ಭಗತ್‌ಸಿಂಗ್ ಬ್ರಿಟೀಷರ ವಿರುದ್ಧದ ತನ್ನ ಕಾರ್ಯಚರಣೆ ಮತ್ತು ವಿಚಾರದ ಮೂಲಕ ದೇಶದ ಅಸಂಖ್ಯಾತ ಯುವಜನರು ಸ್ವಾತಂತ್ರ್ಯ ಚಳುವಳಿಗೆ ಇಳಿಯಲು ಪ್ರೇರೇಪಣೆಯಾದವರು. ಅವರ ಕ್ರಾಂತಿಕಾರಿ ಹೋರಾಟ ಬ್ರಿಟೀಷರಲ್ಲಿ ನಡುಕ ಹುಟ್ಟಿಸಿತ್ತು. ಹೀಗಿದ್ದೂ ಭಗತ್‌ಸಿಂಗ್‌ರನ್ನು ಒಬ್ಬ ಸಾಧಾರಣ ಸೈನಿಕನ ಸ್ಥಾನಕ್ಕೆ ನಿಲ್ಲಿಸಲಾಗಿದೆ. ಬ್ರಿಟೀಷರಿಗೆ 'ತಪ್ಪೊಪ್ಪಿಗೆ ಪತ್ರ' ಬರೆದುಕೊಟ್ಟವರು ಈ ದೇಶದ ಪ್ರಧಾನಿಯಾದರು, ಇನ್ನೊಬ್ಬರ ಫೋ–ಟೊ ಪಾರ್ಲಿಮೆಂಟ್ ಹೌಸಿನಲ್ಲಿ ರಾರಾಜಿಸುತ್ತಿದೆ, ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಅಮೂಲ್ಯವಾದ ಪ್ರಾಣಗಳನ್ನೇ ಬಲಿಕೊಟ್ಟರೂ, ಕನಿಷ್ಟ ಅವರಿಗೆ ಸಲ್ಲಬೇಕಾದ ಸರ್ಕಾರಿ ಗೌರವವೂ ಸಲ್ಲುತ್ತಿಲ್ಲ. ಇದು ದುರಂತವೇ ಹೌದು.

ಉದ್ದೇಶಪೂರ್ವಕವಾಗಿಯೇ ಇತಿಹಾಸದ ಪಠ್ಯಗಳಿಂದ ಭಗತ್‌ಸಿಂಗ್‌ರನ್ನು ನಮ್ಮ ಕಂದು ದೊರೆಗಳು ನಮ್ಮಿಂದ ದೂರ ಮಾಡಿರಬಹುದು, ಇತಿಹಾಸದಿಂದ ದೂರ ಮಾಡಲು ಸಾಧ್ಯವಿಲ್ಲ. ದೇಶಕ್ಕಾಗಿ ತಮ್ಮ ಪ್ರಾಣಗಳನ್ನೇ ಬಲಿಕೊಟ್ಟು ಹುತಾತ್ಮರಾದ ಅಪ್ರತಿಮ ದೇಶಪ್ರೇಮಿ ಭಗತ್‌ಸಿಂಗ್ ಮತ್ತು ಆತನ ಸಹಚರರ ತ್ಯಾಗ–ಬಲಿದಾನದ ಸಾಹಸಗಾಥೆಯನ್ನು ನೆನೆಯೋಣ, ಹಾಗೆ ನೆನೆಯುವಾಗ ಹುತಾತ್ಮರ ದಿನದಂದು ಸಂಜೆ ಕ್ಯಾಂಡಲ್ ಹಿಡಿದು ಮೌನಾಚರಣೆ ಮಾಡುವುದರಿಂದ ಪ್ರಯೋಜನವಿಲ್ಲ. ಭಗತ್‌ಸಿಂಗ್ ಅವರನ್ನು ಒಂದು ಸಂಕೇತವಾಗಿ ಕಾಣುತ್ತಾ, ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಆ ಹಾದಿಯಲ್ಲಿ ನಡೆಯಲು ಪ್ರಯತ್ನಿಸುವುದೇ ನಾವು ಹುತಾತ್ಮರಿಗೆ ಸಲ್ಲಿಸಬಹುದಾದ ಗೌರವ.

ಭಗತ್‌ಸಿಂಗ್, ರಾಜಗುರು, ಸುಖದೇವ್ ಅಮರ್ ರಹೇ.... ●

ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ.... ಪುಟ 5 ರಿಂದ

ಭಾಷೆಯಲ್ಲಿ ಬರೆಯಲು ಅವಕಾಶ ನೀಡಬೇಕು ಎಂದು ಪ್ರತಿಭಟನೆಯಲ್ಲಿ ಆಗ್ರಹಿಸಲಾಯಿತು..

ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಗುಣ ಮಟ್ಟದ ಆಹಾರ ಸಿಗದ ಕಾರಣ ನಾನಾ ರೋಗಗಳಿಗೆ ತುತ್ತಾಗುತ್ತಿದ್ದು, ಅಧ್ಯಯನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಒಬ್ಬ ವಾರ್ಡನ್ 4–5 ಹಾಸ್ಟಲ್‌ಗಳ ಜವಾಬ್ದಾರಿ ಹೊರುವಂತಾಗಿದೆ. ಎಷ್ಟೋ ಹಾಸ್ಟಲ್‌ಗಳಿಗೆ ಸ್ವಂತ ಕಟ್ಟಡವಿಲ್ಲದೆ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಈ ಕಾರಣಗಳಿಂದಾಗಿ ಎಷ್ಟೋ ವಿದ್ಯಾರ್ಥಿಗಳು ಹಾಸ್ಟಲ್ ತೊರೆಯುವಂತಾಗಿದೆ. 3500 ರೂ ಆಹಾರ ಭತ್ಯೆ ನೀಡಬೇಕು. ವಿದ್ಯಾರ್ಥಿಗಳ ಅಗತ್ಯಕ್ಕೆ ತಕ್ಕಂತೆ ಹಾಸ್ಟಲ್ ನಿರ್ಮಾಣ, ವಾರ್ಡನ್ ನೇಮಕ, ಸ್ವಂತ ಕಟ್ಟಡ ಕಟ್ಟಲು ಈ ಬಜೆಟ್‌ನಲ್ಲಿ ಜಾರಿ ಮಾಡಿಬೇಕು.

ಹಿಂದಿನ ಬಿಜೆಪಿ ರಾಜ್ಯ ಸರಕಾರ ಭಾರತೀಯ ಪರಂಪರೆಯೆಂದು ಜಾತಿ ವ್ಯವಸ್ಥೆ ಸಮರ್ಥಿಸಿಕೊಳ್ಳುವ ವೈದಿಕ ವ್ಯವಸ್ಥೆಯನ್ನು ವೈಭವೀಕರಿಸುವ, ಧಾರ್ಮಿಕ ದ್ವೇಷ ಭಾವನೆ ಬಿತ್ತುವ ಸಂಘಪರಿವಾರದ ಅಜೆಂಡಾಗಳನ್ನು ಪಠ್ಯ ಪುಸ್ತಕಗಳಲ್ಲಿ ಸೇರಿಸಿದೆ. ಅವುಗಳನ್ನು ತೆಗೆದು ಹಾಕಿ ಸಂವಿಧಾನದ ಆಶಯದಂತೆ ವೈಜ್ಞಾನಿಕ, ಪ್ರಗತಿಪರ ಹಾಗೂ ಉದ್ಯೋಗಾಧಾರಿತ ಶಿಕ್ಷಣವನ್ನು ನೀಡಲು ರಾಜ್ಯ ಸರಕಾರ ಸರಕಾರ ಮುಂದಾಗಬೇಕೆಂದು ಒತ್ತಾಯಿಸಲಾಗಿದೆ.

ಹಾವೇರಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ಕಾರ್ಯದರ್ಶಿ ಸುಭಾಸ ಎಂ. ಮುಖಂಡರಾದ ವಿಜಯಕುಮಾರ ಶಿಡ್ಲಣ್ಣವರ, ಚಂದ್ರ ಶಂಕ್ರಪ್ಪನವರ, ಮಂಜುನಾಥ ಕಡ್ಲಿ, ರಾಜೇಶ, ವಿಜಯ, ಪುಟ್ಟರಾಜ ಮಡಿವಾಳ, ಗುರುರಾಜ, ಶರಣ, ಪ್ರಕಾಶ, ಪ್ರದೀಪ ಬಿ, ಮಹಾಂತೇಶ, ಮೌನೇಶ, ನಾಗರಾಜ ಹಾಗೂ ಮುಂತಾದವರಿದ್ದರು.

ಬಳ್ಳಾರಿ ಜಿಲ್ಲೆ ಹೊಸಪೇಟೆಯಲ್ಲಿ ಅಧ್ಯಕ್ಷರಾದ ಪಂಪಾನಂದಾ, ಕಾರ್ಯದರ್ಶಿ ವಸಂತ ಕಲಾಲ, ಸದಸ್ಯರಾದ ಶಿವಕುಮಾರ್, ಸದ್ದಾಂ ಹುಸೇನ, ನಾಗರಾಜ ಭಾಗವಹಿಸಿದ್ದರು.

ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಅ ಧ್ಯಕ್ಷರಾದ ಮಂಜುನಾಥ ಡಗ್ಗಿ, ಕಾರ್ಯದರ್ಶಿ ಗ್ಯಾನೇಶ ಕಡಗದ ಹಾಗೂ ಬೆಂಗಳೂರು, ಮಂಗಳೂರು, ರಾಯಚೂರು, ಕೋಲಾರ, ಹುಣಸೂರು, ಹಲವು ಕಡೆಗಳಲ್ಲಿ ಪ್ರತಿಭಟನೆ ನಡೆಸಿ ತಹಶಿಲ್ದಾರ್ ಮೂಲಕ ಮನವಿ ಸಲ್ಲಿಸಿದರು. ●

ಕರ್ನಾಟಕ ವಲಸೆ ಕಾರ್ಮಿಕರ ಕಲ್ಯಾಣ ಕಾಯ್ದೆ ರೂಪಿಸಲು ರಾಜ್ಯ ಮಟ್ಟದ ಪ್ರಥಮ ಸಮಾವೇಶದ ಆಗ್ರಹ

ನಿತ್ಯಾನಂದಸ್ವಾಮಿ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ರಾಜ್ಯದಲ್ಲಿ ಕೃಷಿ ಕೂಲಿಕಾರರನ್ನು ಸಂಘಟಿಸುತ್ತಾ ಅವರ ಬದುಕಿನ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಶ್ರಮಿಸುತ್ತಿರುವ ಏಕೈಕ ಸಂಘಟನೆಯಾಗಿದೆ. ಕರ್ನಾಟಕದಲ್ಲಿ ಸರಿಸುಮಾರು ಒಂದು ಕೋಟಿಯಷ್ಟು ಕೃಷಿ ಕೂಲಿಕಾರರು ಇದ್ದಾರೆ. ಗ್ರಾಮೀಣ ಪ್ರದೇಶದ ರೈತರ ಭೂಮಿಯಲ್ಲಿನ ಕೆಲಸವನ್ನು ಇವರು ಅವಲಂಭಿಸಿರುತ್ತಾರೆ.

ಕಳೆದ ಇಪ್ಪತ್ತೈದು ವರ್ಷಗಳಿಂದ ದೇಶದಲ್ಲಿ ಜಾರಿಗೆ ತರಲಾಗಿರುವ ಮತ್ತು ಇಂದಿಗೂ ರಭಸದಿಂದ ಜಾರಿಗೊಳಿಸಲಾಗುತ್ತಿರುವ ಉದಾರೀಕರಣ ಧೋರಣೆಗಳಿಂದಾಗಿ ಕೃಷಿ ಕ್ಷೇತ್ರ ತೀವ್ರ ಬಿಕ್ಕಟ್ಟಿಗೆ ಒಳಗಾಗಿದ್ದು ರೈತರು ಭೂಮಿ ಕಳೆದುಕೊಂಡು ಕೂಲಿಕಾರರಾಗುತ್ತಿದ್ದಾರೆ. ಹೀಗಾಗಿ ಕೂಲಿಕಾರರ ಸಂಖ್ಯೆ ಹೆಚ್ಚಾಗುತ್ತಿದೆ.

ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗದಿರುವುದರಿಂದ ರೈತರು ಬೇಸಾಯ ಮಾಡುವುದನ್ನು ಕೈಬಿಡುತ್ತಿದ್ದಾರೆ. ಶ್ರೀಮಂತ ರೈತರು ಕೃಷಿ ಕೆಲಸಗಳಿಗೆ ಹೆಚ್ಚೆಚ್ಚು ಯಂತ್ರಗಳನ್ನು ಬಳಸುತ್ತಿದ್ದಾರೆ. ಹೀಗಾಗಿ ಗ್ರಾಮೀಣ ಕೂಲಿಕಾರರಿಗೆ ಕೃಷಿ ರಂಗದಲ್ಲಿ ಕೈತುಂಬ ಕೆಲಸ ಸಿಗದಂತಾಗುತ್ತಿದೆ. ಇದರ ಪರಿಣಾಮವಾಗಿ ಅವರು ಹಮಾಲಿ ಕೆಲಸ, ಇಟ್ಟಿಗೆ ತಯಾರಿಸುವುದು, ಕಟ್ಟಡ ನಿರ್ಮಾಣ ಮುಂತಾದ ಕೃಷಿಯೇತರ ಕೆಲಸಗಳಲ್ಲಿ ತೆ-ೂಡಗುತ್ತಿದ್ದಾರೆ ಅಥವ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ. ಕೂಲಿಕಾರರು ಕೆಲಸವನ್ನು ಅರಸಿ ಜಿಲ್ಲೆಯಿಂದ ಜಿಲ್ಲೆಗೂ, ರಾಜ್ಯದಿಂದ ರಾಜ್ಯಕ್ಕೂ ವಲಸೆ ಹೋಗುತ್ತಾರೆ

ಹೊಟ್ಟೆಪಾಡಿಗಾಗಿ ನಗರ ಪ್ರದೇಶಗಳಿಗೆ ವಲಸೆ ಬರುವ ಕೂಲಿಕಾರರು ನಾನಾ ರೀತಿಯ ಸಂಕಷ್ಟಗಳಿಗೆ ಬಲಿಯಾಗುತ್ತಿರುತ್ತಾರೆ. ಕೊಳಚೆ ಪ್ರದೇಶಗಳಲ್ಲಿ, ಅತ್ಯಂತ ಅನಾರೋಗ್ಯಕರ ಪರಿಸರದಲ್ಲಿ ವಾಸಮಾಡುತ್ತಿರುತ್ತಾರೆ. ಇವರಿಗೆ ಯಾವುದೇ ಕಾರ್ಮಿಕ ಕಾನೂನುಗಳ ರಕ್ಷಣೆ ಇರುವುದಿಲ್ಲ. ಲೇಬರ್ ಕಂಟ್ರಾಕ್ಟರುಗಳು ಇವರ ಅಸಹಾಯಕತೆಯ ಲಾಭ ಪಡೆದು ಕಡಿಮೆ ಕೂಲಿ ಕೊಟ್ಟು ದುಡಿಸುತ್ತಾರೆ. ಕಾಯಂ ಕೆಲಸ ಸಿಗಬಹುದೆಂಬ ಆಸೆಯಿಂದ ಬೆಂಗಳೂರಿನಂತಹ ನಗರ ಪ್ರದೇಶಗಳಿಗೆ ಬರುವ ಈ ಅಮಾಯಕರು ಅನೇಕ ಸಲ ರಸ್ತೆ ಅಪಘಾತ, ರೈಲು ಅಪಘಾತ, ಬೆಂಕಿ ಅನಾಹುತ, ವಿದ್ಯುತ್ ಅನಾಹುತ, ಮಣ್ಣು ಕುಸಿತ, ಕಟ್ಟಡ ಕುಸಿತದಂತಹ ಅಪಘಾತಗಳಿಗೆ ಬಲಿಯಾಗಿ ಸಾವನ್ನಪ್ಪಿದಾಗ ಅವರ ನೆರವಿಗೆ ಬರುವವರು ಯಾರೂ ಇರುವುದಿಲ್ಲ. ಶಾಲೆಗೆ ಹೋಗುವ ವಯಸ್ಸಿನ ಇವರ ಮಕ್ಕಳು ಬೀದಿ ಮಕ್ಕಳಾಗಿ ಬೆಳೆಯುತ್ತವೆ. ಬಾಲ ಕರ್ಮಿಕರಾಗಿ ದುಡಿಯುತ್ತಿರುತ್ತವೆ. ಕ್ರಿಮಿನಲ್ ಮಾಫಿಯಾಗಳ ನಿರಂತರ ಬೆದರಿಕೆ, ಮನೆಗಳನ್ನು ಧ್ವಂಸ ಮಾಡುವ ಆತಂಕಕ್ಕೆ ಒಳಗಾಗಿರುತ್ತಾರೆ.

ರಾಜ್ಯದಲ್ಲಿ ಮೇಲಿಂದ ಮೇಲೆ ತಲೆದೋರುತ್ತಿರುವ ಬರಗಾಲವೂ ಕೂಲಿಕಾರರ ವಲಸೆ ಸಮಸ್ಯೆಯನ್ನು ಉಲ್ಬಣಗೊಳಿಸುತ್ತದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಜಾ-ರಿಯಾಗದೆ ಇರುವುದು ಸಹ ವಲಸೆ ಸಮಸ್ಯೆಯನ್ನು ವ್ಯಾಪಕಗೊಳಿಸುತ್ತಿದೆ. ವಲಸೆ ಕಾರ್ಮಿಕರು ಪ್ರತಿಯೊಂದಕ್ಕೂ ಮಧ್ಯವರ್ತಿಗಳನ್ನೇ ಅವಲಂಭಿಸಿರುತ್ತಾರೆ. ಅವರನ್ನು ಕಠಿಣವಾದ ಕೆಲಸಗಳಿಗೆ ಒಳಪಡಿಸುತ್ತಾರೆ ಮಾತ್ರವಲ್ಲ, ಹಗಲೂ ರಾತ್ರಿ ದುಡಿಸುತ್ತಾರೆ. ಕೂಲಿ ಲೆಕ್ಕಮಾಡುವಾಗ, ಕೂಲಿ ಸಂದಾಯ ಮಡುವಾಗ ಮೋಸ ಮಾಡುತ್ತಾರೆ. ಅವಾಚ್ಯ ಶಬ್ದಗಳಿಂದ ಬೈಯುತ್ತಾ-ರೆ, ದೈಹಿಕ ದೌರ್ಜನ್ಯಗಳಿಗೂ ಒಳಪಡಿಸುತ್ತಾರೆ. ಮನೆಗೆಲಸ, ಕಟ್ಟಡ ನಿರ್ಮಾಣದಂತಹ ಕೆಲಸಗಳನ್ನು ಮಾಡುತ್ತಿರುವ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಲೈಂಗಿಕ ದೌರ್ಜನ್ಯಗಳಿಗೂ ಬಲಿಯಾಗುತ್ತಿದ್ದಾರೆ.

ತಾವು ವಲಸೆ ಕಾರ್ಮಿಕರೆಂದು ಸಾಬೀತುಪಡಿಸುವೂದು ಸಹ ಒಂದು ಸಮಸ್ಯೆಯಾಗಿ ಅವರನ್ನು ಕಾಡುತ್ತದೆ. ಅವರ ಬಳಿ ಮತ ಚೀಟಿಯಾಗಲಿ, ಗುರುತಿನ ಕಾರ್ಡಾಗಲಿ ಸಹ ಇರುವುದಿಲ್ಲ. ಕೆಲವೊಬ್ಬರ ಬಳಿ ಜನನ ದೃಢೀಕರಣ ಪತ್ರವಾಗಲಿ, ರೇಷನ್ ಕಾರ್ಡ್ ಆಗಲಿ ಇರುವುದಿಲ್ಲ. ಹೀಗಾಗಿ ವಲಸೆ ಕಾರ್ಮಿಕರು ನಿರಂತರವಾಗಿ ಪೊಲೀಸ್ ಮತ್ತು ಇತರ ಕಿರುಕುಳಕ್ಕೆ ಒಳಗಾಗುತ್ತಿರುತ್ತಾರೆ.

ವಲಸೆ ಕಾರ್ಮಿಕರು ತೀವ್ರವಾದ ವಸತಿ ಸಮಸ್ಯೆಯನ್ನು ಎದುರಿಸುತ್ತಿರುತ್ತಾರೆ. ಅವರಲ್ಲಿ ಬಹಳಷ್ಟು ಜನ ತಾತ್ಕಾಲಿಕ ಶೆಡ್ಡುಗಳಲ್ಲಿ, ಕೊಳಚೆ ಪ್ರದೇಶಗಳಲ್ಲಿ, ಗಟಾರುಗಳ ಪಕ್ಕದಲ್ಲಿ, ರಸ್ತೆ ಬದಿಗಳಲ್ಲಿ, ಸ್ಮಶಾನಗಳಲ್ಲಿ ಸಹ ವಾಸ ಮಾಡುತ್ತಿದ್ದಾರೆ. ದುಬಾರಿ ಬಾಡಿಗೆ ಕೊಟ್ಟು ಬಾಡಿಗೆ ಮನೆಗಳಲ್ಲಿ ವಾಸ ಮಾಡಲು ಅವರಿಗೆ ಸಾಧ್ಯವಾಗುವುದಿಲ್ಲ. ಗುತ್ತಿಗೆದಾರರಾಗಲಿ, ಮಹಾನಗರ ಪಾಲಿಕೆಯ ಆಡಳಿತಗಾರರಾಗಲಿ ಇವರಿಗೆ ವಾಸಕ್ಕೆ ಮನೆ, ಕುಡಿಯುವ ಶುದ್ಧ ನೀರು, ವಿದ್ಯುತ್ ಸಂಪರ್ಕ, ಇಂಧನ ಸರಬರಾಜು, ಮುಂತಾದ ಮೂಲಭೂತ ಆವಶ್ಯಕತೆಗಳನ್ನು ಒಸಗಿಸುವ ಆಸಕ್ತಿಯನ್ನು ತೋರುವುದಿಲ್ಲ.

ವಲಸೆ ಕಾರ್ಮಿಕರಿಗೆ ತಮ್ಮ ಉಳಿತಾಯದ ಹಣವನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವುದು ಸಹ ಒಂದು ಸಮಸ್ಯೆಯಾಗಿದೆ. ಸುರಕ್ಷಿತವಲ್ಲದ ತಾತ್ಕಾಲಿಕ ಮನೆಗಳಲ್ಲಿ ಸುಲಭವಾಗಿ ಕಳವುಗಳಾಗುತ್ತವೆ. ಕೆಲವೊಮ್ಮೆ ಇವರ ಗುಡಿಸಲುಗಳು ಬೆಂಕಿಗೆ ಆಹುತಿಯಾಗಿ ಇವರು ನಷ್ಟವನ್ನು ಅನುಭವಿಸುತ್ತಿರುತ್ತಾರೆ. ಗುತ್ತಿಗೆದಾರರಲ್ಲೇ ಉಳಿಸಿಕೊಂಡ ಕೂಲಿಯ ಹಣ ಸರಿಯಾಗಿ ವಾಪಸ್ ಸಿಗುವುದಿಲ್ಲ. ನಗರವಾಸಿಗಳು ಇವರನ್ನು ಸರಿಸುಮಾರು ಭಿಕ್ಷುಕರಂತೆ ಕಾಣುತ್ತಾರೆ. ತಮ್ಮ ಮನೆಗಳಲ್ಲಿನ ಕಸವನ್ನು ಇವರು ವಾಸವಿರುವ ಸ್ಥಳದಲ್ಲೇ ತಂದು ಚೆಲ್ಲುತ್ತಾರೆ. ನಗರದಲ್ಲಿ ಇವರಿಗೆ ರೇಷನ್ ಸಿಗುವುದಿಲ್ಲ. ತಮ್ಮ ಊರುಗಳಿಂದ ದವಸಧಾನ್ಯಗಳನ್ನು ಖರೀದಿ ಮಾಡಿಕೊಂಡು ತಂದು ಬಳಕೆಮಾಡುತ್ತಾರೆ. ಅಥವ ಅಂಗಡಿಗಳಲ್ಲಿ ದೊರೆಯುವ ಪುಡಿ ಅಕ್ಕಿಯಂತಹ ಆಗ್ಗದ ಧಾನ್ಯಗಳನ್ನು ಬಳಸುತ್ತಾರೆ.

ವಲಸೆ ಕಾರ್ಮಿಕರ ಹಿತರಕ್ಷಣೆಗಾಗಲಿ, ಅವರ ಕಲ್ಯಾಣಕ್ಕಾಗಲಿ ಯಾವುದೇ ಕಾನೂನುಗಳಿಲ್ಲ. ಅವರಿಗೆ ಅನ್ವಯವಾಗುವ ಕಾರ್ಮಿಕ ಕಾನೂನುಗಳು ಕಟ್ಟು ನಿಟ್ಟಾಗಿ ಜಾರಿಗೆ ತರುವ ವ್ಯವಸ್ಥೆ ಇಲ್ಲ. ಆದ್ದ-ರಿಂದ ಅವರು ಒಂದು ಯಾತನಾಮಯ ಜೀವನ ನಡೆಸುತ್ತಿರುತ್ತಾರೆ. ವಲಸೆ ಕಾರ್ಮಿಕರ ರಾಜ್ಯ ಮಟ್ಟದ ಈ ಪ್ರಥಮ ಸಮಾವೇಶವು ರಾಜ್ಯದಲ್ಲಿ ಹಾಗೂ ಮುಖ್ಯವಾಗಿ ಬೆಂಗಳೂರು ಮಹಾನಗರದಲ್ಲಿ ದುಡಿಯುತ್ತಿರುವ ವಲಸೆ ಕಾರ್ಮಿಕರ ಚಿಂತಾಜನಕ ಪರಿಸ್ಥಿತಿಯ ಬಗ್ಗೆ ತೀವ್ರ ಆತಂಕವನ್ನು ವ್ಯಕ್ತಪಡಿಸುತ್ತದೆ ಮತ್ತು ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತದೆ.

ಬೇಡಿಕೆಗಳು :

1. ಅಂತರ-ರಾಜ್ಯ ವಲಸೆ ಕಾರ್ಮಿಕರ(ಉದ್ಯೋಗ ನಿಯಂತ್ರಣ ಮತ್ತು ಸೇವಾ ಪರಿಸ್ಥಿತಿ) ಕಾಯ್ದೆ 1979ಅನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ ಸಮಕಾಲೀನಗೊಳಿಸಬೇಕೆಂದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು.
2. ರಾಜ್ಯದಲ್ಲಿ ಒಂದು ಸಮಗ್ರವಾದ ವಲಸೆ ಕಾರ್ಮಿಕರ ಕಲ್ಯಾಣ ಮಸೂದೆಯನ್ನು ರಚಿಸಿ, ಅದನ್ನು ಕಾಯದೆಯಾಗಿ ಪಾಸ್ ಮಾಡಿ ಜಾರಿಗೊಳಿಸಬೇಕು.
3. ವಲಸೆ ಕಾರ್ಮಿಕರಿಗೆ ಅನ್ವಯವಾಗುವ ಕಾರ್ಮಿಕ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.
4. ನಗರದಲ್ಲಿ ವಲಸೆ ಕಾರ್ಮಿಕರಿಗೆ ಆರೋಗ್ಯಕರ ಪರಿಸರದಲ್ಲಿ ಕುಡಿಯುವ ಶುದ್ಧನೀರು, ವಿದ್ಯುತ್ ಮುಂತಾದ ಕನಿಷ್ಠ ಸೌಲಭ್ಯ ಇರುವ ತಾತ್ಕಾಲಿಕ ಮನೆಗಳನ್ನು ಉಚಿತವಗಿ ಒದಗಿಸಬೇಕು. ಶಾಶ್ವತವಾಗಿ ಇಲ್ಲೇ ವಾಸ ಇರಲು ಬಯಸುವ ಕುಟುಂಬಗಳಿಗೆ ಶಾಶ್ವತ ಮನೆಗಳನ್ನು ಒದಗಿಸಬೇಕು.
5. ಎಲ್ಲ ವಲಸೆ ಕಾರ್ಮಿಕರಿಗೆ ಗುರುತಿನ ಚೀಟಿಗಳನ್ನು ಒದಗಿಸಬೇಕು.
6. ವಲಸೆ ಕಾರ್ಮಿಕ ಕುಟುಂಬಗಳಿಗೆ ಬಿಪಿಎಲ್ ರೇಷನ್ ಕಾರ್ಡ್ ವಿತರಿಸಿ ಸರಿಯಾಗಿ ರೇಷನ್ ವಿತರಣೆ ಮಾಡಬೇಕು.
7. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತಂದು ಗ್ರಾಮೀಣಬ ಬಡವರು ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಡೆಯಬೇಕು.
8. ನಗರ ಪ್ರದೇಶಗಳಿಗೂ ಅನ್ವಯವಾಗುವಂತಹ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿ ಮಾಡಬೇಕು.
9. ವಲಸೆ ಬಂದ ಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಪಡೆಯಲು ವ್ಯವಸ್ಥೆ ಮಾಡಬೇಕು.
10. ವಲಸೆ ಕಾರ್ಮಿಕ ಕುಟುಂಬಗಳಿಗೆ ಇ.ಎಸ್.ಐ ಸೌಲಭ್ಯವನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿ ವೈಧ್ಯಕೀಯ ಸೌಲಭ್ಯ ಒದಗಿಸಬೇಕು.
11. ವಲಸೆ ಕಾರ್ಮಿಕರಿಗೂ ಭವಿಷ್ಯ ನಿಧಿ ಸೌಕರ್ಯವನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು.

ವಲಸೆ ಕೂಲಿಕಾರರ ರಾಜ್ಯ ಪ್ರಥಮ ಸಮಾವೇಶವನ್ನು ವಲಸೆ ಕೃಷಿ ಕೂಲಿಕಾರ ಮಹಿಳೆಯರಾದ ಮಲಕಮ್ಮ, ಮಂಜಮ್ಮ, ಹುಲುಗಮ್ಮರವರು ಗಿಡಕ್ಕೆ ನೀರು ಹಾಕುವುದರ ಮೂಲಕ ಉದ್ಘಾಟಿಸಿದರು. ಮುಖ್ಯ ಅಥಿತಿಗಳಾದ ಡಾ. ವಿಶ್ವನಾಥ ಕಾರ್ಮಿಕ ಆಯುಕ್ತರು, ತಿರುವಾನ್ಕರಸು ಅಧ್ಯಕ್ಷರು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ, ಕೆ. ಪ್ರಕಾಶ್ ಸಿಐಟಿಯು ಜಿಲ್ಲಾ ಮುಖಂಡರು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನಿತ್ಯಾನಂದಸ್ವಾಮಿ, ಜಿ.ಎನ್. ನಾಗರಾಜ್, ಚಂದ್ರಪ್ಪ ಹೊಸ್ಕೇರಾ ಮುಂತಾದವರು ಮಾತನಾಡಿದರು.







ಪುಟ 7 ರಿಂದ

'ಆಧಾರ್' ಮ್ಯಾಜಿಕ್

ಇದರಿಂದಾಗಿ ಅಡುಗೆ ಅನಿಲ ಸಿಲಿಂಡರುಗಳ ಹಂಚಿಕೆಯಲ್ಲಿ ಆಗುತ್ತಿದ್ದ ಸೋರಿಕೆಯನ್ನು ತಡೆಯಲು ಸಾಧ್ಯವಾಗಿದೆ, ಇದರಿಂದ ಸರಕಾರಕ್ಕೆ 12,700 ಕೋಟಿ ರೂ. ಉಳಿತಾಯವಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಕರ್ನಾಟಕದ ಉದಾಹರಣೆಯನ್ನೇ ತಗೊಂಡಾಗ, ಇದು ಸಾಧ್ಯವಾದದ್ದು ಸಿಲಿಂಡರ್ ಹಂಚಿಕೆಗೂ ವಿದ್ಯುತ್ ಬಿಲ್‌ಗಳಿಗೂ ಸಂಪರ್ಕ ಕಲ್ಪಿಸಿದ್ದರಿಂದ ಎಂಬುದು ಈಗ ಸ್ಪಷ್ಟವಾಗಿದೆ. ಇದೇ ರೀತಿ ಬೇರೆ ವಿಷಯಗಳಲ್ಲೂ ಸೋರಿಕೆಯನ್ನು ತಡೆಯಲು ಬೇರೆ ವಿಧಾನಗಳೂ ಇವೆ ಎಂಬುದೂ ಸ್ಪಷ್ಟ.

ನಿಜವಾದ ಉದ್ದೇಶ

'ಆಧಾರ್'ನ ನಿಜವಾದ ಉದ್ದೇಶ ಸೋರಿಕೆಯನ್ನು ತಡೆಯುವುದಲ್ಲ, ಅಂತಹ ಬಡವರ ಪರವಾದ, ಕಲ್ಯಾಣ ಕ್ರಮಗಳನ್ನು ಅವರಿಗೆ ಒದಗಿಸಬೇಕೆಂಬ ಕಣ್ಣೋಟ ಇದರಲ್ಲಿ ಇಲ್ಲವೇ ಇಲ್ಲ ಎನ್ನುತ್ತಾರೆ ಟಾಟಾ ಸಾಮಾಜಿಕ ವಿಜ್ಞಾನಗಳ ಅಧ್ಯಯನ ಸಂಸ್ಥೆಯ ಪ್ರೊ. ಆರ್. ರಾಮಕುಮಾರ್. ಇದರ ನಿಜ ಉದ್ದೇಶ ಸಾಮಾಜಿಕ ವಲಯದಲ್ಲಿ ಪ್ರಭುತ್ವದ ಪಾತ್ರವನ್ನು ಸೀಮಿತಗೊಳಿಸುವ ನವ-ಉದಾರವಾದಿ ಪರಿವರ್ತನೆಯ ಒಂದು ತಾಂತ್ರಿಕ ಸಾಧನವನ್ನು ರೂಪಿಸುವುದಷ್ಟೇ ಎನ್ನುವ ಅವರು ಇದೊಂದು ಸಂವಿಧಾನಬಾಹಿರ ಕಾನೂನು ಎಂದಿದ್ದಾರೆ.

ಇದನ್ನು ಎರಡು ರೀತಿಗಳಲ್ಲಿ ಸಾಧಿಸಲಾಗುತ್ತದೆ. ಮೊದಲನೆಯದಾಗಿ, ಸಾರ್ವತ್ರಿಕ ಸೌಲಭ್ಯಗಳನ್ನು ಒದಗಿಸಬೇಕಾದ ಸರಕಾರದ ಹೊಣೆಗಾರಿಕೆಯನ್ನು ಕೆಲವೇ ವಿಭಾಗಗಳಿಗೆ ಸೀಮಿತಗೊಳಿಸುವುದು (ಗುರಿನಿರ್ದೇಶಿತ ಎಂಬ ಹೆಸರಲ್ಲಿ). ಇದನ್ನು ಈ ಮಸೂದೆಯ ಮೇಲಿನ ಚರ್ಚೆಗೆ ಉತ್ತರ ಕೊಡುತ್ತ ಹಣಕಾಸು ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ- ಸಬ್ಸಿಡಿಗಳ ಉಳಿತಾಯವಾಗುತ್ತದೆ ಎಂದು. ಇದು ಭ್ರಷ್ಟಾಚಾರವನ್ನು ತಪ್ಪಿಸುವುದಕ್ಕಿಂ ತ ಹೆಚ್ಚಾಗಿ ತಾಂತ್ರಿಕ ಕಾರಣಗಳಿಂದಾಗಿ ಹೆಚ್ಚೆಚ್ಚು ಜನರನ್ನು ಹೊರಗಿಡುವುದರಿಂದಾಗಿ.

ಎರಡನೆಯದಾಗಿ, ಈ ಸೀಮಿತ ವಿಭಾಗಗಳಿಗೂ ಸೌಲಭ್ಯ/ಸೇವೆಗಳನ್ನು ನೇರವಾಗಿ ತಲುಪಿಸದೆ ಪರೋಕ್ಷವಾಗಿ ತಲುಪಿಸುವುದು. ಇಲ್ಲಿ ಈಗಾಗಲೇ ಇರುವ ವ್ಯವಸ್ಥೆಯನ್ನು ಕಳಚಿ ಹಾಕಿ ಮಾರುಕಟ್ಟೆಯ ಮೂಲಕ ಪರೋಕ್ಷವಾಗಿ ಒದಗಿಸುವುದು.

ಇವೆರಡೂ ನವ-ಉದಾರವಾದದ ಗುರಿಗಳೇ. 'ಆಧಾರ್' ಹೀಗೆ ಜನಸಾಮಾನ್ಯರನ್ನು ಸಬಲೀಕರಿಸುವ ಉಪಕರಣವಲ್ಲ, ಸಾಮಾಜಿಕ ಸೇವೆಗಳಲ್ಲಿ ಅವರನ್ನು ಹೊರತುಗೊಳಿಸುವ ಸಾಧನ ಎನ್ನುತ್ತಾರೆ ಪ್ರೊ. ರಾಮಕುಮಾರ್.

ಇಲ್ಲಿ ನರೇಂದ್ರ ಮೋದಿಯವರ 'ಜಮ್'(ಜನಧನ-ಆಧಾರ್-ಮೊಬೈಲ್) ಯುಪಿಎ ಸರಕಾರ ತರಲು ವಿಫಲವಾದ 'ನೇರ ನಗದು ವರ್ಗಾವಣೆ'ಯ ಹೆಸರು ಬದಲಿಸಿದ ಆವೃತ್ತಿಗಳಷ್ಟೇ ಎನ್ನುತ್ತಾರೆ ಅವರು.

ಆದ್ದರಿಂದಲೇ 'ಕಾಂಗ್ರೆಸಿನವರು ಇದು ಸರ್ವರೋಗ ಪರಿಹಾರಕ ಎಂದು ಕುಣಿಯುತ್ತಾರೆ' ಎಂದ ನರೇಂದ್ರ ಮೋದಿಯವರು ಎರಡೂವರೆ ವರ್ಷಗಳ ನಂತರ ಸ್ವತಃ ಆ ಕುಣಿತದಲ್ಲಿ ಸೇರಿಕೊಂಡಿದ್ದಾರೆ. ಸುಪ್ರಿಂ ಕೋರ್ಟ್‌ನ ತರಾಟೆಯ ಬಗ್ಗೆ ಅವರಿಗೀಗ ಗೌರವ ಉಳಿದಿಲ್ಲ. ಸರಕಾರ ತನ್ನ ಹೊಣೆಗಾರಿಕೆಯನ್ನು ಮಾರುಕಟ್ಟೆಗೆ ದಾಟಿಸಬೇಕು ಎನ್ನುವ ನವ-ಉದಾರವಾದಿ ಸಾಮಾಜಿಕ ಧೋರಣೆಯಲ್ಲಿ ಆಧಾರ್ ಒಂದು ಪ್ರಮುಖ ಕೊಂಡಿ ಎಂಬುದು ಅವರಿಗೆ ಅಧಿಕಾರಕ್ಕೆ ಬಂದ ಮೇಲೆ ಮನವರಿಕೆಯಾಗಿದೆ. ಈ ಎಲ್ಲ ತಿಪ್ಪರಲಾಗಗಳು ಅದರಿಂದಲೇ ಎನ್ನುತ್ತಾರೆ ಪ್ರೊ. ರಾಮಕುಮಾರ್.

ಸತತ ಮೂರನೇ ತಿಂಗಳಲ್ಲೂ ಕೈಗಾರಿಕಾ ಉತ್ಪಾದನೆಯಲ್ಲಿ ಇಳಿಕೆ, ಮಹಾರಾಷ್ಟ್ರದಲ್ಲಿ ರೈತರ ಆತ್ಮಹತ್ಯೆಗಳಲ್ಲಿ ಏರಿಕೆ

ತಮ್ಮ ಸರಕಾರ ಆರ್ಥಿಕ ರಂಗದಲ್ಲಿ ಗಮನಾರ್ಹ ಸಾಧನೆ ಮಾಡಿದೆ ಎಂದು ಹಣಕಾಸು ಮಂತ್ರಿಗಳು ಹೇಳಿಕೊಳ್ಳುತ್ತಿರುವಾಗಲೇ ಕೈಗಾರಿಕಾ ಉತ್ಪಾದನೆ ಏರುವ ಬದಲು ಇಳಿಯುತ್ತಿದೆ ಎಂದು ಕೇಂದ್ರೀಯ ಅಂಕಿ–ಅಂಶ ಸಂಘಟನೆ(ಸಿಎಸ್‌ಒ) ಜನವರಿ ತಿಂಗಳಿಗೆ ಸಂಬಂಧಿಸಿದಂತೆ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಸಾರುತ್ತಿವೆ.

ನವಂಬರ್ 2015, ಡಿಸೆಂಬರ್ 2015ರಂತೆ ಜನವರಿ 2016ರಲ್ಲೂ ಕೈಗಾರಿಕಾ ಉತ್ಪಾದನೆ ಹಿಂದಿನ ವರ್ಷಕ್ಕೆ ಹೋಲಿಸಿದಾಗ 1.5ಶೇ. ಇಳಿಕೆ ದಾಖಲಿಸಿದೆ. ಜನವರಿ 2015ರಲ್ಲಿ ಅದು 2.8ಶೇ. ಏರಿಕೆ ದಾಖಲಿಸಿತ್ತು. ಕೈಗಾರಿಕಾ ಉತ್ಪಾದನೆಯ ಎಲ್ಲ ರಂಗಗಳಲ್ಲೂ ಈ ಇಳಿಕೆ ಕಂಡು ಬಂದಿದೆ. ಸರಕು ತಯಾರಿಕಾ ವಲಯದಲ್ಲಿ 2.8ಶೇ. ಬಂಡವಾಳ ಸರಕುಗಳ ವಲಯದಲ್ಲಿ 20.4ಶೇ. ಮತ್ತು ಬಳಕೆದಾರ ಸರಕುಗಳ ವಲಯದಲ್ಲಿ 3.1ಶೇ. ಇಳಿಕೆ ಆಗಿದೆ.

22 ಉದ್ದಿಮೆ ಗುಂಪುಗಳಲ್ಲಿ 10ರಲ್ಲಿ ಉತ್ಪಾದನೆ ಇಳಿದಿದೆ. ವಿದ್ಯುತ್ ಮೆಶಿನರಿ ಮತ್ತು ಉಕರಣಗಳ ವಿಭಾಗದಲ್ಲಿ ಅತ್ಯಂತ ಹೆಚ್ಚು (50.3ಶೇ.) ಇಳಿಕೆ ಆಗಿದೆ. ಇದು ಒಟ್ಟಾರೆ ಆರ್ಥಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ಉದ್ದಿಮೆ ವಲಯಗಳಲ್ಲಿ ಆತಂಕ ವ್ಯಕ್ತವಾಗಿದೆ.




ಬಡತನ, ಬೆಲೆಯೇರಿಕೆ, ಸಾಲಬಾಧೆ, ಬರ....ನಾನು 'ಆರ್ಟ್‌ಆಫ್ ಲಿವಿಂಗ್'ನಲ್ಲಿ ಎಕ್ಸ್‌ಪರ್ಟ್

ರೈತರ–ಪರ, ಹಳ್ಳಿ–ಪರ ಎಂಬ ವೇಷ ತೊಡಿಸಿದ್ದರೂ, ಈ ವರ್ಷದ ಬಜೆಟ್ ಕಾರ್ಪೊರೇಟ್ ವಲಯಕ್ಕೆ ತನ್ನ ಆಶೀರ್ವಾದವನ್ನು ಮುಂದುವರೆಸಿದ್ದರಿಂದ ಉತ್ಸಾಹ ತೋರಿದ್ದ ಶೇರು ಮಾರುಕಟ್ಟೆಯಲ್ಲಿ ಕೂಡ ಉತ್ಸಾಹ ಕುಂದಿದಂತೆ ಕಾಣುತ್ತಿದೆ. ಉದ್ದಿಮೆ ವಲಯಗಳು ಇನ್ನಷ್ಟು 'ಪ್ರೋತ್ಸಾಹಕ' ಕ್ರಮಗಳನ್ನು ಕೇಳಲಾರಂಭಿಸಿವೆ.

ಈ ನಡುವೆ ಮಹಾರಾಷ್ಟ್ರದ ಮರಾಠವಾಡ ಪ್ರದೇಶದ ಎಂಟು ಜಿಲ್ಲೆಗಳಲ್ಲಿ ಜನವರಿ 1 ರಿಂದ ಆತ್ಮಹತ್ಯೆಗಿಳಿದ ರೈತರ ಸಂಖ್ಯೆ 216 ಕ್ಕೇರಿದೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್(ಮಾ. 14) ವರದಿ ಮಾಡಿದೆ. ಕಳೆದ 15 ತಿಂಗಳಲ್ಲಿ ಈ ಸಂಖ್ಯೆ 1300 ತಲುಪಿದೆ. 1971ರ ನಂತರ ಅತಿ ಭೀಕರ ಬರದ ಪರಿಸ್ಥಿತಿಯನ್ನು ಪರಿಶೀಲಿಸಲು ಕಳೆದ ವಾರ ಇಡೀ ಮಹಾರಾಷ್ಟ್ರ ಸಚಿವ ಸಂಪುಟ ಈ ಪ್ರದೇಶಕ್ಕೆ ಬಂದಿದ್ದಾಗ ಆ ಒಂದೇ ವಾರದಲ್ಲಿ 22 ರೈತರ ಆತ್ಮಹತ್ಯೆಗಳು ವರದಿಯಾಗಿವೆಯಂತೆ.

ವ್ಯಂಗ್ಯಚಿತ್ರಕೃಪೆ: ಶುಭನೀಲ್, ಡೆಕ್ಕನ್ ಕ್ರಾನಿಕಲ್



ದ್ವೇಷಕಾರುವ ಭಾಷಣಗಳ ಮೇಲೆ ಕ್ರಮ ಕೈಗೊಳ್ಳಿ
-ಸುಪ್ರಿಂ ಕೋರ್ಟ್‌ಗೆ ನ್ಯಾಯವೇತ್ತರು, ವಿಜ್ಞಾನಿಗಳು ಮತ್ತು ಇತರ ಪ್ರತಿಷ್ಠಿತರ ಆಗ್ರಹ

ಈಗ ಕೇಂದ್ರ ಸರಕಾರದಲ್ಲಿರುವ ಮತ್ತು ಪ್ರಮುಖ ಸಂವಿಧಾನಿಕ ಸ್ಥಾನಗಳಲ್ಲಿರುವ ವ್ಯಕ್ತಿಗಳು ಆತಂಕಕಾರಿ ಮತ್ತು ಬೆದರಿಕೆಯ ಹೇಳಿಕೆಗಳನ್ನು ಕೊಡುತ್ತಿರುವುದನ್ನು ಗಮನಿಸಿ ಸಂವಿಧಾನಿಕ ಕ್ರಮ ಕೈಗೊಳ್ಳಬೇಕು ಎಂದು ನಿವೃತ್ತ ನ್ಯಾಯಾಧೀಶರುಗಳು, ಐಪಿಎಸ್ ಅಧಿಕಾರಿಗಳು ,ವಿಜ್ಞಾನಿಗಳು ಮತ್ತು ವ್ಯಾಪಾರಸ್ಥರು ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರು ಮತ್ತು ಇತರ ಎಲ್ಲ ನ್ಯಾಯಾಧೀಶರುಗಳಿಗೆ ಕಳಕಳಿಯ ಮನವಿ ಮಾಡಿಕೊಂಡಿದ್ದಾರೆ.

ಫೆ.26ರಂದು ಆಗ್ರಾದಲ್ಲಿ ಹೆಚ್‌ಆರ್‌ಡಿ ರಾಜ್ಯ ಮಂತ್ರಿ ರಾಮ್ ಶಂಕರ್ ಕಥೇರಿಯವರ ಹೇಳಿಕೆಯೊಂದಿಗೆ ಆರಂಬಿಸಿ, ಇದಕ್ಕೆ ಮೊದಲು ಕೇಂದ್ರ ಮಂತ್ರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಕೊಟ್ಟಿರುವ ಹೇಳಿಕೆಗಳನ್ನು ಇದರಲ್ಲಿ ಪ್ರಸ್ತಾಪಿಸಲಾಗಿದೆ.

ಇಂತಹ ಹೇಳಿಕೆಗಳು ಭಾರತವನ್ನು ಅಪಾಯದ ಅಂಚಿಗೆ ತಳ್ಳುತ್ತಿವೆ ಎಂದಿರುವ ಈ ಪ್ರತಿಷ್ಠಿತರು ಸುಪ್ರಿಂ ಕೋರ್ಟ್ ಇಂತಹ ದ್ವೇಷ ಹರಡಿಸುವ, ಅಂಚಿಗೆ ತಳ್ಳಲ್ಪಟ್ಟ ಗುಂಪುಗಳ ಮೇಲೆ ದಾಳಿ ನಡೆಸುವ ಹೇಳಿಕೆಗಳು, ವೀಡಿಯೋಗಳು ಮತ್ತಿತರ ಮಾಧ್ಯಮಗಳ ಮೇಲೆನಿಗಾ ಇಡಲು ಒಂದು ಶಾಶ್ವತ ಮತ್ತು ಪೀಠಸ್ಥ ಆಯೋಗವನ್ನು ರಚಿಸಬೇಕು ಎಂದು ಕೋರಿದ್ದಾರೆ.

ಸುಪ್ರಿಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪಿ ಬಿ ಸಾವಂತ್ ನೇತೃತ್ವದಲ್ಲಿ ಈ ಅಪೀಲಿಗೆ ಸಹಿ ಮಾಡಿದವರಲ್ಲಿ ನಿವೃತ್ತ ಡಿಜಿಪಿ ಜುಲಿಯೊ ರಿಬೆರೊ, ನ್ಯಾ. ರಾಜೆಂದರ್ ಸಾಚರ್, ನ್ಯಾ. ಹೊಸಬೆಟ್ ಸುರೇಶ್, ವಿಜ್ಞಾನಿ ಪ್ರೊ. ಪಿ.ಎಂ.ಭಾರ್ಗವ, ಹಿರಿಯ ಪತ್ರಕರ್ತ ಅನಿಲ್ ಧರ್‌ಕರ್ ಮತ್ತಿತರ ಹಲವು ನ್ಯಾಯಾಧೀಶರುಗಳು, ಹಿರಿಯ ವಕೀಲರುಗಳು, ಇತರ ಪರಿಣತರುಗಳು ಇದ್ದಾರೆ.

ಮಾರ್ಚ್4 ರಂದು ಈ ಮನವಿಯನ್ನು ಸುಪ್ರಿಂ ಕೋರ್ಟಿಗೆ ಸಲ್ಲಿಸಲಾಯಿತು. ಇಂತಹ ಒಂದು ಮನವಿಯನ್ನು ರಾಷ್ಟ್ರಪತಿಗಳಿಗೂ ಸಲ್ಲಿಸಲಾಗಿದೆ.

ಇಂತಹ ಹೇಳಿಕೆಗಳು ಭಾರತದ ನಾಗರಿಕರಲ್ಲಿ, ಅದರಲ್ಲೂ ದಲಿತರು ಮತ್ತು ಆದಿವಾಸಿಗಳಂತಹ ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳಲ್ಲಿ ಅಭದ್ರತೆಯ ಭಾವವನ್ನು ಉಂಟು ಮಾಡುತ್ತಿವೆ ಎಂದಿರುವ ಈ ಪತ್ರದೊಡನೆ ಮೇಲೆ ಹೇಳಿದ ಆಗ್ರಾದ ಫೆ.26ರ ಘಟನೆಯ ಪತ್ರಿಕಾ ವರದಿಯನ್ನು ಲಗತ್ತಿಸಲಾಗಿದೆ. ಇದನ್ನು ತಾವಾಗಿಯೇ ಗಮನಕ್ಕೆ ತಗೊಂಡು ಸುಪ್ರಿಂ ಕೋರ್ಟ್ ಕಟ್ಟುನಿಟ್ಟಾದ ನಿರ್ದೇಶನಗಳನ್ನು ಕೊಡಬೇಕೆಂದು ಪತ್ರದಲ್ಲಿ ವಿನಂತಿ ಮಾಡಲಾಗಿದೆ.

ಈ ಹಿಂದಿನ ಇತರ 8 ದ್ವೇಷಕಾರುವ ಹೇಳಿಕೆಗಳ ಸಿಡಿಯನ್ನೂ ಸಲ್ಲಿಸಲಾಗಿದೆ. ಇದರಲ್ಲಿ ವಿದೇಶಾಂಗ ರಾಜ್ಯ ಮಂತ್ರಿ ವಿ ಕೆ ಸಿಂಗ್, ಇತರ ರಾಜ್ಯಮಂತ್ರಿಗಳಾದ ಸಾಧ್ವಿ ನಿರಂಜನ ಜ್ಯೋತಿ, ಗಿರಿರಾಜ್ ಸಿಂಗ್, ಮುಖ್ತಾರ್ ಅಬ್ಬಾಸ್ ನಖ್ವಿ, ಬಿಜೆಪಿ ಎಂಪಿಗಳಾದ ಯೋಗಿ ಆದಿತ್ಯನಾಥ್ ಮತ್ತು ಸಾಕ್ಷಿ ಮಹಾರಾಜ್, ಬಿಜೆಪಿ ಅಧ್ಯಕ್ಷ ಅಮಿತ್ ಶಹಾ ಮತ್ತು ಅರೆಸ್ಸೆಸ್ ಮುಖ್ಯಸ್ಥ ಮೋಹನ ಭಾಗವತ್‌ರ ಭಾಷಣಗಳೂ ಸೇರಿವೆ.

ಜೆಎನ್‌ಯು: ದಾಳಿ ಮುಂದುವರೆಯುತ್ತಿದೆ

ಅವರ ವೀಡಿಯೋಗಳ ಮೋಸಗಳು, ಸಂಸತ್ತಿನಲ್ಲಿ ಸುಳ್ಳು ಹೇಳಿಕೆಗಳು ಬಯಲಾದರೂ ಹುಸಿ ರಾಷ್ಟ್ರೀಯವಾದದ ಅರಚಾಟಗಳು ಮುಂದುವರೆಯುತ್ತಲೇ ಇವೆ, ಜೆಎನ್‌ಯು ಮೇಲೆ ದಾಳಿಗೆ ಟೊಂಕಕಟ್ಟಿದವರ ಆಟಗಳೂ ಮುಂದುವರೆಯುತ್ತಲೇ ಇವೆ,

ಮಾರ್ಚ್ 15ರಂದು ಸಂಸದ್ ಮಾರ್ಗದಲ್ಲಿ ಬೃಹತ್ ವಿದ್ಯಾರ್ಥಿ ರ್‍ಯಾಲಿ ನಡೆಯುತ್ತಿದ್ದಾಗಲೇ ಇತ್ತ ಜೆಎನ್‌ಯು ಉಪಕುಪಲಪತಿ ನೇಮಿಸಿದ್ದ 'ಉನ್ನತ ಮಟ್ಟದ ತನಿಖಾ ಸಮಿತಿ' ಎಂಬುದು ತನ್ನ ವರದಿಯನ್ನು ಮಂಡಿಸಿದೆ. ಅದು ಕನ್ಹೈಯ ಕುಮಾರ್ ಸೇರಿದಂತೆ 21 ವಿದ್ಯಾರ್ಥಿಗಳನ್ನು ತೆಗೆದು ಹಾಕಬೇಕೆಂದು ಶಿಫಾರಸು ಮಾಡಿದೆಯಂತೆ. ಈ ವರದಿ ಮತ್ತು ವಿದ್ಯಾರ್ಥಿಗಳಿಗೆ ನೀಡಿರುವ ನೋಟೀಸುಗಳ ನಡುವಿನ ವಿರೋಧಾಭಾಸಗಳು ಜೆಎನ್‌ಯು ಆಡಳಿತದ ನಿಜವಾದ ಉದ್ದೇಶವನ್ನು ಬಯಲು ಮಾಡುವಂತಿವೆ. ಈ ತನಿಖಾ ಸಮಿತಿಯ ಆರಂಭದ ಮೂವರು ಸದಸ್ಯರಲ್ಲಿ ಇಬ್ಬರು ಬಹಿರಂಗವಾಗಿಯೇ ಆರೆಸ್ಸೆಸ್ ಒಲವಿನವರು. ಆದ್ದರಿಂದ ವಿದ್ಯಾರ್ಥಿಗಳೂ, ಅಧ್ಯಾಪಕರೂ ಇದನ್ನು ಬಹಿಷ್ಕರಿಸಿದ್ದರು. ಆದರೆ ಸಮಿತಿಯ ವರದಿಯಲಿ ವಿದ್ಯಾರ್ತಿಗಳು ಮತ್ತು ಅಧ್ಯಾಪಕರು ತಮ್ಮ ಮುಂದೆ ಹಾಜರಾಗಿಲ್ಲ ಎಂಬುದರ ಪ್ರಸ್ತಾಪವೇ ವರದಿಯಲ್ಲಿಲ್ಲ ಎನ್ನಲಾಗಿದೆ.

ಸ್ಪಷ್ಟೀಕರಣ ಕೇಳಿದ ಡೀನ್‌ಗಳು

ತನಿಖಾ ಸಮಿತಿಯ ವರದಿಯ ಬಗ್ಗೆ ವಿವಿಯ ಅಧಿಕೃತ ಹೇಳಿಕೆಯಲ್ಲಿ ಈ ವಿಷಯವನ್ನು ವಿವಿಯ ವಿವಿದ ವಿಭಾಗಗಳ ಡೀನ್‌ಗಳಿಗೆ ತಿಳಿಸಲಾಗಿದೆ ಎಂದು ಹೇಳಲಾಗಿತ್ತು. ಆದರೆ ತಮಗೆ ಯಾವ ವಿವರಗಳನ್ನೂ ಕೊಟ್ಟಿಲ್ಲ ಎಂದು ಐದು ವಿಭಾಗಗಳ ಡೀನ್‌ಗಳು ಉಪಕುಲಪತಿಗಳಿಗೆ ಪತ್ರ ಬರೆದು ಸ್ಪಷ್ಟೀಕರಣ ಕೇಳಿದ್ದಾರೆ ಎಂದು ವರದಿಯಾಗಿದೆ. ತನಿಖಾ ಸಮಿತಿಯ ವರದಿಯ ಅಂಶಗಳನ್ನು ತಿಳಿಸಲಾಗಿಲ್ಲ ಮಾತ್ರವಲ್ಲ, ಯಾರಿಗೆಲ್ಲಾ ನೋಟೀಸು ಕಳಿಸಲಾಗಿದೆ, ಅವರ ಮೇಲಿನ ಆಪಾದನೆಗಳೇನು ಎಂಬ ವಿವರಗಳನ್ನು ತಮಗೆ ಕೊಟ್ಟಿಲ್ಲ. ಇದನ್ನು ಏಕೆ ತಿಳಿಸಿಲ್ಲ ಎಂದು ಅವರು ತಮ್ಮ ಪತ್ರದಲ್ಲಿ ಸ್ಪಷ್ಟೀಕರಣ ಕೇಳಿದ್ದಾರಂತೆ.

ಮಾಧ್ಯಮಗಳಲ್ಲಿ ಮತ್ತೆ–ಮತ್ತೆ ಡೀನ್‌ಗಳ ಸಮಿತಿಯ ಬಗ್ಗೆ ವಿರೋಧಾಭಾಸಕರ ಪ್ರಸ್ತಾಪಗಳು ಬರುತ್ತಿವೆ, ನಮಗೆ ಎಲ್ಲವನ್ನೂ ತೀಲಿಸಲಾಗಿದೆ, ಅಂದರೆ ವಿವಿಯ ಕ್ರಮಗಳಿಗೆ ತಮ್ಮ ಒಪ್ಪಿಗೆ ಇದೆ ಎಂದು ಪರೋಕ್ಷವಾಗಿ ಬಿಂಬಿಸಲಾಗುತ್ತಿದೆ ಎಂದು ಈ ಪತ್ರದಲ್ಲಿ ಬೇಸರ ವ್ಯಕ್ತಪಡಿಸಲಾಗಿದೆ. ಅಂತರ್ರಾಷ್ಟ್ರೀಯ ಅಧ್ಯಯನ, ಭೌತಿಕ ವಿಜ್ಞಾನಗಳು, ಸಾಮಾಜಿಕ ವಿಜ್ಞಾನಗಳು, ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಅಧ್ಯಯನಗಳು ಮತ್ತು ಕಲೆ ಹಾಗೂ ಸೌಂದರ್ಯಶಾಸ್ತ್ರದ ವಿಭಾಗಗಳ ಡೀನ್‌ಗಳು ಉಪಕುಲಪತಿಗಳಿಗೆ ಈ ಪತ್ರ ಬರೆದಿದ್ದಾರೆ.

ತನಿಖಾ ಸಮಿತಿಯ ವರದಿ ಒಪ್ಪುವುದಿಲ್ಲ ವಿದ್ಯಾರ್ಥಿಮಂಡಳಿಯ ಪ್ರತ್ಯುತ್ತರ

21 ವಿದ್ಯಾರ್ಥಿಗಳಿಗೆ ನೀಡಿದ ಶೋಕಾಸ್ ನೋಟೀಸ್‌ಗೆ ಮಾರ್ಚ್ 18ರೊಳಗೆ ಉತ್ತರ ಕೊಡುವಂತೆ ಹೇಳಲಾಗಿತ್ತು. ಮಾರ್ಚ್ 17ರಂದು ಸಭೆ ಸೇರಿದ ಜೆಎಎನ್‌ಯು ವಿದ್ಯಾರ್ಥಿ ಸಂಘದ ವಿದ್ಯಾರ್ಥಿ ಮಂಡಳಿ ಈ ತನಿಖಾ ಸಮಿತಿಯ ವರದಿ ಒಂದು ಅನ್ಯಾಯಯುತ ಪ್ರಕ್ರಿಯೆಯಯನ್ನು ಆಧರಿಸಿದೆಯಾದ್ದರಿಂದ ಅದನ್ನು ಒಪ್ಪಲು ಸಾಧ್ಯವಿಲ್ಲ ಎಂದು ವಿವಿ ಆಡಳಿತಕ್ಕೆ ತಿಳಿಸಲು ನಿರ್ಧರಿಸಿದೆ. ಶೋಕಾಸ್ ಪಡೆದ ವಿದ್ಯಾರ್ಥಿಗಳು ನಾಮಕಾವಾಸ್ತೆ ಉತ್ತರಗಳನ್ನು ಕೊಡುತ್ತಾರೆ ಎಂದು ಹೇಳಲಾಗಿದೆ. ಅವರಿಗೆ ತನಿಖಾ ವರದಿಯನ್ನು ನೀಡಲಾಗಿಲ್ಲ, ಆಪಾದನೆಗಳನ್ನೂ ತಿಳಿಸಲಾಗಿಲ್ಲ, ಆದರೂ ತಪ್ಪಿತಸ್ಥರೆಂದು ಹೇಳಲಾಗಿದೆ, ಆದ್ದರಿಂದ ಜೆಎನ್‌ಯು ವಿದ್ಯಾರ್ಥಿ ಸಂಘ ಈ ನಿಟ್ಟಿನಲ್ಲಿ ಯಾವುದೇ ಶಿಸ್ತುಕ್ರಮ ಕೈಗೊಂಡರೆ ಅದನ್ನು ವಿರೋಧಿಸುವುದಾಗಿ ಆಡಳಿತಕ್ಕೆ ತಿಳಿಸಿದೆ.


ಈ 21 ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಸಾಮಾಜಿಕ ವಿಜ್ಞಾನಗಳ ವಿಭಾಗಕ್ಕೆ ಶೆರಿದವರು. ಈ ವಿದ್ಯಾರ್ಥಿಗಳನ್ನು ಬಹಳ ಸಮಯದಿಂದ ಬಲ್ಲೆವು, ಅವರ ವರ್ತನೆ ಆದರ್ಶಪ್ರಾಯವಾಗಿದೆ, ವರದಿಯಾಗಿರುವ ತನಿಖಾ ವರದಿಯ ಬಾಗಗಳನ್ನು ನೋಡಿದರೆ ಮಹತ್ವದ ಅಶಿಸ್ತೇನೂ ನಡೆದಂತೆ ಕಾಣುತ್ತೊಲ್ಲ ಎಮದು ಜೆಎನ್‌ಯು ಅಧ್ಯಾಪಕರೂ ವಿದ್ಯಾರ್ಥಿಗಳ ಬೆಂಬಲಕ್ಕೆ ನಿಂತಿದ್ದಾರೆ.

ಕೇಂದ್ರ ಮಂತ್ರಿಗಳು ಈಗ ಏನನ್ನುತ್ತಾರೆ?

ಜೆಎನ್‌ಯು ನಲ್ಲಿ ತಮ್ಮ ವಿಫಲ ಪ್ರಯತ್ನಗಳನ್ನು ಸಮರ್ಥಿಸಿಕೊಳ್ಳಲು ವಿವಿಧ ಕೇಂದ್ರ ಮಂತ್ರಿಗಳೂ ಸೇರಿದಂತೆ ಬಿಜೆಪಿಯ ಅತಿರಥ–ಮಹಾರಥಿಗಳು ಹಾಸ್ಯಾಸ್ಪದ ಹೇಳಿಕೆಗಳನ್ನು ನೀಡುತ್ತಿರುವುದು ಸಾಮಾನ್ಯವಾಗಿ ಬಿಟ್ಟಿದೆ. ಜೆಎಎನ್‌ಯುನಲ್ಲಿ ಅಫ್ಜಲ್ ಗುರು ಬಗ್ಗೆ ಕಾರ್ಯಕ್ರಮ ನಡೆಸಿದಂತೆ ಒಸಾಮ ಬಿನ್ ಲಾಡೆನ್ ಹುತಾತ್ಮ ಎಂದು ನಡೆಸಲು ಯಾವುದಾದರೂ ಅಮೆರಿಕನ್ ವಿಶ್ವವಿದ್ಯಾಲಯ ಬಿಡುತ್ತದೆಯೇ ಎಂದು ಅವರು ಸಂಸತ್ತಿನಲ್ಲಿ ಅಬ್ಬರಿಸಿದ್ದರು.

ಖಂಡಿತಾ ಬಿಡುತ್ತೇವೆ ಎಂದು ಅಮೆರಿಕಾದ ಒಂದು ಪ್ರಮುಖ ವಿವಿ, ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಅಧ್ಯಕ್ಷರು ಹೇಳಿದ್ದಾರೆ. "ನಾವಿಲ್ಲಿ ಅತ್ಯಂತ ಆಕ್ಷೇಪಣಾಕಾರಿ ಭಾಷಣಗಳನ್ನೂ ಸಹಿಸಿಕೊಳ್ಳುತ್ತೇವೆ. ಇದು ಒಂದು ವಿಶ್ವವಿದ್ಯಾಲಯಕ್ಕೆ ಇರುವ ಸೌಲಭ್ಯ. ಕೆಟ್ಟ ತರ್ಕಗಳಿಗೆ ನಾವು ಇನ್ನಷ್ಟು ಭಾಷಣಗಳಿಂದ ಸ್ಪಂದಿಸುತ್ತೇವೆಯೇ ಹೊರತು ಶಿಸ್ತು ಕ್ರಮಗಳಿಂದಲ್ಲ" ಎಂದು ಅವರು ಹೇಳಿರುವುದಾಗಿ ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ(ಮಾ.17).

ಆರೆಸ್ಸೆಸ್‌ನ ದರ್ಜಿ ಮಟ್ಟದ ಪಲ್ಲಟದ ಉದ್ದ-ಗಿಡ್ಡಗಳು



ವ್ಯಂಗ್ಯಚಿತ್ರ ಕೃಪೆ: ಗೋಕುಲ್, ಡೆಕ್ಕನ್ ಕ್ರಾನಿಕಲ್



ದೆಹರಾಡೂನ್‌ನಲ್ಲಿ ಬಿಜೆಪಿ ಶಾಸಕನ ನೇತೃತ್ವದಲ್ಲಿ ಪೋಲೀಸ್ ಕುದು–ರೆಯ ಕಾಲು ಮುರಿದ ಘಟನೆ ವರದಿಯಾಗಿದೆ. ಈ ಶಾಸಕನ್ನು ಪಕ್ಷದಿಂದ ಹೊರಹಾಕಬೇಕು ಎಂದು ಸ್ವತ: ಕೇಂದ್ರ ಮಂತ್ರಿಯೊಬ್ಬರು ಆಗ್ರಹಿಸಿದ್ದಾರೆ –ಸುದ್ಧಿ

ವ್ಯಂಗ್ಯಚಿತ್ರ ಕೃಪೆ: ಬಾಮುಲಾಹಿಜಾ.ಕಾಂ



ಕೆ.ಎಂ.ನಾಗರಾಜ್



ಹದಿನೇಳು ಬ್ಯಾಂಕ್‌ಗಳಿಗೆ ಪಂಗನಾಮ ಹಾಕಿ ಪರಾರಿ

ಯಾರದೋ ದುಡ್ಡು, ಮಲ್ಯ ದೌಲತ್ತು

ಪ್ರಸಿದ್ಧ ಅಂಕಣಕಾರ ಶೇಖರ್ ಗುಪ್ತಾ ಇತ್ತೀಚೆಗೆ ಬರೆದ ಒಂದು ಲೇಖನದಲ್ಲಿ 'ಸಾಲ ಭೂಪ' ವಿಜಯ ಮಲ್ಯಗೆ ದೇಶದ ಅತಿ ದೊಡ್ಡ ಬ್ಯಾಂಕಿನ (ಎಸ್‌ಬಿಐ) ಅಧ್ಯಕ್ಷರು ಯಾವ ರೀತಿಯಲ್ಲಿ 'ಜೀ ಹುಜೂರ್' ಗೌರವ ಸಮರ್ಪಣೆ ಸಲ್ಲಿಸುತ್ತಿದ್ದರು ಎಂಬ ಪ್ರಸಂಗದ ಉಲ್ಲೇಖ ಹೀಗಿದೆ:

2010ರಲ್ಲಿ, ಉನ್ನತ ತಂತ್ರಜ್ಞಾನವನ್ನು ಹೇಗೆ ತಮ್ಮ ಬ್ಯಾಂಕ್ ಅಳವಡಿಸಿಕೊಳ್ಳಲಿದೆ ಎಂಬುದನ್ನು ಸಾರಲು ಮುಂಬೈನ ಕ್ರಿಕೆಟ್ ಸ್ಟೇಡಿಯಂನಲ್ಲಿ ಎಸ್‌ಬಿಐ ಒಂದು ಲೇಸರ್ ಶೋ ಮತ್ತು ಔತಣ ಕೂಟ ಆಯೋಜಿಸಿತ್ತು. ಅಂದಿನ ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿ ಯವರಿಂದ ಹಿಡಿದು ದೇಶದ ದೊಡ್ಡ ಉದ್ಯಮಪತಿಗಳು, ಹೆಸರಾಂತ ವ್ಯಕ್ತಿಗಳು ಮತ್ತು ಮಾಧ್ಯಮ ಪ್ರತಿನಿಧಿಗಳು ಭಾಗವಹಿಸಿದ್ದರು. ಲೇಸರ್ ಶೋ ಆರಂಭವಾದ ಸ್ವಲ್ಪ ಸಮಯದ ಬಳಿಕ ಒಂದು ಮೂಲೆಯಿಂದ ಬಂದ ಸಪ್ಪಳ ಆಲಿಸಿದ ಎಸ್‌ಬಿಐ ಅಧ್ಯಕ್ಷರಾಗಿದ್ದ ಓ.ಪಿ ಭಟ್ ಲೇಸರ್ ಶೋ ನಿಲ್ಲಿಸುವಂತೆ ಸೂಚಿಸಿ ಅತ್ತ ದೌಡಾಯಿಸಿದರು. ವಿಐಪಿ ಬರುತ್ತಿದ್ದಾರೆ! ಅವರತ್ತ ಝಗಮಗಿಸುವ ಬೆಳಕು ಬೀಳುತ್ತಿತ್ತು. ಅದೆಂತಹ ದೃಶ್ಯ! ಎರಡು ಮೊಬೈಲ್ ಫೋನುಗಳನ್ನು ಹೊಳೆಯುವ ಬೆಳ್ಳಿ ತಟ್ಟೆಯಲ್ಲಿ ಹಿಡಿದ ಬಂಟನೊಬ್ಬ ವಿಐಪಿಯ ಹಿಂದೆ ಓಡುತ್ತಿದ್ದಾನೆ. ದಟ್ಟ ಬಣ್ಣದ ಸೂಟ್ ಧರಿಸಿದ ಬಂದೂಕುಧಾರಿ ರಕ್ಷಣಾ ಪಡೆ ವಿಐಪಿಯ ಸುತ್ತುವರೆದಿದೆ. ಅಲ್ಲಿದ್ದವರೆಲ್ಲಾ ಬೆರಗುಗಣ್ಣಿನಿಂದ ಆತನನ್ನು ನೋಡುತ್ತಿದ್ದಾರೆ. ಹಾಗಿತ್ತು ಮಲ್ಯ ಮೆರೆದಾಡುತ್ತಿದ್ದ ಶೈಲಿ. ಬ್ಯಾಂಕ್ ಅಧಿಕಾರಿಗಳು ಆತನಿಗೆ ಡೊಗ್ಗು ಸಲಾಮು ಹೊಡೆಯುತ್ತಿದ್ದ ವೈಖರಿ ಹಾಗಿತ್ತು.

ಬ್ಯಾಂಕ್‌ಗಳ ಹಗಲು ದರೋಡೆ

ಪ್ರಭಾವಿ ರಾಜಕಾರಣಿಗಳು ಮತ್ತು ಉದ್ಯಮಪತಿಗಳು ಬ್ಯಾಂಕ್ ಅಧಿಕಾರಿಗಳೊಂದಿಗೆ ಶಾಮೀಲಾಗಿ ಠೇವಣಿದಾರರ ಹಣವನ್ನು ಕೊಳ್ಳೆಹೊಡೆಯುತ್ತಿರುವುದು ಹೊಸದೇನಲ್ಲ. ಈಗ ಅದರ ಪ್ರಮಾಣ ಮಿತಿ ಮೀರಿದೆ. ಅಂಕಿ ಅಂಶಗಳು ನಿಖರವಾಗಿಲ್ಲ. ಏಕೆಂದರೆ, ಬ್ಯಾಂಕ್ ಬ್ಯಾಲೆನ್ಸ್‌ಶೀಟ್‌ಗಳನ್ನು ಪಾರ್ಲಿಮೆಂಟಿನಲ್ಲಿ ಚರ್ಚಿಸುವಂತಿಲ್ಲ. ವಸೂಲಾಗದ ಬ್ಯಾಂಕ್ ಸಾಲಗಳ ಬಗ್ಗೆ ಮಾಧ್ಯಮಗಳಲ್ಲಿ ಭಾರಿ ಚರ್ಚೆಗಳಾಗುತ್ತಿವೆ. ಬ್ಯಾಂಕ್ ವ್ಯವಹಾರಗಳಲ್ಲಿ ರಾಜಕೀಯ ಹಸ್ತಕ್ಷೇಪದ ಒಂದು ನಿದರ್ಶನವನ್ನು ಶೇಖರ್ ಗುಪ್ತಾ ಪ್ರಸ್ತಾಪಿಸಿರುವುದು ಹೀಗಿದೆ: ಬ್ಯಾಂಕ್ ಸಾಲ ಹಗರಣಗಳ ಕುರಿತು 2003ರಲ್ಲಿ ' ದಿ ಗ್ರೇಟ್ ಇಂಡಿಯನ್ ಬ್ಯಾಂಕ್ ರಾಬರಿ'ಶಿರೋನಾಮೆ ಹೊತ್ತ ಒಂದು ತನಿಖಾ ವರದಿಯ ಮೂವತ್ತಕ್ಕೂ ಹೆಚ್ಚು ಕಂತುಗಳ ಸರಣಿಯನ್ನು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಪ್ರಕಟಿಸಿತ್ತು. ಅದರಲ್ಲಿ ಅನೇಕ ಖ್ಯಾತ ವ್ಯಕ್ತಿಗಳ ಹೆಸರಿತ್ತು. ಅದು ಎನ್‌ಡಿಎ ಸರ್ಕಾರಕ್ಕೆ ಕಿರಿಕಿರಿ ಉಂಟುಮಾಡಿತ್ತು. ಒಂದು ದಿನ, ಅತ್ಯಂತ ಉನ್ನತ ಸ್ಥಾನದಲ್ಲಿದ್ದವರು ಕರೆ ಮಾಡಿ "ಇನ್ನೂ ಎಷ್ಟು ದಿನ ಈ ವರದಿ ಪ್ರಕಟಿಸುತ್ತೀರಿ, ಇಡೀ ವರ್ಷವೇ?" ಎಂದು ಕೇಳಿದ್ದರು. ಆಗ,"ಇಲ್ಲ ಅಟಲ್‌ಜಿ, ಐನೂರು ಕೋಟಿಗೂ ಮೀರಿದ ಬಾಕಿದಾರರ ಪಟ್ಟಿ ಇನ್ನು ಕೆಲವೇ ದಿನಗಳಲ್ಲಿ ಮುಗಿಯುತ್ತದೆ" ಎಂದು ಶೇಖರ್‌ಗುಪ್ತಾ ತಿಳಿಸಿದ್ದರಂತೆ. ಹಾಗಾದರೆ, 35 ಕೋಟಿ ಬಾಕಿ ಉಳಿಸಿಕೊಂಡಿರುವ ಬಾಲೂಜಿ (ಆಗ ಕೇಂದ್ರದಲ್ಲಿ ಮಂತ್ರಿಯಾಗಿದ್ದ ಟಿ ಆರ್. ಬಾಲು) ಹೆಸರನ್ನೇಕೆ ಸೇರಿಸಿದ್ದೀರಿ?ಎಂದು ಕೇಳಿದರಂತೆ. ಏಕೆಂದರೆ, ಅವರು ಒಬ್ಬ ಎಂ.ಪಿ ಮತ್ತು ಮಂತ್ರಿ, ಅವರಿಗೆ ಅಳತೆಗೋಲು ಕಡಿಮೆ ಇರಬೇಕು ಎಂದಿದ್ದರಂತೆ ಶೇಖರ್ ಗುಪ್ತಾ.

ಮಲ್ಯ ರಾಜ್ಯಸಭೆಗೆ ಹೋದದ್ದೇಕೆ?

ಈಗ, ಎಂ.ಪಿಗಳಿಗೆ ಅಳತೆಗೋಲೇ ಇಲ್ಲ. ರಾಜ್ಯಸಭೆಯ ಹಾಲಿ ಸದಸ್ಯ ವಿಜಯ್ ಮಲ್ಯ ಇದಕ್ಕೊಂದು ನಿದರ್ಶನ. ಮಲ್ಯ ಒಡೆತನದ 'ಕಿಂಗ್‌ಫಿಶರ್ ಏರ್‌ಲೈನ್ಸ್' ಹದಿನೇಳು ಸಾರ್ವಜನಿಕ ಬ್ಯಾಂಕ್‌ಗಳಿಗೆ ಸುಮಾರು 9000 ಕೋಟಿ ರೂಪಾಯಿಗಳ ಬಾಕಿ ಉಳಿಸಿಕೊಂಡಿದ್ದು ಉದ್ದೇಶಪೂರ್ವಕ ಸುಸ್ತಿದಾರನೆಂದು ಘೋಷಿಸಲಾಗಿದೆ. ಬ್ಯಾಂಕ್‌ಗಳು ಮೇಲೆ ಬಿದ್ದು ಸಾಲ ಕೊಟ್ಟಾಗಲೆ ಮಲ್ಯ ಅದನ್ನು ಹಿಂತಿರುಗಿಸುವುದಿಲ್ಲ ಎಂಬುದು ಸ್ಪಷ್ಟವಾಗಿತ್ತು. ಏಕೆಂದರೆ, ಪಡೆದ ಸಾಲ ಹಿಂತಿರುಗಿಸದಿರುವುದು ರಾಜಕಾರಣಿಗಳ ಮತ್ತು ಉದ್ಯಮಪತಿಗಳ ಜಾಯಮಾನ. ಈ ಎರಡೂ ಅರ್ಹತೆಗಳ ಜೊತೆಗೆ, ಮಲ್ಯ ತಮ್ಮ ಪ್ರಮುಖ ಉದ್ಯಮ ಕ್ಷೇತ್ರಗಳಿಗೆ ಸಂಬಂಧಿಸಿದ ಪಾರ್ಲಿಮೆಂಟಿನ ಸ್ಥಾಯಿ ಸಮಿತಿಗಳ ಸದಸ್ಯರಾಗಿದ್ದರು! ಮೊದಲ ಅವಧಿಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಎಂಎಲ್‌ಎಗಳು ಮಲ್ಯರಿಗೆ ವೋಟು ಹಾಕಿದ್ದರು. ಎರಡನೆ ಬಾರಿ ಬಿಜೆಪಿ ಮತ್ತು ಜೆಡಿಎಸ್ ಎಂಎಲ್‌ಎಗಳು ವೋಟು ಹಾಕಿದ್ದರು. ಪಕ್ಷಾತೀತ ಮಲ್ಯರನ್ನು ಈಗ ಕಾಂಗ್ರೆಸ್ ಮತ್ತು ಬಿಜೆಪಿ ಕೈ ಬಿಟ್ಟಿವೆ! ಜೆಡಿಎಸ್ ಮಾತ್ರ ನಿಷ್ಠೆ ಉಳಿಸಿಕೊಂಡಿದೆ!

ಸಾಲಗಾರ ಅಲ್ಲ, ಮನೆ ಇಲ್ಲ ಎಂದ ಮಲ್ಯ

2010ರಲ್ಲಿ ಎರಡನೆ ಬಾರಿಗೆ ರಾಜ್ಯ ಸಭೆಗೆ ಆಯ್ಕೆಯಾಗುವ ಸಂದರ್ಭದಲ್ಲಿ ತನ್ನ ಆಸ್ತಿಯ ವಿವರಗಳ ಬಗ್ಗೆ ಸಲ್ಲಿಸಿದ್ದ ಅಫಿಡವಿಟ್‌ನಲ್ಲಿ ತನಗೆ ಸಾಲವೂ ಇಲ್ಲ, ಮನೆಯೂ ಇಲ್ಲ ಹಾಗೂ ತನ್ನ ಸ್ವತ್ತಿನ ಮೌಲ್ಯ 615 ಕೋಟಿ ರೂ(ಬ್ಯಾಂಕ್ ಠೇವಣಿ 4.55 ಕೋಟಿ, ಆಭರಣ 4ಕೋಟಿ ಮತ್ತು ಬಾಂಡ್/ ಡಿಬೆಂಚರ್‌ಗಳಲ್ಲಿ 591 ಕೋಟಿ ಹೂಡಿಕೆ) ಎಂದು ಘೋಷಿಸಿದ್ದರು. ಸಾಲ ಕಿಂಗ್‌ಫಿಷರ್ ಏರ್‌ಲೈನ್ಸ್ ಹೆಸರಿನಲ್ಲಿದೆ! ಮನೆಗಳ ಒಡೆತನ ಕಂಪೆನಿಗಳ ಹೆಸರಿನಲ್ಲಿದೆ!

ಕಿಂಗ್‌ಫಿಷರ್ ಏರ್‌ಲೈನ್ಸ್ ಬ್ಯಾಂಕ್‌ಗಳಿಂದ ಪಡೆದ ಸಾಲ

ಬ್ಯಾಂಕ್	ಕೋಟಿ ರೂ
ಎಸ್‌ಬಿಐ	1600
ಐಡಿಬಿಐ	800
ಪಂಜಾಬ್ ನ್ಯಾಷನಲ್	800
ಬ್ಯಾಂಕ್ ಆಫ್ ಇಂಡಿಯಾ	650
ಬ್ಯಾಂಕ್ ಆಫ್ ಬರೋಡ	550
ಯುನೈಟೆಡ್ ಬ್ಯಾಂಕ್	430
ಸೆಂಟ್ರಲ್ ಬ್ಯಾಂಕ್	410
ಯೂಕೊ ಬ್ಯಾಂಕ್	320
ಕಾರ್ಪೋರೇಷನ್ ಬ್ಯಾಂಕ್	310
ಎಸ್‌ಬಿಎಂ	150
ಐಒಬಿ	140
ಫೆಡರಲ್ ಬ್ಯಾಂಕ್	60
ಪಂಜಾಬ್ & ಸಿಂದ್	60
ಆಕ್ಸಿಸ್ ಬ್ಯಾಂಕ್	50
3 ಬೇರೆ ಬ್ಯಾಂಕ್‌ಗಳು	603
ಒಟ್ಟು	**6963**

ಸಾಮ್ರಾಜ್ಯ ವಿಸ್ತರಣೆ

ವಿಜಯ್ ಮಲ್ಯರ ತಂದೆ ವಿಠ್ಠಲ ಮಲ್ಯ ಬಿಯರ್ ತಯಾರಿಸುವ ಯುನೈಟೆಡ್ ಬ್ರೆವರೀಸ್ ಕಂಪೆನಿ ಸ್ಥಾಪಿಸಿದ್ದರು. 1983ರಲ್ಲಿ ವಿಠ್ಠಲ ಮಲ್ಯರ ನಿಧನದ ನಂತರ, ವಿಜಯ್ ಮಲ್ಯ ಕಂಪೆನಿಯ ಅಧ್ಯಕ್ಷರಾದರು. ಆ ವೇಳೆಗಾಗಲೆ ಅದು ಬಿಯರ್ ಮಾರಾಟದಲ್ಲಿ ಮೇಲುಗೈ ಪಡೆದಿತ್ತು. ಆ ಯಶಸ್ಸಿನಿಂದ ಉತ್ತೇಜಿತರಾಗಿದ್ದ ವಿಜಯ್ ಮಲ್ಯ ಒಂದರಮೇಲೆ ಒಂದರಂತೆ, ರಾಯಲ್ ಚಾಲೆಂಜ್ ವಿಸ್ಕಿ ತಯಾರಿಸುತ್ತಿದ್ದ ಮನು ಛಾಬ್ರಿಯಾ ಒಡೆತನದ ಷಾ ವ್ಯಾಲ್ಲೇಸ್ ಕಂಪೆನಿ, ಬ್ಯಾಗ್ ಪೈಪರ್ ವಿಸ್ಕಿ ಮತ್ತು ರೊಮಾನೋವ್ ವೋಡ್ಕಾ ತಯಾರಿಸುತ್ತಿದ್ದ ಹರ್ಬರ್ಟನ್ಸ್ ಕಂಪೆನಿಗಳನ್ನು ಕೊಂಡರು. ರಿಯಲ್ ಎಸ್ಟೇಟ್, ರಸಗೊಬ್ಬರ, ಬರ್ಜರ್ ಪೇಂಟ್ಸ್, ಬೆಸ್ಟ್ ಅಂಡ್ ಕ್ರಾಂಪ್ಟನ್, ಏಷಿಯನ್ ಏಜ್(ಇಂಗ್ಲಿಷ್ ದಿನ ಪತ್ರಿಕೆ), ಸಿನೆ ಬ್ಲಿಟ್ಸ್ ಪತ್ರಿಕೆ, ವಿಜಯ್‌ಟಿ.ವಿ ಮುಂತಾದ 60 ಕಂಪೆನಿಗಳ ಮೇಲೆ ಹಿಡಿತ/ಒಡೆತನ ಹೊಂದಿದ್ದರು. ಬ್ಯಾಂಕ್ ಸಾಲಗಳು ಈ ಸಾಮ್ರಾಜ್ಯ ವಿಸ್ತರಣೆಗೆ ನೆರವಾದವು.

ವೈಭವದ ಜೀವನ ಶೈಲಿ

ತಿರುಗಾಡಲು ಕೋಟಿಗಟ್ಟಲೆ ಬೆಲೆ ಬಾಳುವ ಕಾರುಗಳು, ವಾಸ ಮಾಡಲು ಲಂಡನ್ ನಗರದ ಪ್ರತಿಷ್ಠಿತ ಪ್ರದೇಶದಲ್ಲಿ ಐಶಾರಾಮಿ ಬಂಗಲೆ, ಲಂಡನ್ ಹೊರವಲಯದಲ್ಲಿ 30 ಎಕರೆ ಜಾಗದಲ್ಲಿ ವೈಭವೋಪೇತ ರೆಸಾರ್ಟ್, ಗೋವಾದಲ್ಲಿ ಐಶಾರಾಮಿ ರೆಸಾರ್ಟ್‌ಗಳು ಇವೆ. ಇವೆಲ್ಲವನ್ನೂ ಮೀರಿಸುವಂತೆ ಬೆಂಗಳೂರಿನಲ್ಲಿ ಯುಬಿ ಸಿಟಿಯ ಒಡೆತನವಿದೆ.

ವಿಜಯ್ ಮಲ್ಯರ ಶೋಕಿಗಳು

ಐಪಿಎಲ್ ಕ್ರಿಕೆಟ್‌ನಲ್ಲಿ ರಾಯಲ್ ಚಾಲೆಂಜ್ ಟೀಂ ಒಡೆತನ, ಕಾರ್ ರೇಸಿಂಗ್‌ನಲ್ಲಿ ಎಫ್1 ಟೀಂ ಒಡೆತನ, ಫುಟ್‌ಬಾಲ್, ರೇಸ್ ಕುದುರೆ ಸಾಕುವ ಫಾರಂ ಮುಂತಾದ ಹವ್ಯಾಸಗಳಲ್ಲಿ ಮಲ್ಯ ಹಣ ಹರಿಸುತ್ತಿದ್ದರು. ನೂರು ಕೋಟಿ ರೂ ಚೆಲ್ಲಿ ಮಲ್ಯ ವೈಭವೋಪೇತವಾಗಿ ಹುಟ್ಟು ಹಬ್ಬ ಆಚರಿಸಿಕೊಂಡ ವರದಿಗಳು ಅಸಹ್ಯ ಹುಟ್ಟಿಸಿವೆ.

ಮಲ್ಯ ಹಾರಿಸಿದ ವಿಮಾನ ನೆಲಕ್ಕುರುಳಿತು

2005ರಲ್ಲಿ ಮಲ್ಯ 'ಕಿಂಗ್‌ಫಿಷರ್ ಏರ್‌ಲೈನ್ಸ್' ಆರಂಭಿಸಿದರು. ಅದು ಪೈಪೋಟಿಯ ಕಾಲ. ವಿಮಾನಗಳ ಹಾರಾಟ ನಡೆಸುವುದು ಬಹಳ ಕಷ್ಟವಿತ್ತು. ವಿಮಾನಯಾನದಲ್ಲಿ ವಿಶ್ವ ದರ್ಜೆಯ ಸೌಕರ್ಯಗಳನ್ನು ಪೈಪೋಟಿಯ ದರದಲ್ಲಿ ಒದಗಿಸಲು ಮಲ್ಯ ಹೆಣಗಿದರು. ಅಂತಾರಾಷ್ಟ್ರೀಯ ಹಾರಾಟಗಳನ್ನು ಆರಂಭಿಸುವ ಹುಚ್ಚಿನಲ್ಲಿ, ಕಾನೂನು ತೊಡಕುಗಳನ್ನು ತುಳಿದು, ಅಗ್ಗದ ದರಗಳಿಗೆ ಹೆಸರಾಗಿದ್ದ ಡೆಕ್ಕನ್ ಏರ್‌ವೇಸ್ ವಿಮಾನ ಸಂಸ್ಥೆಯನ್ನು ದುಬಾರಿ ಬೆಲೆಯಲ್ಲಿ ಕೊಂಡರು. ವಿಮಾನ ಪ್ರಯಾಣಿಕರನ್ನು ಮರುಳುಗೊಳಿಸುವ ಎಲ್ಲ ಟ್ರಿಕ್‌ಗಳನ್ನೂ ಬಳಸಿದರು. ಏರುತ್ತಿದ್ದ ತೈಲ ಬೆಲೆ, ತೆರಿಗೆಗಳು ಮತ್ತು ಪೈಪೋಟಿಯಿಂದಾಗಿ ನಷ್ಟ ವರ್ಷದಿಂದ ವರ್ಷಕ್ಕೆ ಸಾವಿರ ಕೋಟಿಗಟ್ಟಲೆ ಹೆಚ್ಚುತ್ತಾ ಹೋಯಿತು. ಸಾಲವೂ ಹೆಚ್ಚುತ್ತಿತ್ತು. ಕೆಲಸಮಾಡುವವರಿಗೆ ಸಂಬಳ ಕೊಡುವುದೂ ದುಸ್ತರವಾಯಿತು. ಈ ಹೊರೆಗಳನ್ನು ಹೊತ್ತು ಹಾರಲಾರದೆ ವಿಮಾನಗಳು ನೆಲದಲ್ಲೇ ಉಳಿದವು.

ಮಲ್ಯ ನೆರವಿಗೆ ಹದಿನೇಳು ಬ್ಯಾಂಕುಗಳ ಕೂಟ

7000ಕೋಟಿ ರೂ ದಾಟಿದ್ದ ಕಿಂಗ್‌ಫಿಷರ್ ಏರ್‌ಲೈನ್ಸ್‌ನ ಸಾಲಗಳು, ಕಂತು ಕಟ್ಟಲಾಗದೆ, 2009–10ರ ಹೊತ್ತಿಗೆ ಎನ್‌ಪಿಎಗಳಾದವು. ಆಗ, ಮುಳುಗುತ್ತಿದ್ದ ಸಂಸ್ಥೆಯನ್ನು ಬಚಾವ್ ಮಾಡಲು ಹದಿನೇಳು ಬ್ಯಾಂಕುಗಳು ಮುಂದೆ ಬಂದವು. ಎಂತಹ ಕರುಣಾ ಹೃದಯಿಗಳು! ಸಂಸ್ಥೆಯ ಸಾಲವನ್ನು ಮರು ವಿನ್ಯಾಸಗೊಳಿಸಿದವು. 1355 ಕೋಟಿ ರೂಗಳ ಸಾಲವನ್ನು ಕಿಂಗ್‌ಫಿಷರ್ ಏರ್‌ಲೈನ್ಸ್ ಸಂಸ್ಥೆಯ ಷೇರುಗಳನ್ನು ದುಬಾರಿ ದರದಲ್ಲಿ ಕೊಂಡು ಎಸ್‌ಬಿಐ ಲೆಕ್ಕ ಚುಕ್ತಾ ಮಾಡಿಕೊಂಡಿತು. ಹೊಸ ಸಾಲ ಕೊಡಲು ಬ್ಯಾಂಕ್‌ಗಳು ಮುಂದಾದವು. ಕಡಿಮೆ ಬಡ್ಡಿ ದರ, ಮರು ಪಾವತಿಯ ಅವಧಿ ಒಂಭತ್ತು ವರ್ಷಗಳಿಗೆ ವಿಸ್ತರಣೆ ಮತ್ತು ಅದರಲ್ಲಿ ಮೊದಲ ಎರಡು ವರ್ಷ ಮರುಪಾವತಿಯಿಂದ ವಿನಾಯತಿಯೊಂದಿಗೆ ಸುಮಾರು ಏಳು ಸಾವಿರ ಕೋಟಿ ರೂಗಳ ಹೊಸ ಸಾಲ ಮುಂಜೂರು ಮಾಡಿದವು. ಕಂಪೆನಿ ನಷ್ಟದಲ್ಲಿದ್ದರೂ ಮಲ್ಯ 2011 ಮತ್ತು 2012ರಲ್ಲಿ ವಾರ್ಷಿಕ 33.46 ಕೋಟಿ ಸಂಬಳ ಪಡೆದರು.

ವರ್ಷ	ಬ್ರ್ಯಾಂಡ್ ಮೌಲ್ಯ (ಕೋಟಿ ರೂ)	ಸಾಲದ ಮೊತ್ತ (ಕೋಟಿ ರೂ)
2009	4,111	4000
2012	3,008	7,000
2014	**6**	7,000

ಯಾವ ಆಧಾರದ ಮೇಲೆ ಸಾಲ ಕೊಟ್ಟರು?

ಕಿಂಗ್‌ಫಿಷರ್ ಏರ್‌ಲೈನ್ಸ್ ಸಂಸ್ಥೆಯ ಬ್ರ್ಯಾಂಡ್ ಮೌಲ್ಯವೇ ಒಂದು ಆಸ್ತಿ ಎಂದು ಪರಿಗಣಿಸಿ ಅದನ್ನು ಆಧಾರವಾಗಿ ಪಡೆದಿವೆ. ಮೂರುಕಾಸಿನ ಬೆಲೆಯಿಲ್ಲದ ಅದರ ಮೌಲ್ಯ 2009ರಲ್ಲಿ 4111 ಕೋಟಿರೂ ಎಂದು ಭಾವಿಸುವವರಿಗೆ ಏನು ಮಾಡಬೇಕು? ಬ್ರ್ಯಾಂಡ್ ಮೌಲ್ಯ, ಏರ್ ಕಂಡೀಷನರ್ಸ್, ಕಂಪ್ಯೂಟರ್ಸ್, ಪ್ರಿಂಟರ್ಸ್, ಕುರ್ಚಿ ಮೇಜು ಇಂತಹ ಚಿಲ್ಲರೆ ವಸ್ತುಗಳ ಆಧಾರದ ಮೇಲೆ ಸುಮಾರು 7000ಕೋಟಿ ರೂಗಳ ಸಾಲ ಕೊಟ್ಟಿರುವ ಬ್ಯಾಂಕ್‌ಗಳ ಈ ವ್ಯವಹಾರ ಅನುಮಾನವನ್ನೂ ಮತ್ತು ಗಾಬರಿಯನ್ನೂ ಹುಟ್ಟಿಸುತ್ತದೆ.

ಏರ್‌ಲೈನ್ಸ್ ಮುಗ್ಗರಿಸಲು ಕಾರಣವೇನು?

ಏರ್‌ಲೈನ್ಸ್ ಸಂಸ್ಥೆಯ ವ್ಯವಹಾರಗಳು ಮೋಸದಿಂದ ಕೂಡಿದ್ದವು. ಹಾರಾಡುತ್ತಿದ್ದ 64 ವಿಮಾನಗಳ ಪೈಕಿ 26 ವಿಮಾನಗಳನ್ನು ಕಂಪೆನಿಯು ಮಾರ್ಕೆಟ್ ದರದ ಎರಡರಷ್ಟು ಹಣ ಕೊಟ್ಟು ಲೀಸ್ ಮೇಲೆ ಅನುಮಾನಾಸ್ಪದ ಮೂಲಗಳಿಂದ (ಮಾರಿಷಸ್ ಮತ್ತು ಕೇಮನ್ ದ್ವೀಪಗಳಿಂದ) ಪಡೆದಿತ್ತು. ಸರಳವಾಗಿ ಹೇಳುವುದಾದರೆ ಈ ವ್ಯವಹಾರ ಅಕ್ರಮವಾಗಿ ಸಂಪಾದಿಸಿದ ಮೈಲಿಗೆ ಹಣವನ್ನು ಮಡಿಮಾಡಿಕೊಳ್ಳುವ ವಿಧಾನ. ಈ ಮಾರ್ಗವಾಗಿ ಬೃಹತ್ ಮೊತ್ತದ ಹಣ ವರ್ಗಾವಣೆಯಾಗಿದೆ. ಏರ್‌ಲೈನ್ಸ್ ಸಂಸ್ಥೆಯ ನಷ್ಟಗಳಿಗೆ ಇದು ಮುಖ್ಯವಾದ ಕಾರಣ.

ಗೋಲ್ಡನ್ ಈಗಲ್ ಟ್ರಸ್ಟ್

ಇಂತಹ ಅಕ್ರಮ ವ್ಯವಹಾರಗಳನ್ನು ನಡೆಸಲು ವಿಠ್ಠಲ ಮಲ್ಯರ ಕಾಲದಲ್ಲಿ 'ಗೋಲ್ಡನ್ ಈಗಲ್ ಟ್ರಸ್ಟ್' ಎಂಬ ಸಂಸ್ಥೆಯನ್ನು 'ಐಲ್ ಆಫ್ ಮ್ಯಾನ್' ಎಂಬ ತೆರಿಗೆ ತಾಣದಲ್ಲಿ ಸ್ಥಾಪಿಸಲಾಗಿತ್ತು. ಈ ಟ್ರಸ್ಟ್ ಮೂಲಕ ನಡೆದಿರುವ ವ್ಯವಹಾರಗಳಿಗೆ ಲೆಕ್ಕವೇ ಇಲ್ಲ. ಭಾರತದಿಂದ ಸಾಗಿಸಿದ ಕಪ್ಪುಹಣವನ್ನು ಅಮೆರಿಕ, ಕೆನಡಾ, ಬ್ರಿಟನ್, ಪನಾಮ ಮುಂತಾದ ದೇಶಗಳಲ್ಲಿ ಹೂಡಿಕೆ ಮಾಡಲು ಬಳಸಿಕೊಳ್ಳಲಾಗಿದೆ. ಭಾರತದಲ್ಲಿ ಉತ್ಪಾದಿಸಿದ ಮಾದಕ ದ್ರವ್ಯಗಳನ್ನು ವಿದೇಶಗಳಲ್ಲಿ ಈ ಟ್ರಸ್ಟ್ ವಿತರಣೆಮಾಡುತ್ತದೆ.

ತೆರಿಗೆ ವಂಚನೆ

ತನ್ನ ಉದ್ಯೋಗಿಗಳ ಸಂಬಳದಲ್ಲಿ ಮೂಲದಲ್ಲಿ ಕಡಿತ ಮಾಡಿದ ತೆರಿಗೆಯ ಬಾಬ್ತು 372 ಕೋಟಿ ರೂಗಳನ್ನು ಮತ್ತು ಸೇವಾ ತೆರಿಗೆಗಳ ಬಾಬ್ತು 115 ಕೋಟಿ ರೂಗಳನ್ನು ಸರ್ಕಾರಕ್ಕೆ ಪಾವತಿ ಮಾಡಿಲ್ಲ. ಇದು ಕ್ರಿಮಿನಲ್ ಅಪರಾಧ.

ಉದ್ಯೋಗಿಗಳಿಗೆ ಮೋಸ

ಉದ್ಯೋಗಿಗಳಿಗೆ ಎರಡು ವರ್ಷಗಳಿಂದ ಸಂಬಳ ಕೊಟ್ಟಿಲ್ಲ. ಅವರ ಭವಿಷ್ಯ ನಿಧಿ ಮತ್ತು ಗ್ರಾಚ್ಯುಟಿ ಹಣವನ್ನು ಬಾಕಿ ಉಳಿಸಿಕೊಂಡಿದೆ. ಅಕ್ರಮಗಳ

ಪುಟ 15 ಕ್ಕೆ

ರಾಜ್ಯಗಳ ಸುತ್ತ

ಆರ್. ರಾಮಕೃಷ್ಣ

ಪಶ್ಚಿಮ ಬಂಗಾಳ: ಲಂಚ ಮುಕ್ಕುವಾಗ ಸಿಕ್ಕಿಬಿದ್ದಿರುವ ತೃಣಮೂಲ ಸಂಸದರು, ಸಚಿವರು.



ಪಶ್ಚಿಮ ಬಂಗಾಳ ರಾಜ್ಯದಲ್ಲಿ ಮತ್ತೊಂದು ಮಹಾ ಭ್ರಷ್ಟ ಹಗರಣ ಬಯಲಾಗಿದೆ. 'ಶಾರದಾ ಚಿಟ್ ಫಂಡ್' ಇತ್ಯಾದಿ ಹಗರಣಗಳ ಮೂಲಕ ಮುಖಕ್ಕೆ ಕಳಂಕದ ಮಸಿ ಮೆತ್ತಿಕೊಂಡಿರುವ ಆಳುವ ತೃಣಮೂಲ ಕಾಂಗ್ರೆಸ್ ಪಕ್ಷದ ಮತ್ತಷ್ಟು ಮುಖಂಡರು ಸಂಸದರು, ಶಾಸಕರು ಈಗ ಹೊಸ ಹಗರಣದಲ್ಲಿ ಸಿಲುಕಿದ್ದಾರೆ.

'ನಾರದಾ ನ್ಯೂಸ್.ಕಾಂ.' ಎಂಬ ಸಂಸ್ಥೆಯು ಚೆನ್ನೈ ಮೂಲದ 'ಇಂಪೆಕ್ಸ್ ಕನ್ಸಲ್ಟೆನ್ಸಿ' ಎಂಬ– ವಾಸ್ತವಿಕವಾಗಿ ಅಸ್ತಿತ್ವದಲ್ಲಿ ಇಲ್ಲದ ಕಂಪನಿಯ ಹೆಸರಿನಲ್ಲಿ ತೃಣಮೂಲ ಸಂಸದರು, ಸಚಿವರು, ಶಾಸಕರನ್ನು ಭೇಟಿ ಮಾಡಿ ರಹಸ್ಯ ಕುಟುಕು ಕಾರ್ಯಾಚರಣೆ ನಡೆಸಿದೆ. ಸಂಸ್ಥೆಗೆ ಕಾನೂನು ಬಾಹಿರ ವಿಧಾನದಲ್ಲಿ ಅನುಕೂಲ ಮಾಡಿಕೊಡಲು ಸಂಸ್ಥೆಯ ಪರವಾಗಿ ತೃಣಮೂಲ ಪಕ್ಷದ ಮುಖಂಡರು ಶಾಸಕರು ಸಂಸದರು, ಸಚಿವರುಗಳನ್ನು ಭೇಟಿ ಮಾಡಿ ಕೋರಿಕೆ ಸಲ್ಲಿಸಿದೆ.

ತೃಣಮೂಲದ ಮುಖಂಡರು ಸಾರ್ವಜನಿಕ ಜೀವನದ ಕನಿಷ್ಠ ನೈತಿಕತೆಯನ್ನೂ ಗಾಳಿಗೆ ತೂರಿರುವ ಈ ಪ್ರಕರಣವನ್ನು ರಾಜ್ಯದ ಜನತೆ ವಿಷಾದದಿಂದ ನೋಡಬೇಕಾಗಿದೆ.

ಎರಡು ವರ್ಷಗಳ ಕಾಲದಿಂದ ಈ ರಹಸ್ಯ ಕಾರ್ಯಾಚರಣೆಯನ್ನು ನಡೆಸುತ್ತಾ ಬರಲಾಗಿದೆ ಎಂದೂ ಪಶ್ಚಿಮ ಬಂಗಾಳದಲ್ಲಿ ಈಗ ನಡೆಯುತ್ತಿರುವ ಚುನಾವಣೆಗೂ ಈ ರಹಸ್ಯ ಕಾರ್ಯಾಚರಣೆಗೂ ಯಾವ ಸಂಬಂಧವೂ ಇಲ್ಲ ಎಂದು ನಾರದ ಸಂಸ್ಥೆ ಹೇಳಿದೆ. ಆದರೆ ಚುನಾವಣೆಯ ಹೊಸ್ತಿಲಿನಲ್ಲಿರುವ ರಾಜ್ಯದ ರಾಜಕಾರಣದಲ್ಲಿ ಈ ಹಗರಣ ಸ್ಫೋಟಗೊಂಡಿರುವುದು ತನ್ನ ಪ್ರಭಾವ ಬೀರಿಯೇ ಬಿರುತ್ತದೆ.

ಪತ್ರಿಕೆಗಳು, ಟಿವಿಗಳು, ಸಮೂಹ ಮಾಧ್ಯಮಗಳಲ್ಲಿ, ಸಾಮಾಜಿಕ ಮಾಧ್ಯಮಗಳ ಮೂಲಕ ದೇಶದ ಮುಂದೆ ಬಟಾಬಯಲಾಗಿರುವ ವಿಡಿಯೋಗಳು ತೃಣಮೂಲ ಸಂಸದರು, ಸಚಿವರು, ಶಾಸಕರು ಖಾಸಗಿ ಕಂಪನಿಯೊಂದಕ್ಕೆ ಅನುಕೂಲ ಮಾಡಿಕೊಡಲು ಲಂಚವನ್ನು ಸ್ವೀಕರಿಸಿರುವುದು ಸ್ಪಷ್ಟವಾಗಿ ತೋರಿಸಿವೆ.

ಮಾಜಿ ಕೇಂದ್ರ ಸಚಿವ ತೃಣಮೂಲ ಪಕ್ಷದ ರಾಜ್ಯ ಉಪಾಧ್ಯಕ್ಷ ಮುಕುಲ್ ರಾಯ್ ತಾನು ಹಣವನ್ನು ತೆಗದುಕೊಳ್ಳುವುದಿಲ್ಲವೆಂದು ಹಣವನ್ನು 'ನಮ್ಮ ಎಸ್‌ಪಿ ಮಿರ್ಜಾ' ಅವರಿಗೆ ಅದನ್ನು ನೀಡಬೇಕೆಂದು ಸೂಚಿಸುವುದು ವಿಡಿಯೋದಲ್ಲಿ ಇದೆ. ಇಲ್ಲಿ 'ನನ್ನ ಎಸ್.ಪಿ.' ಎಂದರೆ ಬಧ್ವಾನ್ ಜಿಲ್ಲೆಯ ಮಾಜಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಚ್. ಅಹಮದ್ ಮಿರ್ಜಾ. ಹೀಗೆ ಮುಕುಲ್ ರಾಯ್ ಅವರ ಪಾಲಿಗೆ ಮಿರ್ಜಾ ಮೂಲಕ 20 ಲಕ್ಷಗಳು ರೂಪಾಯಿಗಳು ಸಲ್ಲಿಕೆಯಾಗಿವೆ. ಮಿರ್ಜಾಗೆ 5 ಲಕ್ಷ ರೂ. ಗಳು ಸಲ್ಲಿಕೆಯಾಗಿವೆ.

ಪಶ್ಚಿಮ ಬಂಗಾಳದ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಸುಬ್ರತೋ ಮುಖರ್ಜಿಗೆ 5 ಲಕ್ಷ ರೂ. ಸಂದಾಯವಾಗಿದೆ. ಮಾಜಿ ಕೇಂದ್ರ ಸಚಿವ ಸುಲ್ತಾನ್ ಅಹಮದ್‌ಗೆ 5 ಲಕ್ಷ, ಮಾಜಿ ಕೇಂದ್ರ ಮಂತ್ರಿ ಸುಗತ ರಾಯ್‌ಗೆ 5 ಲಕ್ಷ ಸಲ್ಲಿಕೆಯಾಗಿದೆ.

ತೃಣಮೂಲ ಪಕ್ಷದ ಯುವಜನ ಸಂಘಟನೆಯ ಅಧ್ಯಕ್ಷ ಮತ್ತು ಸಂಸದ ಸುವೆಂದು ಅಧಿಕಾರಿಗೆ 5 ಲಕ್ಷ ರೂ. ಸಂದಾಯವಾಗಿದ್ದರೆ, ತೃಣಮೂಲ ಸಂಸದರಾದ ಕಾಕೋಳಿ ಘೋಷ್ ಮತ್ತು ತೃಣಮೂಲ ಸಂಸದ ಪ್ರಸೂನ್ ಬ್ಯಾನರ್ಜಿ ಅವರು ತಲಾ 4 ಲಕ್ಷ ರೂಪಾಯಿ ಪಡೆದಿದ್ದಾರೆ.

ಇನ್ನು ಕೋಲ್ಕತ್ತಾ ಮೇಯರ್ ಸೋವೋನ್ ಚಟರ್ಜಿ 5 ಲಕ್ಷ ರೂ., ರಾಜ್ಯ ಸಾರಿಗೆ ಸಚಿವ ಮದನ್ ಮಿತ್ರ 5 ಲಕ್ಷ, ಶಾಸಕ ಇಕ್ಬಾಲ್ ಅಹಮದ್ 5 ಲಕ್ಷ, ನಗರಾಭಿವೃದ್ಧಿ ಸಚಿವ ಫರ್ಹಾದ್ ಹಕೀಂ 5 ಲಕ್ಷ ರೂಪಾಯಿಗಳನ್ನು ಪಡೆದಿದ್ದಾರೆ.

'ನಾರದಾ ನ್ಯೂಸ್.ಕಾಮ್' ಸಂಸ್ಥೆಯು ಒಟ್ಟಾರೆ 73 ಲಕ್ಷ ರೂಪಾಯಿಗಳ ಮೊತ್ತವನ್ನು ನೀಡಿರುವ ವಿಡಿಯೋಗಳನ್ನು ಬಿಡುಗಡೆ ಮಾಡಿದೆ. ಲಂಚದ ಹಣ ಪಡೆದವರಲ್ಲಿ ಮದನ್ ಮಿತ್ರ ಈಗಾಗಲೇ ಶಾರದಾ ಚಿಟ್ ಫಂಡ್ ಹಗರಣದ ಸಂಬಂಧ ಜೈಲಿನಲ್ಲಿದ್ದಾರೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಸಿಪಿಐ(ಎಂ) ಮತ್ತು ಎಡರಂಗಗಳು ಬಯಲಾದ ಹಗರಣದ ಬಗೆಗೆ ಸಮಗ್ರವಾದ–ತ್ವರಿತವಾದ ತನಿಖೆ ಆಗಬೇಕೆಂದು ಆಗ್ರಹಿಸಿವೆ.

ಕನಿಷ್ಠ ಐದು ಜನ ಸಂಸದರು ಲಂಚ ಪಡೆಯುವಾಗ ಕ್ಯಾಮರಾ ಕಣ್ಣಿಗೆ ಸಿಕ್ಕಿ ಬಿದ್ದಿದ್ದಾರೆ. ಹೀಗಾಗಿ ಸಂಸತ್ತಿನಲ್ಲಿ ಸಹ ಹಗರಣ ಮಾರ್ದನಿಸಿದೆ. ಸಿಪಿಐ(ಎಂ) ಸಂಸದರಾದ ಮಹಮದ್ ಸಲೀಂ ಅವರು ಪಾರ್ಲಿಮೆಂಟನಲ್ಲಿ ಈ ಬಗೆಗೆ ಮಾತನಾಡಿ ಈ ಪ್ರಕರಣದಿಂದ ಸಂಸತ್ತಿನ ಘನತೆಗೆ ಧಕ್ಕೆಯಾಗಿದೆ. ಇಂತಹ ಸಂಸದರೊಂದಿಗೆ ಸಂಸತ್ತಿನಲ್ಲಿ ಕುಳಿತುಕೊಳ್ಳಲು ನಾಚಿಕೆಯಾಗುತ್ತದೆ." ಎಂದು ಟೀಕಿಸಿದ್ದಾರೆ.

ತೃಣಮೂಲ ಸಂಸದರು ಅದು ನಕಲಿ ವಿಡಿಯೋ ಎಂದು ಹೇಳುತ್ತಿದ್ದರೂ ಅದನ್ನು ನಂಬುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ. ಬಿಜೆಪಿ ಪಕ್ಷವು ಸಂಸತ್ತಿನಲ್ಲಿ ಸೂಕ್ತ ತನಿಖೆಗೆ ಆಗ್ರಹಿಸಿದೆ.

ರಾಜ್ಯಸಭೆಯಲ್ಲಿ ಮಾತನಾಡಿದ ಸೀತಾರಾಮ್ ಯೆಚೂರಿಯವರು 'ತೃಣಮೂಲ ಪಕ್ಷ ಮತ್ತು ಬಿಜೆಪಿ ನಡುವೆ ಮ್ಯಾಚ್ ಫಿಕ್ಸಿಂಗ್ (ಒಳ ಒಪ್ಪಂದ) ಆಗಿದೆ. ಈ ಹಗರಣದ ಬಗೆಗೆ ಕೇಂದ್ರ ಎನ್‌ಡಿಎ ಏಕೆ ಯಾವುದೇ ಕ್ರಮವಹಿಸುತ್ತಿಲ್ಲ.' ಎಂದು ಪ್ರಶ್ನಿಸಿದರು. ಶಾರದಾ ಚಿಟ್ ಫಂಡ್ ಹಗರಣದಲ್ಲಿ ಕೇಂದ್ರ ಸರಕಾರ ವಿಚಾರಣೆಯನ್ನು ನಿಧಾನಗೊಳಿಸಿದೆ. ಎಂದ ಯೆಚೂರಿಯವರು, ಪ್ರಸ್ತುತ ಲಂಚ ಪ್ರಕರಣದ ಕುರಿತು ವಿಳಂಬವಿಲ್ಲದಂತೆ ಕ್ರಮವಹಿಸಬೇಕೆಂದು ಆಗ್ರಹಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ 'ಪರಿಬೋರ್ಥನ್' (ಪರಿವರ್ತನೆ) ತರುತ್ತೇನೆಂದು ಅಧಿಕಾರಕ್ಕೆ ಬಂದ ಮಮತ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್‌ವು 'ಈಗ ತೃಣಮೂಲಕ್ಕೆ ಪರ್ಯಾಯವಿಲ್ಲ' ಎಂದು ಪ್ರಚಾರ ನಡೆಸುತ್ತಿದೆ.

ಆದರೆ ಎಲ್ಲ ವಿಷಯಗಳಲ್ಲೂ ಗಂಟಲು ಹರಿದುಕೊಳ್ಳುವಂತೆ ಮಾತನಾಡುವ ಮಮತಾ ಬ್ಯಾನರ್ಜಿಯವರು ಹಗರಣದ ಬಗೆಗೆ ಹೆಚ್ಚು ಮಾತನಾಡದೇ ತಮ್ಮ ಪಕ್ಷದ ಇತರರನ್ನು 'ಪಕ್ಷದ ರಕ್ಷಣೆ'ಗೆ ಬಿಟ್ಟಿದ್ದಾರೆ ಎಂದು ರಾಜಕೀಯ ವಲಯದಲ್ಲಿ ಗಮನಿಸಲಾಗುತ್ತಿದೆ.

ಚುನಾವಣಾ ಆಯೋಗವು ಸಹ ಈ ಎಲ್ಲ ಬೆಳವಣಿಗೆಗಳನ್ನು ಗಮನಿಸುತ್ತಿರುವುದಾಗಿ ಹೇಳಿದೆ.

ಪಶ್ಚಿಮ ಬಂಗಾಳ ಮಾತ್ರವಲ್ಲ, ಇಡೀ ದೇಶಾದ್ಯಂತ ಈ ಹಗರಣ ದೊಡ್ಡ ಸುದ್ದಿಯಾಗಿದೆ. ರಾಜ್ಯದಲ್ಲಿಯೂ ದೊಡ್ಡ ಸುದ್ದಿಯಾಗಿದೆ.

ಪರಿವರ್ತನೆಯ ಹೆಸರಿನಲ್ಲಿ ಅಧಿಕಾರಕ್ಕೆ ಬಂದು ಬರೀ ಹಗರಣಗಳನ್ನೇ 'ಕೊಡುಗೆ'ಯಾಗಿ ಕೊಡುತ್ತಿರುವ ತೃಣಮೂಲವನ್ನು ತಿರಸ್ಕರಿಸಲು ರಾಜ್ಯದ ಜನತೆಗೆ ಒಂದು ಒಳ್ಳೆಯ ಅವಕಾಶ ದೊರೆತಿದೆ.

ತಮಿಳುನಾಡು: ಜಾತಿವಾದಕ್ಕೆ ದಲಿತ ಯುವಕನ ಬಲಿ

ಅದು ತಮಿಳು ನಾಡಿನ ತಿರುಪ್ಪೂರು ಜಿಲ್ಲೆಯ ಉದುಮಲೈಪೇಟೆ ಎಂಬ ಊರು. ವಿ. ಶಂಕರ್ 22 ವರ್ಷದ ದಲಿತ ಯುವಕ. ಕೌಸಲ್ಯ 19 ವರ್ಷದ ಯುವತಿ. ಇಬ್ಬರೂ ಪರಸ್ಪರ ಪ್ರೀತಿಸಿ ಮದುವೆಯಾಗಿದ್ದರು. ಯುವತಿ ಬಲಾಢ್ಯ ತೇವರ್ ಸಮುದಾಯಕ್ಕೆ ಸೇರಿದವಳು. ಹುಡುಗಿಯ ಕುಟುಂಬದವರಿಗೆ, ಮುಖ್ಯವಾಗಿ ಹುಡುಗಿಯ ಅಪ್ಪನಿಗೆ ಈ ಮದುವೆ ಇಷ್ಟವಿರಲಿಲ್ಲ. ಪ್ರೇಮಿಗಳನ್ನು ಬೇರೆ ಮಾಡಿ ಮಗಳನ್ನು ಒಮ್ಮೆ ಬಲವಂತದಿಂದ ಮನೆಗೆ ಕರೆದುಕೊಂಡು ಹೋಗಿ ಮನೆಯಲ್ಲಿ ಕೂಡಿ ಹಾಕಿದ್ರು.

ಮಾರ್ಚ್ 13, 2016 ಒಂದು ಕರಾಳ ಘಟನೆ ನಡೆದು ಹೋಯಿತು. ಆರು ಜನ ದುಷ್ಕರ್ಮಿಗಳು ಊರಿನ ಜನನಿಬಿಡ ರಸ್ತೆಯಲ್ಲೇ ಯುವ ದಂಪತಿಗಳ ಮೇಲೆ ಹಲ್ಲೆ ನಡೆಸಿದರು. ಶಂಕರ್‌ನನ್ನು ಇರಿದು ಕೊಂದೇ ಬಿಟ್ಟರು. ಕೌಸಲ್ಯ ಮೇಲೆ ಸಹ ಹಲ್ಲೆಯಾಗಿದೆ. ಆದರೆ ಆಕೆಯ ಪ್ರಾಣ ಉಳಿದಿದೆ. ಕೌಸಲ್ಯ ತನ್ನ ಪತಿಯ ಕೊಲೆಗೆ ತನ್ನ ಕುಟುಂಬದವರೇ ಹೊಣೆ ಎಂದು ಆರೋಪಿಸಿದ್ದಾಳೆ.


ತಮಿಳುನಾಡು ಬಹುದೊಡ್ಡ ಸಾಮಾಜಿಕ ಸುಧಾರಣಾ ಚಳುವಳಿಯನ್ನು ಕಂಡಿರುವ ರಾಜ್ಯ. ಅಂತಹ ರಾಜ್ಯದಲ್ಲಿ ಸಹ ಇಂದು ಜಾತಿವಾದಿ ಹಗೆತನ, ಅಸ್ಪೃಶ್ಯತೆಗಳ ವಿಕೃತಿ ತಲೆ ಎತ್ತಿ ನಿಂತಿದೆ.

ಹೆಣ್ಣು ತನ್ನ ಬಾಳಸಂಗಾತಿಯನ್ನು ತಾನೇ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು, ಜಾತಿ ಮೀರಿದ ಪ್ರೇಮವನ್ನು ಜಾತಿವಾದಿಗಳು ಒಪ್ಪಲಿಲ್ಲ.

ಶಂಕರ್ ಕುಟುಂಬಕ್ಕೆ ಮತ್ತು ಕೌಸಲ್ಯಗೆ ಸೂಕ್ತ ರಕ್ಷಣೆ ಮತ್ತು ನ್ಯಾಯ ಒದಗಿಸ ಬೇಕು. ಕೊಲೆಗಾರರನ್ನು ಶಿಕ್ಷಿಸಬೇಕು ಎಂದು ತಮಿಳುನಾಡಿನ ಎಡಪಕ್ಷಗಳು ಮತ್ತು ದಲಿತ ಸಂಘಟನೆಗಳು ಈ ಮರ್ಯಾದೆಗೇಡಿ ಹತ್ಯೆಯನ್ನು ಖಂಡಿಸಿ ವ್ಯಾಪಕ ಪ್ರತಿಭಟನೆಗಳನ್ನು ನಡೆಸಿವೆ. ಆಳುವ ಎಐಎಡಿಎಂಕೆ ಪಕ್ಷದ ಸರಕಾರ ಸಹ ಇದು ಎರಡು ಕುಟುಂಬಗಳ ನಡುವಿನ ಘರ್ಷಣೆ, ಜಾತಿವಾದಿ ಕೊಲೆ ಅಲ್ಲ ಎಂದು ಹೇಳುತ್ತಿದೆ. ಹತ್ತಿರ ಬಂದಿರುವ ವಿಧಾನ ಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ವಿವಿಧ ರಾಜಕೀಯ ಪಕ್ಷಗಳು ದಿಟ್ಟ ನ್ಯಾಯಬದ್ಧ ನಿಲುವು ತಳೆಯುವಲ್ಲಿ ಹಿಂಜರಿಯತ್ತಿವೆ.

'ಮರ್ಯಾದಾ ಹತ್ಯೆ'ಗಳನ್ನು ನಿಲ್ಲಿಸಲು ಪ್ರತ್ಯೇಕ ಕಾನೂನಿನ ಅಗತ್ಯವಿದೆ–ಸಿಪಿಐ(ಎಂ)

ಸಿಪಿಐ(ಎಂ) ಹಾಡು ಹಗಲಲ್ಲೇ ನಡೆದಿರುವ ಜಾತಿವಾದಿ ಕಗ್ಗೊಲೆಯನ್ನು ಮತ್ತು ಹಲ್ಲೆಯನ್ನು ತೀವ್ರವಾಗಿ ಖಂಡಿಸಿದೆ. ಇಂತಹ ಹತ್ಯೆಗಳು ರಾಜ್ಯದಲ್ಲಿ ಆಗಾಗ ನಡೆಯುತ್ತಿದ್ದರೂ ಎಐಎಡಿಎಂಕೆ ಸರಕಾರ ರಾಜ್ಯದಲ್ಲಿ 'ಮರ್ಯಾದಾ ಹತ್ಯೆಗಳು' ನಡೆಯುತ್ತಲೇ ಇಲ್ಲ ಎಂದು ಹೇಳುತ್ತಿದೆ. ಅವೀಗ ಕತ್ತಲ್ಲಿ ನಡೆಯುತ್ತಿಲ್ಲ, ಹಾಡುಹಗಲೇ, ನಡು ರಸ್ತೆಗಳಲ್ಲೇ ನಡೆಯುತ್ತಿವೆ. ಕೊಲೆಗಡುಕರು ಮಾರಕಾಸ್ತ್ರಗಳೊಂದಿಗೆ ಪರಾರಿಯಾಗುತ್ತಾರೆ.




ತಮಿಳುನಾಡು ಪ್ರಮುಖ ಸಾಮಾಜಿಕ ಸುಧಾರಣಾ ಚಳುವಳಿಗಳನ್ನು ಕಂಡಿರುವ ರಾಜ್ಯ. ಆದರೂ ಇತ್ತೀಚಿನ ದಿನಗಳಲ್ಲಿ ಇಂತಹ 'ಮರ್ಯಾದಾ ಹತ್ಯೆ'ಗಳು ಹೆಚ್ಚುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸಿರುವ ಸಿಪಿಐ(ಎಂ) ರಾಜ್ಯಸಮಿತಿ ಜಾತಿವಾದಿ ಶಕ್ತಿಗಳ ಹಿಂಸಾಚಾರ ಮತ್ತು ಪ್ರಚಾರಗಳಿಗೆ ಅವಕಾಶ ನೀಡಿರುವುದು, ಇಂತಹ ಕೊಲೆಗಡುಕರು ಶಿಕ್ಷೆಯಿಂದ ತಪ್ಪಿಸಿಕೊಂಡು ತಿರುಗಲು ಅವಕಾಶ ವಾಗಿರುವುದು ಇದಕ್ಕೆ ಕಾರಣ ಎಂದು ಅದು ಹೇಳಿದೆ.

ಈ ಟೊಳ್ಳು ಜಾತಿ ಗೌರವದ ವಿರುದ್ಧ, ಅಸ್ಪೃಶ್ಯತೆಯ ವಿರುದ್ಧ, ಮಹಿಳೆಯರು ತಮ್ಮ ಜೀವನ ಸಂಗಾತಿಯನ್ನು ಆಯ್ದುಕೊಳ್ಳುವದನ್ನು ತಡೆಯುವ ಪಿತೃಪ್ರಧಾನ ಶಕ್ತಿಗಳ: ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕಾದ ಅಗತ್ಯವನ್ನು ಈ ಘಟನೆ ಮತ್ತೊಮ್ಮೆ ಎತ್ತಿ ತೋರಿದೆ ಎಂದಿರುವ ಸಿಪಿಐ(ಎಂ) ಇಂತಹ ಕೊಲೆಗಳನ್ನು ತಡೆಯಲು ಪ್ರತ್ಯೇಕ ಕಾನೂನು ತರಬೇಕು ಎಂದು ಆಗ್ರಹಿಸಿದೆ. ವಿಧಾನ ಸಭೆಯಲ್ಲಿ ಸಿಪಿಐ(ಎಂ) ಶಾಸಕ ಎ.ಸೌಂದರರಾಜನ್ ಈ ಕುರಿತು ಖಾಸಗಿ ಸದಸ್ಯರ ಮಸೂದೆಯೊಮದನ್ನು ಮಂಡಿಸಿದ್ದರು. ಆದರೆ ರಾಜ್ಯ ಸರಕಾರ ಯಾವುದೇ ಕಾರಣ ಕೊಡದೆ ಅದನ್ನು ತಿರಸ್ಕರಿಸಿತು.

ಹೆಚ್ಚುತ್ತಿರುವ ಜಾತಿವಾದಿ ಪ್ರವೃತ್ತಿಯ ಬಗ್ಗೆ ಸರಕಾರದ ನಿಲುವೇನು ಎಂಬುದನ್ನು ಇದು ತೋರಿಸುತ್ತದೆ ಎಂದಿರುವ ಸಿಪಿಐ(ಎಂ) ರಾಜ್ಯಸಮಿತಿ ಸರಕಾರದ ಇಂತಹ ಜಾತಿವಾದಿ ನಿಲುವನ್ನು ಪ್ರತಿಭಟಿಸಬೇಕು ಎಂದು ರಾಜ್ಯದ ಪ್ರಜಾತಾಂತ್ರಿಕ ಮತ್ತು ಪ್ರತಿಶೀಲ ಶಕ್ತಿಗಳಿಗೆ ಕರೆ ನೀಡಿದೆ.

"ಬಾಂಗ್ಲಾದೇಶದ ವಿಮೋಚನೆಯಲ್ಲಿ ಭಾರತದ ಎಡಪಂಥಿಯರ ಪಾತ್ರ"



ಇತ್ತೀಚೆಗೆ (ಮಾರ್ಚ್ 5 ರಂದು) ಡಾಕ್ಕಾದಲ್ಲಿ ತುಂಬಿದ ಸಭೆಯಲ್ಲಿ ಇದು ವಿಶಿಷ್ಟ ವಿಚಾರ ಸಂಕಿರಣದ ವಿಷಯವಾಗಿತ್ತು. ಇದನ್ನು ಸಂಘಟಿಸಿದ್ದು ಬಾಂಗ್ಲಾದೇಶದ ವರ್ಕರ್ಸ್ ಪಾರ್ಟಿ. ಅದಲ್ಲದೆ ಬಾಂಗ್ಲಾದೇಶದ ಇತರ ಎಡಪಕ್ಷಗಳಾದ ಕಮ್ಯುನಿಸ್ಟ್ ಪಕ್ಷ, ಸೋಶಲಿಸ್ಟ್ ಪಾರ್ಟಿ, ನೇಶನಲ್ ಸೋಶಲಿಸ್ಟ್ ಪಾರ್ಟಿಯ ನಾಯಕರು, ಕಾರ್ಯಕರ್ತರು, ಬೆಂಬಲಿಗರು, ಎಡ ಬುದ್ಧಿಜೀವಿಗಳು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಆಳುವ ಅವಾಮಿ ಲೀಗ್ ನಾಯಕರು, 1952ರ ಚಾರಿತ್ರಿಕ ಭಾಷಾ ಚಳುವಳಿಯ ನಾಯಕರು ಬಾಗವಹಿಸಿದ್ದರು. ಸಭೆಯ ಅದ್ಯಕ್ಷತೆಯನ್ನು ಬಾಂಗ್ಲಾದೇಶದ ವರ್ಕರ್ಸ್ ಪಾರ್ಟಿಯ ಅಧ್ಯಕ್ಷ ಹಾಗೂ ನಾಗರಿಕ ವಿಮಾನಯಾನ ಮತ್ತು ಪ್ರವಾಸೋದ್ಯಮ ಮಂತ್ರಿ ರಶೀದ್ ಖಾನ್ ಮೆನನ್ ವಹಿಸಿದ್ದರು. ಸಿಪಿಐ(ಎಂ) ಪರವಾಗಿ ಪೊಲಿಟ್ ಬ್ಯುರೋ ಸದಸ್ಯ ಬಿಮಾನ್ ಬಸು ಮತ್ತು ಕೇಂದ್ರ ಸಮಿತಿ ಸದಸ್ಯ ಗೌತಮ್ ದಾಸ್ ವಿಶೇಷ ಅತಿಥಿಗಳಾಗಿದ್ದರು.

ಬಾಂಗ್ಲಾದೇಶದ ವಿಮೋಚನೆಯಲ್ಲಿ ಭಾರತದ ಎಡಪಕ್ಷಗಳು ಅದರಲ್ಲೂ ಸಿಪಿಐ(ಎಂ) ಪ್ರಮುಖ ಪಾತ್ರ ವಹಿಸಿತ್ತು. ಇದು ಬಾಂಗ್ಲಾದೇಶದಲ್ಲಿ ಬಹಳ ಜನರಿಗೆ ತಿಳಿದೂ ಇಲ್ಲ. ಅದರ ಮಹತ್ವವನ್ನು ಜನರಿಗೆ ತಿಳಿಸಲಾಗುತ್ತಿಲ್ಲ. ಈ ಕೊರತೆ ತುಂಬಲು ವರ್ಕರ್ಸ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಫಜಲ್ ಹುಸೇನ್ ಬಾದಶಾ ಸ್ವಾಗತಿಸುತ್ತಾ ಹೇಳಿದರು. ಬಾಂಗ್ಲಾದೇಶವನ್ನು ಹೊರಗಿನಿಂದ ಯಾರೂ ಬಂದು ಸೃಷ್ಟಿಸಿಲ್ಲ. ಬಾಂಗ್ಲಾದೇಶದ ವಿಮೋಚನಾ ಸಮರ ಅಲ್ಲಿನ ಜನತೆಯದೇ ಪಾಕಿಸ್ತಾನದ ದಮನಚಕ್ರ ಕೊನೆಗೊಳಿಸಿ ಅದರಿಂದ ಸ್ವಾತಂತ್ರ್ಯ ಪಡೆಯುವ ಸ್ವಯಂಸ್ಫೂರ್ತ ಹೋರಾಟವಾಗಿತ್ತು ಎಂದು ಬಿಮಾನ್ ಬಸು ವಿಚಾರ ಸಂಕಿರಣದಲ್ಲಿ ಮಾತನಾಡುತ್ತಾ ಹೇಳಿದರು. ಸಿಪಿಐ(ಎಂ) ಮತ್ತು ಎಡಪಕ್ಷಗಳು ಬಾಂಗ್ಲಾದೇಶದ ಜನತೆಯ ವಿಮೋಚನಾ ಹೋರಾಟ ಆರಂಭವಾದಂದಿನಿಂದ ಅವರ ಜತೆ ದೃಢವಾಗಿ ನಿಂತಿದ್ದರು. ಬಾಂಗ್ಲಾದೇಶದ ಸರಕಾರಕ್ಕೆ ಮಾನ್ಯತೆ ಕೊಡಬೇಕೆಂದು ಒತ್ತಾಯ ಹೇರಿತು. ಎರಡೂ ದೇಶಗಳಲ್ಲಿ ಈಗಿನ ಪರಿಸ್ಥಿತಿ ವಿವರಿಸಿ ಎರಡೂ ದೇಶಗಳ ಎಡಶಕ್ತಿಗಳು ಮೂಲಭೂತವಾದಿ ಶಕ್ತಿಗಳ ವಿರುದ್ಧ ಹೋರಾಡಬೇಕು ಎಂದು ಕರೆಯಿತ್ತರು.

ಡಿಸೆಂಬರ್ 7, 1970ರಲ್ಲಿ ನಡೆದ ಚುನಾವಣೆಗಳಲ್ಲಿ ಅವಾಮಿ ಲೀಗಿನ ನಾಯಕ ಶೇಖ್ ಮುಜಿಬುರ್ ರಹಮಾನ್ ನಿಚ್ಚಳ ಬಹುಮತ ಪಡೆದರೂ ಪಾಕಿಸ್ತಾನದ ಮಿಲಿಟರಿ ನಾಯಕರು ಅದನ್ನು ಗೌರವಿಸಲು ಸಿದ್ಧರಿರಲಿಲ್ಲ. ಬದಲಾಗಿ ಅವರು ಮಿಲಿಟರಿ ದಮನಕ್ಕೆ ತಯಾರಿ ನಡೆಸಿದರು. ಮಾರ್ಚ್ 7, 1971 ರಂದು ಶೇಖ್ ಮುಜಿಬುರ್ ರಹಮಾನ್ ಡಾಕಾದ ರ‍್ಯಾಲಿಯೊಂದರಲ್ಲಿ ವಿಮೋಚನಾ ಹೋರಾಟ ಆರಂಭಿಸಲು ಜನತೆಗೆ ಕರೆಯಿತ್ತರು. ಗೌತಮ್ ದಾಸ್ ವಿಚಾರ ಸಂಕಿರಣದಲ್ಲಿ ಮಾತನಾಡುತ್ತಾ ಮುಂದಿನ 9 ತಿಂಗಳಲ್ಲಿ ಬಾಂಗ್ಲಾ ಜನತೆಯ ವಿಮೋಚನಾ ಹೋರಾಟದ ಮುಖ್ಯ ಮಜಲುಗಳು ಮತ್ತು, ಸಿಪಿಐ(ಎಂ) ಹಾಗೂ ಎಡಪಕ್ಷಗಳು ವಹಿಸಿದ ಪಾತ್ರವನ್ನು ವಿವರವಾಗಿ ವಿವರಿಸಿದರು. ಅವರು ಗುರುತಿಸಿದ ಮುಖ್ಯ ಮಜಲುಗಳು ಮತ್ತು ಸಿಪಿಐ(ಎಂ) ಪಾತ್ರದ ಸ್ಥೂಲ ನೋಟ ಇಲ್ಲಿದೆ:

1971	ಬಾಂಗ್ಲಾ ದೇಶದಲ್ಲಿ	ಸಿಪಿಐ(ಎಂ)/ಎಡ ಪಕ್ಷಗಳ ಪಾತ್ರ
ಮಾರ್ಚ್	ಮಾರ್ಚ್ 7ರ ಮುಜಿಬುರ್ ಕರೆ ನಂತರ ಮುಷ್ಕರಗಳು, ಪ್ರದರ್ಶನಗಳು; ಮಿಲಿಟರಿಯಿಂದ ಗೋಳಿಬಾರು, ಕೊಲೆ ಆರಂಭ;	ಮಾರ್ಚ್ 16 ರಂದು ಸಿಪಿಐ(ಎಂ) ಪಿ.ಬಿ.ಹೇಳಿಕೆ ಮೂಲಕ ವಿಮೋಚನಾ ಹೋರಾಟಕ್ಕೆ ಬೆಂಬಲ ಘೋಷಣೆ; ಬೆಂಬಲ ಕೊಟ್ಟ ಮೊದಲ ಪಕ್ಷ
ಮಾರ್ಚ್ 25	ಡಾಕಾದಲ್ಲಿ ಮಿಲಿಟರಿಯಿಂದ ನರಮೇಧ, ಮುಜಿಬುರ್ ರಹಮಾನ್ ಬಂಧನ ನಂತರ ಭಾರತದ ಗಡಿ ಪ್ರಾಂತ್ಯಗಳತ್ತ ಬಾಂಗ್ಲಾ ಜನರ ವಲಸೆ;	ಮಾರ್ಚ್ 27 ರಂದು ಸಿಪಿಐ(ಎಂ) ಪಿ.ಬಿ. ಭಾರತ ಸರಕಾರ ಬಾಂಗ್ಲಾ ಜನತೆಯ ಹೋರಾಟಕ್ಕೆ ಎಲ್ಲಾ ರೀತಿಯ ಬೆಂಬಲ ಕೊಡಲು ಒತ್ತಾಯ; ಮುಜಿಬುರ್ ಸರಕಾರಕ್ಕೆ ಮಾನ್ಯತೆ ನೀಡಲು ಒತ್ತಾಯ ಮಾಡಿದ ಮೊದಲ ಪಕ್ಷ; ವಲಸೆ ಬಂದವರಿಗೆ ಗಡಿ ತೆರೆಯಲು ಒತ್ತಾಯಿಸಿ ತ್ರಿಪುರಾ ಬಂದ್;
ಎಪ್ರಿಲ್		ಎಪ್ರಿಲ್ 25 'ಬಾಂಗ್ಲಾದೇಶ ಸೌಹಾರ್ದ ದಿನ' ಆಚರಣೆಗೆ ಎಪ್ರಿಲ್ 9 ಸಭೆ ಸೇರಿದ ಸಿಪಿಐ(ಎಂ) ಪಿ.ಬಿ. ಕರೆ; ಬಾಂಗ್ಲಾದೇಶ ಮಾನ್ಯತೆಗೆ ಮತ್ತೆ ಒತ್ತಾಯ: ಜ್ಯೋತಿ ಬಸು ಅಧ್ಯಕ್ಷತೆಯಲ್ಲಿ "ಬಾಂಗ್ಲಾದೇಶ ಸೌಹಾರ್ದ ಮತ್ತು ಪರಿಹಾರ ನೆರವು ಸಮಿತಿ' ರಚನೆ; ನಿರಾಶ್ರಿತರಿಗೆ ನೆರವು ಸಾಮಗ್ರಿ ಸಂಗ್ರಹದಲ್ಲಿ ತೊಡಗಿಸಿಕೊಂಡ ಎಡ ಪಕ್ಷಗಳು; ಬಾಂಗ್ಲಾದೇಶದ ಎಡ ಪಕ್ಷಗಳ ಕಾರ್ಯಕರ್ತರಿಗೆ ತರಬೇತಿಗೆ ಬೆಂಬಲ ಮತ್ತು ಮುಕ್ತಿ ಬಾಹಿನಿ ಕಟ್ಟಲು ನೆರವು; ಮುಕ್ತಿ ಬಾಹಿನಿಗೆ ಮಿಲಿಟರಿ ನೆರವು ಕೊಡಲು ಸಿಪಿಐ(ಎಂ) ಒತ್ತಾಯ
ಜೂನ್	ತ್ರಿಪುರಾದಲ್ಲಿ ಬಾಂಗ್ಲಾ ನಿರಾಶ್ರಿತರ ಸಂಖ್ಯೆ ಸ್ಥಳೀಯರ ಸಂಖ್ಯೆಗಿಂತ ಹೆಚ್ಚು	ತ್ರಿಪುರಾದಲ್ಲಿನ ಬಾಂಗ್ಲಾ ನಿರಾಶ್ರಿತರ ಪ.ಬಂಗಾಳ ಸಮಿತಿಯಿಂದ ಪರಿಹಾರ ಸಾಮಗ್ರಿ, ವೈದ್ಯಕೀಯ ನೆರವು ತಂಡಗಳ ರವಾನೆ; ಗಡಿ ಪ್ರದೇಶದಲ್ಲಿ ಮುಕ್ತಿ ಬಾಹಿನಿ ಡಾಕ್ಟರುಗಳಿಗೆ ಕ್ಷೇತ್ರ ಆಸ್ಪತ್ರೆ ಕಟ್ಟಲು ನೆರವು
ಜುಲೈ	ಭಾರತ–ಬಾಂಗ್ಲಾದೇಶ ಗಡಿಗೆ ವೀಕ್ಷಕರನ್ನು ಕಳಿಸಿ ಪಾಕಿಸ್ತಾನ ಮಿಲಿಟರಿ ಸರಕಾರಕ್ಕೆ ವಿಮೋಚನಾ ಹೋರಾಟ ದಮನಿಸಲು ನೆರವು ನೀಡಲು ವಿಶ್ವಸಂಸ್ಥೆಯಲ್ಲಿ ಅಮೆರಿಕದ ಹುನ್ನಾರ	ಜುಲೈ 24, 1971 ರ ಸಿಪಿಐ(ಎಂ) ಪಿ ಬಿ ಹೇಳಿಕೆಯಲ್ಲಿ ಅಮೆರಿಕದ ಈ ಹುನ್ನಾರ ರಾಜಕೀಯ ಮಧ್ಯಪ್ರವೇಶ ಎಂದು ತಿರಸ್ಕರಿಸುವಂತೆ ಭಾರತ ಸರಕಾರಕ್ಕೆ ಒತ್ತಾಯ
ಅಗಸ್ಟ್	ಅಗಸ್ಟ್ 9ರಂದು ಭಾರತ–ಸೋವಿಯೆಟ್ ಸಹಕಾರ ಒಪ್ಪಂದ ಘೋಷಣೆ	ಅಗಸ್ಟ್ 11, 1971 ರ ಸಿಪಿಐ(ಎಂ) ಪಿ ಬಿ ಹೇಳಿಕೆಯಲ್ಲಿ ಭಾರತ–ಸೋವಿಯೆಟ್ ಸಹಕಾರ ಒಪ್ಪಂದಕ್ಕೆ ಸ್ವಾಗತ
ಸೆಪ್ಟೆಂಬರ್	ಪಾಕಿಸ್ತಾನದ ಚೌಕಟ್ಟಿನೊಳಗೆ ಬಾಂಗ್ಲಾ ಸಮಸ್ಯೆಗೆ ಪರಿಹಾರ ಕಾಣಲು ಭಾರತ–ಸೋವಿಯೆಟ್ ವಿದೇಶ ಮಂತ್ರಿಗಳ ಪ್ರಯತ್ನ.	ಬಾಂಗ್ಲಾದೇಶ ವಿಮೋಚನಾ ಹೋರಾಟ ನಿರ್ಣಾಯಕ ಹಂತದಲ್ಲಿರುವಾಗ ಭಾರತ–ಸೋವಿಯೆಟ್ ವಿದೇಶ ಮಂತ್ರಿಗಳ ಪ್ರಯತ್ನ ಮೋಸ ಘಾತಕ ಎಂದು ಅಕ್ಟೋಬರ್2, 1971 ರ ಸಿಪಿಐ(ಎಂ) ಪಿ ಬಿ ಹೇಳಿಕೆಯಲ್ಲಿ ಟೀಕೆ
ನವೆಂಬರ್	ಭಾರತ–ಪಾಕಿಸ್ತಾನದ ಗಡಿ ಪ್ರದೇಶದಲ್ಲಿ ಘರ್ಷಣೆಗಳು	ನವೆಂಬರ್ 19, 1971 ರ ಸಿಪಿಐ(ಎಂ) ಪಿ ಬಿ ಹೇಳಿಕೆಯಲ್ಲಿ
ಡಿಸೆಂಬರ್	ಡಿಸೆಂಬರ್ 4, 1971 ಭಾರತದ ಮೇಲೆ ಪಾಕ್ ಯುದ್ಧ ಘೋಷಣೆ ಡಿಸೆಂಬರ್ 16, 1971 ಭಾರತದ ಸೈನ್ಯ ಮತ್ತು ಮುಕ್ತಿ ಬಾಹಿನಿ ಮುಂದೆ ಪಾಕಿಸ್ತಾನದ ಸೈನ್ಯ	ಅದೇ ದಿನ ಸಿಪಿಐ(ಎಂ) ಪಿ ಬಿ ಹೇಳಿಕೆಯಲ್ಲಿ ಭಾರತದ ರಕ್ಷಣೆಗೆ ಐಕ್ಯ ಹೋರಾಟಕ್ಕೆ ಕರೆ; ಬಾಂಗ್ಲಾದೇಶ ಮಾನ್ಯತೆಗೆ ಭಾರತ ಸರಕಾರ ನಿರ್ಧಾರಕ್ಕೆ ಡಿಸೆಂಬರ್ 6, 1971 ರ ಸಿಪಿಐ(ಎಂ) ಪಿ ಬಿ ಹೇಳಿಕೆಯಲ್ಲಿ ಸ್ವಾಗತ; ಭಾರತ ಮಹಾಸಾಗರಕ್ಕೆ ಅಮೆರಿಕನ್ ಯುದ್ಧ ವ್ಯೂಹ ಕಳಿಸಿತು. ಅದನ್ನು ಖಂಡಿಸಿ ಡಿಸೆಂಬರ್ 14, 1971 ರ ಸಿಪಿಐ(ಎಂ) ಪಿ ಬಿ ಹೇಳಿಕೆ ಮತ್ತು ಭಾರಿ ಪ್ರದರ್ಶನಗಳು



ಪಂಗನಾಮ ಹಾಕಿ ಪರಾರಿ

ಪುಟ 13 ರಿಂದ

ವಿವರಗಳು ತನಿಖೆಯ ನಂತರ ಹೊರಬೀಳಲಿವೆ.

ಮಲ್ಯ ಪರ ದೇವೇಗೌಡರ ವಕಾಲತ್ತು

60 ದೊಡ್ಡ ಸುಸ್ತಿದಾರರಿಂದ ಸಾಲ ವಸೂಲಿಗೆ ಕ್ರಮ ಕೈಗೊಳ್ಳದ ಸರ್ಕಾರ ಮಲ್ಯರನ್ನು ಏಕೆ ಟಾರ್ಗೆಟ್ ಮಾಡುತ್ತಿದೆ ಎಂದು ಮಾಜಿ ಪ್ರಧಾನಿ ದೇವೇಗೌಡರು ಪ್ರಶ್ನೆ ಎತ್ತಿದ್ದಾರೆ. ರಾಜ್ಯಸಭೆಗೆ ಅವರ ಹತ್ತು ವರ್ಷಗಳ ಸೇವೆ ಮರೆಯುವಂತಿಲ್ಲ ಎಂದಿದ್ದಾರೆ.

ಏರ್ ಇಂಡಿಯಾ ನಷ್ಟ ಮತ್ತು ಮಲ್ಯ ವಂಚನೆ

ಶಿಕ್ಷಣ, ಆರೋಗ್ಯ ಸೇವೆ ಮತ್ತು ಹಣಕಾಸು ವ್ಯವಹಾರಗಳ ಸೇವೆಯಲ್ಲಿ ರಸದೌತಣ ಚಪ್ಪರಿಸು ಮಣಿಪಾಲ ಗುಂಪಿನ ಮೋಹನ್‌ದಾಸ್ ಪೈ ಮಾಧ್ಯಮ ಚರ್ಚೆಗಳಲ್ಲಿ ಮಲ್ಯರ ರಕ್ಷಣೆಗೆ ಧಾವಿಸಿದ್ದಾರೆ. ಪ್ರತಿಯೊಬ್ಬರೂ ಮಲ್ಯರನ್ನು ಪ್ರಶ್ನಿಸುತ್ತಿದ್ದಾರೆ. ಆದರೆ, ಏರ್ ಇಂಡಿಯಾ ಅನುಭವಿಸಿರುವ 30,000ಕೋಟಿ ರೂಗಳ ನಷ್ಟಕ್ಕೆ ಯಾರನ್ನೂ ಯಾಕೆ ಬಾಧ್ಯಸ್ತರನ್ನಾಗಿ ಮಾಡಿಲ್ಲ ಎಂದು ಅವರು ಪ್ರಶ್ನಿಸುತ್ತಾರೆ. ಹೊಣೆಗಾರಿಕೆಯ ಪ್ರಶ್ನೆ ಎತ್ತಿರುವುದು ಒಳ್ಳೆಯದೇ.

ಸರ್ಕಾರದ ಜವಾಬ್ದಾರಿ ಏನು?

ಕಿಂಗ್‌ಫಿಷರ್ ಪ್ರಕರಣ ವ್ಯವಸ್ಥೆಯ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಬ್ಯಾಂಕ್‌ಗಳ ನಿಯಂತ್ರಣ ಮಾಡುತ್ತಿರುವ ರಿಸರ್ವ್ ಬ್ಯಾಂಕಿನ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಮತ್ತು ವ್ಯವಸ್ಥೆ ಇಡಿಯಾಗಿ ಮಲ್ಯರೊಂದಿಗೆ ಶಾಮೀಲಾಗಿರುವುದನ್ನು ಬಯಲು ಮಾಡಿದೆ. ಪ್ರಧಾನ ಮಂತ್ರಿಗಳಾಗಿದ್ದವರು ತಮಗೆ ಬೇಕಾದವರನ್ನು ರಕ್ಷಿಸಲು ಮುಂದಾಗುವುದು ಸ್ಪಷ್ಟವಾಗಿದೆ. ದೇವೇಗೌಡರು ಪ್ರಸ್ತಾಪಿಸಿರುವ ದೊಡ್ಡ ಸುಸ್ತಿದಾರರ ಪಟ್ಟಿಯಲ್ಲಿ 25,000 ಕೋಟಿ ರೂಗಳಿಗೂ ಹೆಚ್ಚಿನ ಮೊತ್ತದ ಬಾಕಿ ಉಳಿಸಿಕೊಂಡಿವ ಅನೇಕ ಉದ್ಯಮಪತಿಗಳಲ್ಲಿ ಹಾಲಿ ಪ್ರಧಾನಿಗಳಿಗೆ ಆಪ್ತರಾಗಿರುವರೂ ಕೆಲವರಿದ್ದಾರೆ. ಅವರ ಮೌನ ಇವರಿಗೆ ರಕ್ಷಣೆ. ಹಾಗಾದರೆ, ಬ್ಯಾಂಕ್‌ಗಳನ್ನು ಉಳಿಸುವವರು ಯಾರು?

ಜನಶಕ್ತಿ
ಕನ್ನಡ ವಾರಪತ್ರಿಕೆ
janashakthi.co.in

ವೆಬ್ ಸೈಟಿನಲ್ಲಿ ಏನಿದೆ?

1. ಶಿಕ್ಷಣವೇ ಮಹಿಳೆಯ ದೊಡ್ಡ ಅಸ್ತ್ರ–ಶಶಿಕಲಾ ಹುಡೇದ
2. ಜನರಿಗೆ ಜಲಸಾಕ್ಷರತೆ ಕಲಿಸುವ ಅಗತ್ಯತೆ ಇದೆ– ಡಾ॥ಸಿದ್ದಲಿಂಗಯ್ಯ ಹೊಲತಾಳ್

ಪ್ರತಿಭಟನಾ ವರದಿಗಳು

3. ತುಮಕೂರಿನ ವಿನಾಯಕ ಸಿಎನ್‌ಸಿ ಕಾರ್ಮಿಕರ ಮುಂದುವರೆದ ಹೋರಾಟ
4. ಸಮಾನ ಹಕ್ಕು–ಸಮಾನ ಅವಕಾಶಕ್ಕಾಗಿ ಆಗ್ರಹ (ಬೆಂ.ಉತ್ತರ ಮಹಿಳಾ ದಿನಾಚರಣೆ ಕಾರ್ಯಕ್ರಮ)
5. ಪ್ರೀತಿ ಪದಗಳ ಕಾರ್ಯಕ್ರಮಕ್ಕೆ ನ್ಯಾ.ವಿ.ಗೋಪಾಲಗೌಡ ಅಗಮನ
6. ವಿದ್ಯುತ್ ಸಮಸ್ಯೆ ಬಗೆಹರಿಸಲು ಸಿಪಿಐ(ಎಂ) ಒತ್ತಾಯ – ತುಮಕೂರು
7. ಚಂದ್ರಪ್ರಸಾದ್ ತ್ಯಾಗಿರವರ ಬದುಕು, ಹೋರಾಟ ಮತ್ತು ದಲಿತರ ಮುಂದಿರುವ

ಸವಾಲುಗಳ ಕುರಿತು ಸಂವಾದ – ಹಾಸನ

8. ದಲಿತ ಹಕ್ಕುಗಳ ಸಮಿತಿ ಹೋರಾಟ –ಹುಣಸೂರು, ಮೈಸೂರು ಜಿಲ್ಲೆ
9. ರಸ್ತೆ ಹಾಗೂ ಬೆಳೆ ಹಾನಿ ರೈತರಿಂದ ಪ್ರತಿಭಟನೆ – ವಿಜಯಪುರ





ಸಾವಿರಾರು ಕೃಷಿ ಕೂಲಿಕಾರರ ಕೂಗು

“200 ದಿನ ಕೆಲಸ ಕೊಡಿ ರೂ. 300 ಕೂಲಿ ಕೊಡಿ”

ಕೇಂದ್ರ ರಾಜ್ಯ ಸರ್ಕಾರಗಳೆರಡೂ ಕೃಷಿ ಕೂಲಿಕಾರರ ಹಕ್ಕು ಹಾಗೂ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ. ಉದ್ಯಮಿಗಳ, ಬಂಡವಾಳ ಹೂಡಿಕೆದಾರರ ಪರವಾಗಿ ಸರಕಾರಗಳು ಕೆಲಸ ಮಾಡುತ್ತಿವೆ. ಬಡ ಕೃಷಿಕೂಲಿಕಾರರ ಕುರಿತು ಗಮನಹರಿಸುತ್ತಿಲ್ಲ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ತಿರುನಾವಕ್ಕರಸು ವಿಷಾಧಿಸಿದರು.

ನಗರದ ಫ್ರೀಡಂ ಪಾರ್ಕ್‌ನಲ್ಲಿ ನಾನಾ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮಾರ್ಚ್ 15 ರಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಹಮ್ಮಿಕೊಂಡಿದ್ದ ‘ವಿಧಾನಸೌಧ ಚಲೋ’ ದಲ್ಲಿ ಮಾತನಾಡಿದ ಅವರು, “ಕೇಂದ್ರ ಮತ್ತು ರಾಜ್ಯ ಸರಕಾರದಲ್ಲಿ ಆಳುತ್ತಿರುವ ಪಕ್ಷಗಳು ಬೇರೆ, ಆದರೆ ಕೃಷಿ ಕೂಲಿಕಾರರ ವಿಷಯದಲ್ಲಿ ಅವೆರಡರ ಧೋರಣೆ ಒಂದೇ ಆಗಿದೆ. ರಾಜ್ಯದಲ್ಲಿ ಸಮರ್ಪಕವಾಗಿ ಮಳೆಯಾಗದ ಪರಿಣಾಮ ಭೀಕರ ಬರಗಾಲ ಆವರಿಸಿದೆ. ಈ ಹಿನ್ನೆಲೆಯಲ್ಲಿ ಕೂಲಿಕಾರರು ಜೀವನ ನಿರ್ವಹಣೆಗಾಗಿ ಬಿಡಿಕಾಸಿಗೂ ಕಷ್ಟಪಡುವಂತಾಗಿದೆ. ಕೂಡಲೇ ಉದ್ಯೋಗ ಖಾತ್ರಿ ಯೋಜನೆಯಡಿ 200 ದಿನಗಳ ಕಾಲ ಕೆಲಸ ನೀಡಬೇಕು ಮತ್ತು ರೂ.300 ನಿಗದಿ ಮಾಡವಂತೆ ಒತ್ತಾಯಿಸಿದರು.

“ಪ್ರತಿವರ್ಷ ಬಜೆಟ್ ಪೂರ್ವದಲ್ಲಿ ಕೈಗಾರಿಕೋದ್ಯಮಿಗಳನ್ನು, ವರ್ತಕರ ಪ್ರತಿನಿಧಿಗಳನ್ನು ಸರಕಾರ ಚರ್ಚೆಗೆ ಆಹ್ವಾನಿಸುತ್ತದೆ. ಆದರೆ, ಅಂತಹ ಯಾವ ಚರ್ಚೆಗೂ ಕೃಷಿ ಕೂಲಿಕಾರರನ್ನು ಕ–ರೆದು ಅವರ ಸಮಸ್ಯೆಗಳನ್ನು ತಿಳಿಯುವ ಪ್ರಯತ್ನ ಮಾಡುವುದಿಲ್ಲ. ಕೃಷಿ ಕೂಲಿಕಾರರ ಕುಟುಂಬಗಳಿಗೆ ಯಾವುದೇ ಷರತ್ತು ವಿಧಿಸದೆ ಬಿಪಿಎಲ್ ಕಾರ್ಡ್ ವಿತರಿಸಬೇಕು. ಯೂನಿಟ್ ಪದ್ಧತಿ ಕೈಬಿಟ್ಟು ಈ ಮೊದಲು ನೀಡುತ್ತಿದ್ದ ರೀತಿಯಲ್ಲಿ 30 ಕೆ.ಜಿ. ಅಕ್ಕಿ ವಿತರಿಸಬೇಕು. ಬೇಳೆ, ಎಣ್ಣೆ, ಸಕ್ಕರೆಯನ್ನು ರಿಯಾಯಿತಿ ದರದಲ್ಲಿ ನೀಡಬೇಕು. ಉಚಿತ ವಿದ್ಯುತ್ ನೀಡಬೇಕು. ಉಪಕಸುಬುಗಳನ್ನು ಕೈಗೊಳ್ಳಲು ಶೇ.1ರ ಬಡ್ಡಿ ದರದಲ್ಲಿ ಸಬ್ಸಿಡಿ ಸಹಿತ ಸಾಲ ಒದಗಿಸುವಂತೆ ಮನವಿ ಮಾಡಿದರು.

ಪ್ರತಿಭಟನಾ ಸಭೆಯಲ್ಲಿ ಸಂಘದ ರಾಜ್ಯ ಅ ಧ್ಯಕ್ಷರಾದ ನಿತ್ಯಾನಂದ ಸ್ವಾಮಿ ಮಾತನಾಡಿ, “ಕೇರಳ, ತ್ರಿಪುರ, ತಮಿಳುನಾಡು ಮತ್ತಿತರ ರಾಜ್ಯಗಳ ಮಾದರಿಯಲ್ಲಿ ರಾಜ್ಯದ ಕೃಷಿ ಕೂಲಿಕಾರರಿಗೆ ಹಾಗೂ ಗ್ರಾಮೀಣ ಕೆಲಸಗಾರರಿಗೆ ಸಾಮಾಜಿಕ ಭದ್ರತೆಯ ಸೌಲಭ್ಯವನ್ನು ಖಾತರಿಪಡಿಸುವ ಸಮಗ್ರ ಶಾಸನವೊಂದನ್ನು ರೂಪಿಸುವ ವಾಗ್ದಾನವನ್ನು ಮುಂಬರುವ ಬಜೆಟ್‌ನಲ್ಲಿ ಘೋಷಿಸಬೇಕು,” ಎಂದು ಒತ್ತಾಯಿಸಿದರು.

ಗಂಗಾವತಿ ತಾಲೂಕಿನ ಮರಕುಂಬಿ ಗ್ರಾಮದಲ್ಲಿನ ದೌರ್ಜನ್ಯ ಹಾಗೂ ಬಹಿಷ್ಕಾರಕ್ಕೆ ಒಳಗಾಗಿರುವ ಎಲ್ಲ ದಲಿತ ಕುಟುಂಬಗಳಿಗೆ ಪರಿಹಾರ ಹಾಗೂ ಕೊಲೆಯಾಗಿರುವ ದಲಿತ ವೀರೇಶಪ್ಪ ಕುಟುಂಬಕ್ಕೆ ರೂ. 1 ಲಕ್ಷ ಪರಿಹಾರ ವಿತರಿಸಬೇಕು. ಬಗರ್‌ಹುಕುಂ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸುವ ಕ್ರಮವನ್ನು ಬಜೆಟ್‌ನಲ್ಲಿ ಘೋಷಿಸಬೇಕು. ಎಕರೆಯೊಳಗಿನ ಭೂ ರಹಿತ ಬಗರ್‌ಹುಕುಂ ಸಾಗುವಳಿದಾರರನ್ನು ಕಂದಾಯ ಅಥವಾ ಅರಣ್ಯ ಭೂಮಿಯೆಂದು ಒಕ್ಕಲೆಬ್ಬಿಸದಂತೆ ಆಗ್ರಹಿಸಿದರು.

ನಗರದ ರೈಲ್ವೇ ನಿಲ್ದಾಣದಿಂದ ‘ವಿಧಾನಸೌಧ ಚಲೋ’ ಪ್ರತಿಭಟನಾ ಮೆರವಣಿಗೆ ಮೂಲಕ ಫ್ರೀಡಂ ಪಾರ್ಕ್ ತಲುಪಿ ಅಲ್ಲಿ ಸಭೆ ನಡೆಸಲಾಯಿತು. ಮೆರವಣಿಗೆಯ ಸಂದರ್ಭದಲ್ಲಿ ಕೃಷಿ ಕೂಲಿ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಜೋರಾಗಿ ಕೂಗುತ್ತಾ ಹೆಜ್ಜೆ ಹಾಕಿದರು.

ಪ್ರತಿಭಟನೆಯಲ್ಲಿ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್. ನಾಗರಾಜ್, ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಸೇರಿದಂತೆ ಸಾವಿರಾರು ಕೂಲಿಕಾರರು ಪಾಲ್ಗೊಂಡಿದ್ದರು.

ಪ್ರತಿಭಟನೆ ನಂತರದಲ್ಲಿ ರಾಜ್ಯದ ಸಮಾಜ ಕಲ್ಯಾಣ ಸಚಿವರಾದ ಹೆಚ್. ಆಂಜನೇಯರವರನ್ನು ಭೇಟಿ ಮಾಡಿದ ಮುಖಂಡರು ಮನವಿ ಸಲ್ಲಿಸಿದರು.





ಗಂಭೀರವಾಗಿರುವ ಕೃಷಿ ಬಿಕ್ಕಟ್ಟಿನ ಪರಿಹಾರಕ್ಕಾಗಿ ರೈತರ ಪ್ರತಿಭಟನೆ

ರಾಜ್ಯದ ಕೃಷಿಯಲ್ಲಿನ ಗಂಭೀರವಾದ ಬಿಕ್ಕಟ್ಟನ್ನು ಪರಿಹರಿಸಬೇಕು, ರಾಜ್ಯ ಬಜೆಟ್‌ನಲ್ಲಿ ರೈತರ ಸಮಸ್ಯೆಗಳನ್ನು ಪರಿಗಣಿಸಬೇಕು ಎಂದು ಆಗ್ರಹಿಸಿ ಕರ್ನಾಟನ ಪ್ರಾಂತ ರೈತ ಸಂಘ(ಕೆ.ಪಿ.ಆರ್. ಎಸ್.) ವತಿಯಿಂದ ರಾಜ್ಯ ವಿವಿದ ಜಿಲ್ಲೆಗಳಲಿ, ತಾಲೂಕುಗಳಲ್ಲಿ ಪ್ರತಿಭಟನೆ ನಡೆಸಲಾಯಿತು. ಮುಖ್ಯಮಂತ್ರಿಗಳಿಗೆ ರೈತರ ಪತ್ರವನ್ನು (ಈ ಪತ್ರವನ್ನು ಜನಶಕ್ತಿಯ ಕಳೆದ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ) ಸಂಬಂಧ ಪಟ್ಟ ಅಧಿಕಾರಿಗಳ (ಡಿ.ಸಿ., ತಹಸಿಲ್ದಾರ್) ಮೂಲಕ ಸಲ್ಲಿಸಲಾಯಿತು.

ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನಲ್ಲಿ ಉಪ ತಹಶೀಲ್ದಾರ್ ಕಛೇರಿದುರು ಪ್ರತಿಭಟನೆ ನಡೆಸಿದ ರೈತರು ಮುಖ್ಯಮಂತ್ರಿಗಳಿಗೆ ಉಪ ತಶೀಲ್ದಾರ್ ಮೂಲಕ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ರಾಮಣ್ಣ ಶಿರೇಗೋಳ, ಸಹಕಾರ್ಯದರ್ಶಿ ಪುಂಡಲಿಕ ಹದಿಗನೂರ, ಉಪಾಧ್ಯಕ್ಷ ರಾಮಚಂದ್ರ ರೂಢಗಿ, ಬಾಬುಸಾಹೇಬ ಗಡೆದ, ಮಲ್ಲಯ್ಯ ಮಠಪತಿ, ಸಿದ್ಧಪ್ಪ ಅಳಗುಂಡಗಿ, ಹುಸೇನಿ ಕೋಲಾರ, ಪವಾಡೆಪ್ಪ, ಪ್ರಭು, ಗುರುಲಿಂಗ ಶಿರಶ್ಯಾಡ ಮುಂತಾದವರು ಸೇರಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಮನವಿ ಸಲ್ಲಿಸಿದರು.

ಹಾಸನ ಜಿಲ್ಲೆಯಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಜಿಲ್ಲಾ ಅಧ್ಯಕ್ಷರಾದ ಹೆಚ್.ಆರ್.ನವೀನ್ ಕುಮಾರ್, ಪ್ರಧಾನ ಕಾರ್ಯದರ್ಶಿ ವಸಂತಕುಮಾರ್ ಮತ್ತಿತರ ಮುಖಂಡರು ಭಾಗವಹಿಸಿದ್ದರು.

ರಾಯಚೂರು ಜಿಲ್ಲೆಯ ದೇವದುರ್ಗ, ಕೊಪ್ಪಳ ಜಿಲ್ಲೆಯ ಗಂಗಾವತಿ, ಕೋಲಾರ, ಸೇರಿದಂತೆ ರಾಜ್ಯದ ವಿವಿದೆಡೆ ಪ್ರತಿಭಟನೆಗಳು ಪ್ರತಿಭಟನೆಗಳು ನಡೆದಿವೆ.



ಈ ವಾರ ಚರಿತ್ರೆಯಲ್ಲಿ

ಮಾರ್ಚ್ 20 1927
ಚಾರಿತ್ರಿಕ ಮಹಾಡ್ ಸತ್ಯಾಗ್ರಹ

ಡಾ. ಅಂಬೇಡ್ಕರ್ ಅವರು ಸ್ಥಾಪಿಸಿದ ಬಹಿಷ್ಕೃತ ಹಿತಕಾರಿಣಿ ಸಭಾ 1927ರ ಮಾರ್ಚ್ 19–20 ರಂದು ಮಹಾಡ್ (ಈಗಿನ ರಾಯಗಡ ಜಿಲ್ಲೆಯ) ಎಂಬಲ್ಲಿ ಒಂದು ಸಮಾವೇಶ ಏರ್ಪಡಿಸಿತ್ತು. ಅದನ್ನು ಆಗ ತಾನೇ ಮಹಾಡ್ ಮುನಿಸಿಪಲ್ ಮಂಡಳಿ ಸಾರ್ವಜನಿಕ ಕೆರೆಗಳಲ್ಲಿ ದಲಿತರು ನೀರು ತೆಗೆದುಕೊಳ್ಳಲು ಯಾರೂ ನಿರ್ಬಂಧ ಹಾಕಬಾರದು ಎಂದು ನಿರ್ಣಯಿಸಿತ್ತು. ಅದನ್ನು ಜಾರಿಗೆ ತರಲು ಸಮಾವೇಶ ನಿರ್ಧರಿಸಿತು. ಸಮಾವೇಶಕ್ಕೆ ಬಂದಿದ್ದ ಮತ್ತು ಸ್ಥಳೀಯ ಸಾವಿರಕ್ಕೂ ಹೆಚ್ಚು ದಲಿತರು ಕೆರೆಯ ನೀರು ಕುಡಿದರು. ಡಾ. ಅಂಬೇಡ್ಕರ್ ನೇತೃತ್ವದಲ್ಲಿ ದಲಿತರು ದೇವಾಲಯ ಪ್ರವೇಶಕ್ಕೆ ಹೋಗುತ್ತಿದ್ದಾರೆ ಎಂಬ ಸುದ್ದಿ ಹರಡಿ ಸವರ್ಣೀಯರು ದಂಗೆ ಆರಂಭಿಸಿದರು. ದಲಿತರು ನೀರು ಕುಡಿದು ಕೆರೆ ಮೈಲಿಗೆ ಮಾಡಿದ್ದಾರೆಂದು ಸವರ್ಣೀಯರು ಶುದ್ಧಿ ಮಾಡಿದರು. ಡಿಸೆಂಬರ್ 26–27ರಂದು ಎರಡನೇ ಸಮಾವೇಶ ಸಂಘಟಿಸಲಾಯಿತು. ಆದರೆ ಕೆರೆ ಖಾಸಗಿ ಎಂದು ಹೇಳಿ ಸವರ್ಣೀಯರು ಕೇಸು ದಾಖಲಿಸಿ ಆ ಚಳುವಳಿ ಕೆರೆ ನೀರು ಬಳಸುವ ಸತ್ಯಾಗ್ರಹ ಮುಂದುವರೆಯದಂತೆ ಮಾಡಿದರು. ಆದರೆ ಅದಕ್ಕೆ ಪ್ರತಿಭಟನಾರ್ಥವಾಗಿ ಡಿಸೆಂಬರ್ 25ರಂದು ಮನುಸ್ಮೃತಿ ಸುಡುವ ಕಾರ್ಯಕ್ರಮ ಹಾಕಿಕೊಳ್ಳಲಾಯಿತು. ಇವೆರಡೂ ಸಮ್ಮೇಳನಗಳು ಮಹಾರಾಷ್ಟ್ರ ಮತ್ತು ದೇಶದಲ್ಲಿ ಸಾಮಾಜಿಕ ಅರಿವು ಮತ್ತು ದಲಿತರ ಚಳುವಳಿಯ ಪ್ರಮುಖ ಮೈಲಿಗಲ್ಲಿಗಳಾದವು.

ಇವೆರಡೂ ಸಮಾವೇಶಗಳನ್ನು ಸಂಘಟಿಸಿದ್ದು ರಾಮಚಂದ್ರ ಭಾಬಾಜಿ ಮೋರೆ. ಅವರು ಸ್ವತಃ (ಮಹಾರ್ ಜಾತಿಗೆ ಸೇರಿದ್ದ) ದಲಿತರಾಗಿದ್ದು ಡಾ. ಅಂಬೇಡ್ಕರ್ ಅವರ ಅಭಿಮಾನಿಗಳೂ ಸಹಚರರೂ ಆಗಿದ್ದರು. 1930ರಲ್ಲಿ ಅವರು ಕಮ್ಯುನಿಸ್ಟ್ ಚಳುವಳಿ ಸೇರಿ ದಶಕಗಳ ಕಾಲ ದುಡಿದರು. ಅವರು ಡಾ. ಅಂಬೇಡ್ಕರ್ ಅವರ ಕೊನೆಗಾಲದ ವರೆಗೂ ಸಹಚರರಾಗಿದ್ದರು. ಮೋರೆ 1972ರಲ್ಲಿ ಅವರ ನಿಧನದ ವರೆಗೂ ಸಿಪಿಐ(ಎಂ) ನಾಯಕರಾಗಿದ್ದರು.



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**